ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೨೩

**ಪಟ್ಟಿ – ೧೧**

# ಕರ್ನಾಟಕ ವಿಧಾನ ಪರಿಷತ್ತು

ನೂರ ಮೂವತ್ತನೆಯ ಅಧಿವೇಶನ
(ಮುಂದುವರೆದ ಉಪವೇಶನ)

ಬುಧವಾರ, ದಿನಾಂಕ : ೩೦ನೇ ಮಾರ್ಚ್, ೨೦೧೬

---

## ಸಮೂಹ – III

೧. ಅರಣ್ಯ ಸಚಿವರು

೨. ಕಂದಾಯ ಸಚಿವರು

೩. ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು

೪. ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

೫. ಸಣ್ಣ ನೀರಾವರಿ ಸಚಿವರು

೬. ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು

೭. ಕಾರ್ಮಿಕ ರಾಜ್ಯ ಸಚಿವರು

---

## ಅನುದಾನಿತ ಐ.ಟಿ.ಐ ಕಾಲೇಜುಗಳ ಸಿಬ್ಬಂದಿಗಳ ವೇತನದ ಕುರಿತು

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) :–**

೧೮೯೪ (೧೩೨೬) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಅನುದಾನಿತ ಐ.ಟಿ.ಐ ಕಾಲೇಜುಗಳ ಸಿಬ್ಬಂದಿಗಳ ವೇತನ ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ಆಗುತ್ತಿದೆಯೇ ;

(ಆ) ಇವರ ವೇತನ ಬಟವಾಡೆಯನ್ನು ಹೇಗೆ ಮಾಡಲಾಗುತ್ತಿದೆ ;

(ಇ) ಇವರುಗಳ ಅರಿಯರ್ಸ್, ಸರೆಂಡರ್, ವೈದ್ಯಕೀಯ ವೆಚ್ಚ ಮರುಪಾವತಿ ಇತ್ಯಾದಿಗಳನ್ನು ಸಮಯಕ್ಕೆ ಸರಿಯಾಗಿ ಮಾಡಲಾಗುತ್ತಿದೆಯೇ ; ಈ ನಿಟ್ಟಿನಲ್ಲಿ ಅಳವಡಿಸಿಕೊಂಡಿರುವ ನಿಯಮಗಳೇನು ; ೨೦೧೫/೧೬ರ ಬಾಬ್ತಿನಲ್ಲಿ ಹಣ ಸಂದಾಯವಾಗಿದೆಯೇ ? (ವಿವರ ನೀಡುವುದು)

## ೨೦೧೩–೧೪ ರಿಂದ ೨೦೧೫–೧೬ರವರೆಗೆ ಜಲಸಂಪನ್ಮೂಲ ಇಲಾಖೆಗೆ ಒದಗಿಸಿದ ಅನುದಾನ ಬಗ್ಗೆ

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) :–**

೧೮೯೫ (೧೩೨೭) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೩–೧೪ ರಿಂದ ೨೦೧೫–೧೬ರವರೆಗೆ ಜಲಸಂಪನ್ಮೂಲ ಇಲಾಖೆಗೆ ಹಂಚಿಕೆಯಾದ ಅನುದಾನ ಎಷ್ಟು ;

(ಆ) ಬಿಡುಗಡೆಯಾದ ಅನುದಾನ ಎಷ್ಟು ; ವಿನಿಯೋಗಿಸಿದ ಅನುದಾನ ಎಷ್ಟು ;

(ಇ) ಇದರಲ್ಲಿ ಕೃಷ್ಣಾ ಕೊಳ್ಳದ ಯೋಜನೆಯ ವಿವರಗಳನ್ನು ನೀಡುವುದು?

## ಅಸಂಘಟಿತ ಕಾರ್ಮಿಕರ ಏಳಿಗೆ ಬಗ್ಗೆ

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೦೯೬ (೧೩೫೮) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಾರ್ಮಿಕ ಕಲ್ಯಾಣ ಇಲಾಖೆಗೆ ಬರುವ ಕಾರ್ಮಿಕ ಕಲ್ಯಾಣ ಹಣವನ್ನು ಎಷ್ಟು ಬ್ಯಾಂಕುಗಳಲ್ಲಿ ಠೇವಣಿ ಮಾಡಲಾಗಿದೆ ; (ಸಂಪೂರ್ಣ ವಿವರ ನೀಡುವುದು)

(ಆ) ೨೦೧೪-೧೫ ಹಾಗೂ ೨೦೧೫-೧೬ರಲ್ಲಿ ಬೆಂಗಳೂರಿನಲ್ಲಿ ನೋಂದಾಣಿಯಾದ ಅಸಂಘಟಿತ ಕಾರ್ಮಿಕರ ಸಂಖ್ಯೆ ಎಷ್ಟು ; ಅಸಂಘಟಿತ ಕಾರ್ಮಿಕರಿಗೆ ಯೋಜಿಸಿರುವ ಯೋಜನೆಗಳು ಯಾವುವು ;

(ಇ) ಬಹುತೇಕ ಅಸಂಘಟಿತ ಕಾರ್ಮಿಕರಿಗೆ ಕಾರ್ಮಿಕ ಕಲ್ಯಾಣ ಕಾರ್ಯಕ್ರಮಗಳು ತಿಳಿಯದೇ ಇಲಾಖೆಯಿಂದ ಬರಬೇಕಾದ ಯೋಜನೆಗಳ ಅನುಕೂಲತೆಗಳು ಕೈತಪ್ಪುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ತಿಪ್ಪಗೊಂಡನಹಳ್ಳಿ ಜಲಾಶಯದ ನೀರು ಅಶುದ್ಧಗೊಂಡಿರುವ ಬಗ್ಗೆ

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೦೯೭ (೧೩೫೭) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ:-

ಬೆಂಗಳೂರಿನಿಂದ ತಿಪ್ಪಗೊಂಡನಹಳ್ಳಿ ಜಲಾಶಯಕ್ಕೆ ಹರಿಯುವ ನೀರು ಅಶುದ್ಧವಾಗಿದ್ದು ಕುಡಿಯಲು ಯೋಗ್ಯವಲ್ಲದ ಕಾರಣ

ಮಲ್ಲಸಂದ್ರ ಬಳಿ ಒಂದು ಚೆಕ್‌ಡ್ಯಾಂ ನಿರ್ಮಾಣ ಮಾಡಿ ಅಲ್ಲಿಂದ ಏತ ನೀರಾವರಿ ಮೂಲಕ ಸೊಂಡೆಕೊಪ್ಪ ಕೆರೆ ತುಂಬಿಸಿದರೆ ಬೋರ್‌ವೆಲ್‌ಗಳಿಗೆ ಅನುಕೂಲವಾಗುವುದರಿಂದ ಈ ಬಗ್ಗೆ ಸರ್ಕಾರದ ನಿಲುವೇನು ? (ವಿವರ ನೀಡುವುದು)

## ಕಾವೇರಿ ನೀರು ಕಲುಷಿತಗೊಳ್ಳುತ್ತಿರುವ ಬಗ್ಗೆ

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೮೯೮ (೧೩೫೬) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕೆ.ಆರ್.ಎಸ್ ಅಣೆಕಟ್ಟು ತಳಭಾಗದಲ್ಲಿ ಹರಿದು ಬರುವ ನದಿಗೆ ಶ್ರೀರಂಗಪಟ್ಟಣ ಮತ್ತು ಮಂಡ್ಯ ಬಳಿ ಇರುವ ಕೈಗಾರಿಕೆಗಳು ಹಾಗೂ ಹೋಟೆಲ್‌ಗಳಿಂದ ಬರುವ ಮೋರಿ ಹಾಗೂ ಸ್ಯಾನಿಟರಿ ನೀರು ಹರಿದು ಬಂದು ಸೇರುತ್ತಿದ್ದು ಕಾವೇರಿ ನೀರು ಕಲುಷಿತಗೊಳ್ಳುತ್ತಿರುವ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು;

(ಆ) ಕೈಗಾರಿಕೆಗಳು ಮತ್ತು ಹೋಟೆಲ್‌ಗಳಿಗೆ ಕಲುಷಿತ ನೀರು ಬಿಡದಂತೆ ನಿರ್ಬಂಧಿಸಲು ತೆಗೆದುಕೊಂಡಿರುವ ಕ್ರಮವೇನು ?

## ಉಪ ನೋಂದಣಾಧಿಕಾರಿಗಳ ಕಛೇರಿ ಬಗ್ಗೆ

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೮೯೯ (೧೩೫೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ಮಹಾನಗರ ಹಾಗೂ ಬೆಂಗಳೂರು ನಗರ ಜಿಲ್ಲೆಯಲ್ಲಿ ಒಟ್ಟು ಇರುವ ಉಪ ನೋಂದಣಾಧಿಕಾರಿಗಳ ಕಛೇರಿ ಎಷ್ಟು ; ಯಾವುವು ;

(ಆ) ೨೦೧೪-೧೫ರಲ್ಲಿ ಸಂಗ್ರಹವಾದ ಮುದ್ರಾಂಕ ಶುಲ್ಕ ಎಷ್ಟು ; ಕಳೆದ ಎರಡು ವರ್ಷಗಳಲ್ಲಿ ಮುದ್ರಾಂಕ ಶುಲ್ಕವನ್ನು ಎಷ್ಟು ಬಾರಿ ಏರಿಕೆ ಮಾಡಲಾಗಿದೆ ?

## ಹೈದ್ರಾಬಾದ್-ಕರ್ನಾಟಕ ಭಾಗದಲ್ಲಿ "ಉದ್ಯೋಗ ವಿನಿಮಯ ಕೇಂದ್ರ" ದಿಂದ ಪದವೀಧರರಿಗೆ ಉದ್ಯೋಗ ಕಲ್ಪಿಸುವ ಬಗ್ಗೆ

**ಶ್ರೀ ಅಮರನಾಥ ಪಾಟೀಲ್** (ಪದವೀಧರರ ಕ್ಷೇತ್ರ) :-

೧೧೦೦ (೧೫೬೩) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಹೈದ್ರಾಬಾದ್-ಕರ್ನಾಟಕ ಪ್ರದೇಶದ ೬ ಜಿಲ್ಲೆಗಳ ಹಾಗೂ ಹರಪ್ಪನಹಳ್ಳಿಯಲ್ಲಿ "ಉದ್ಯೋಗ ವಿನಿಮಯ ಕೇಂದ್ರ" ದಲ್ಲಿ ನೋಂದಾಯಿಸಿಕೊಂಡಿರುವ ಪದವೀಧರರ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮೂರು ವರ್ಷದ ಪ್ರತ್ಯೇಕ ಮಾಹಿತಿ ನೀಡುವುದು)

(ಆ) ಈ ಮೇಲ್ಕಾಣಿಸಿದ ನೋಂದಾಯಿತ ಪದವೀಧರರಲ್ಲಿ ವಿವಿಧ ರೀತಿಯ ನೇಮಕಾತಿಗಳಲ್ಲಿ ಅವಕಾಶ ಸಿಕ್ಕಿದಂತಹ ಪದವೀಧರರ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮೂರು ವರ್ಷಗಳ ಪ್ರತ್ಯೇಕ ವಿವರ ನೀಡುವುದು)

(ಇ) ಸದರಿ ಪದವೀಧರರಿಗೆ ಉದ್ಯೋಗಾವಕಾಶ ಕಲ್ಪಿಸಲು ಸರ್ಕಾರ ಕೈಗೊಂಡ ಕಾರ್ಯಕ್ರಮಗಳೇನು ; (ವಿವರವಾಗಿ ಮಾಹಿತಿ ನೀಡುವುದು)

(ಈ) ಸದರಿ ನಿರುದ್ಯೋಗಿ ಪದವೀಧರರಿಗೆ ಉದ್ಯೋಗಾವಕಾಶದಿಂದ ವಂಚಿತರಾಗಿ ವಯೋಮಿತಿ ಮೀರಿರುವ ಸಂದರ್ಭಗಳಲ್ಲಿ ಅಂತಹ ನಿರುದ್ಯೋಗಿ ಪದವೀಧರರಿಗೆ "ನಿರುದ್ಯೋಗ ಭತ್ಯೆ" ನೀಡಲು ಸರ್ಕಾರ ಮುಂದಾಗುವುದೇ ? (ಮಾಹಿತಿ ನೀಡುವುದು)

# ನೀರಾವರಿ ಯೋಜನೆಯಡಿಯಲ್ಲಿ ಸಂತ್ರಸ್ತರಿಗೆ ಪುನರ್ ವಸತಿ ಹಾಗೂ ಪುನರ್ ನಿರ್ಮಾಣ ಸೌಲಭ್ಯಗಳ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :-**

೧೧೦೧ (೧೩೬೨) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಭೀಮಾ ಏತ ನೀರಾವರಿ ಯೋಜನೆ, ಕಾರಂಜಾ ನೀರಾವರಿ ಯೋಜನೆ, ಬೆಣ್ಣೆ ತೋರಾ ನೀರಾವರಿ ಯೋಜನೆ ಹಾಗೂ ಗಂಡೋರಿ ನಾಲಾ ನೀರಾವರಿ ಯೋಜನೆ ಅಡಿಯ ಸಂತ್ರಸ್ತರಿಗೆ ನೀಡಿರುವ ಪುನರ್ ವಸತಿ ಹಾಗೂ ಪುನರ್ ನಿರ್ಮಾಣ ಸೌಲಭ್ಯಗಳು ಯಾವುವು ; (ಯೋಜನಾವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ಸದರಿ ಯೋಜನೆ ಅಡಿಯಲ್ಲಿ ಸಂತ್ರಸ್ತರಿಗೆ ಪುನರ್ ವಸತಿ ಹಾಗೂ ಪುನರ್ ನಿರ್ಮಾಣ ಅಡಿಯಲ್ಲಿ ಪ್ರಸ್ತುತ ಭೌತಿಕವಾಗಿ ನೀಡಿರುವ ಸೌಲಭ್ಯಗಳು ಯಾವುವು ; (ಯೋಜನಾವಾರು ಪ್ರತ್ಯೇಕ ವಿವರ ನೀಡುವುದು)

(ಇ) ಮೇಲ್ಕಂಡ ಯೋಜನೆಗಳ ಅಡಿಯಲ್ಲಿ ಸಂತ್ರಸ್ತರಿಗೆ ನೀಡಿರುವ ಪುನರ್ ವಸತಿ ಹಾಗೂ ಪುನರ್ ನಿರ್ಮಾಣ ಸೌಲಭ್ಯಗಳಲ್ಲಿ ವ್ಯತ್ಯಾಸ/ತಾರತಮ್ಯವೇನಾದರೂ ಆಗಿವೆಯೇ ; ಆಗಿದ್ದರೆ, ಇದನ್ನು ಸರಿಪಡಿಸುವ ನಿಟ್ಟಿನಲ್ಲಿ ಸರ್ಕಾರದ ಮುಂದಿರುವ ಕ್ರಮಗಳೇನು? (ಮಾಹಿತಿ ನೀಡುವುದು)

## ಸುರಪುರ ತಾಲ್ಲೂಕಿನ ಸಮೀಪದಲ್ಲಿರುವ ೮೧೧ ಎಕರೆ ಕೆರೆಯನ್ನು ಪಕ್ಷಿಧಾಮವನ್ನಾಗಿ ಘೋಷಿಸುವ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :–**

೧೧೦೨ (೧೩೬೧) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ಸಮೀಪದಲ್ಲಿರುವ ೮೧೧ ಎಕರೆಯ ವಿಸ್ತೀರ್ಣ ಕೆರೆಗೆ ವಿವಿಧ ದೇಶಗಳಿಂದ ಲಕ್ಷಾಂತರ ಪಕ್ಷಿಗಳು ವಲಸೆ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದರೆ, ಈ ಹಕ್ಕಿ–ಪಕ್ಷಿಗಳ ರಕ್ಷಣೆಗಾಗಿ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು ; (ವಿವರ ನೀಡುವುದು)

(ಇ) ಈ ಕೆರೆಯನ್ನು ಕೊಕ್ಕರೆ ಬೆಳ್ಳೂರು ಕೆರೆಯ ಮಾದರಿ ಅಭಿವೃದ್ಧಿಪಡಿಸಿ, ಪಕ್ಷಿಧಾಮವೆಂದು ಘೋಷಿಸುವ ಯೋಜನೆ ಸರ್ಕಾರದ ಮುಂದಿದೆಯೇ ;

(ಈ) ಇದ್ದರೆ, ಇದನ್ನು ಯಾವಾಗ ಕಾರ್ಯಗತಗೊಳಿಸಲಾಗುವುದು?

## ರಾಜ್ಯದಲ್ಲಿ ಕಳೆದ ೨ ವರ್ಷಗಳಲ್ಲಿ ಮಂಜೂರಾದ I.T.I. ಕಾಲೇಜುಗಳ ಬಗ್ಗೆ.

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :–**

೧೧೦೩(೧೩೬೦) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಕಳೆದ ೨ ವರ್ಷಗಳಲ್ಲಿ ಮಂಜೂರಾದ I.T.I. ಕಾಲೇಜುಗಳೆಷ್ಟು ; ಮಂಜೂರಾದ ಹುದ್ದೆಗಳು ಖಾಲಿ ಇರುವ

ಹುದ್ದೆಗಳೆಷ್ಟು ; ಸ್ವಂತ ಕಟ್ಟಡ ಹಾಗೂ ವರ್ಕ್ ಶಾಪ್ ಹೊಂದಿರುವ ಕಾಲೇಜುಗಳ ಸಂಖ್ಯೆ ಎಷ್ಟು ; (ಮಾಹಿತಿ ನೀಡುವುದು)

(ಆ) ಸದರಿ ಕಾಲೇಜುಗಳು NCVT (National Council For Vocational Training) ಮಾನ್ಯತೆ ಪಡೆದಿವೆಯೇ ; (ವಿವರ ನೀಡುವುದು)

(ಇ) NCVT ಮಾನ್ಯತೆ ಪಡೆಯದೇ ಇದ್ದಲ್ಲಿ ವಿದ್ಯಾರ್ಥಿಗಳಿಗೆ ರಾಷ್ಟ್ರಮಟ್ಟದಲ್ಲಿ ಹೆಚ್ಚಿನ ಉದ್ಯೋಗಾವಕಾಶಗಳು ಲಭಿಸದೇ ಇರುವ ವಿಷಯ ಸರ್ಕಾರದ ಗಮನಕ್ಕಿದೆಯೇ ; ಇದ್ದರೆ ಸರ್ಕಾರ NCVT ಮಾನ್ಯತೆ ಪಡೆದು ವಿದ್ಯಾರ್ಥಿಗಳ ಹೆಚ್ಚಿನ ಪ್ರಮಾಣದಲ್ಲಿ ಪ್ರೋತ್ಸಾಹ ನೀಡಲು ಸರ್ಕಾರ ಮುಂದಾಗುವುದೇ ? (ಸಂಪೂರ್ಣ ಮಾಹಿತಿ ನೀಡುವುದು)

## ತುಂಗಭದ್ರ ಜಲಾಶಯದಲ್ಲಿ ಹೂಳು ತುಂಬಿರುವ ಬಗ್ಗೆ.

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :-**

೧೧೦೪(೧೩೫೯) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ತುಂಗಭದ್ರ ಜಲಾಶಯದಲ್ಲಿ ಹೂಳು ತುಂಬಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;(ವಿವರ ನೀಡುವುದು)

(ಆ) ಹೂಳು ತುಂಬಿರುವುದರಿಂದ ಹಂಚಿಕೆಯಾದ ನೀರಿನ ಪ್ರಮಾಣ ಸದ್ಬಳಕೆ ಆಗುತ್ತಿದೆಯೇ ; ಆಗದೇ ಇದ್ದರೆ, ಸದ್ಬಳಕೆಯಾಗದ ನೀರಿನ ಪ್ರಮಾಣವೆಷ್ಟು ; (ಸಂಪೂರ್ಣ ವಿವರ ನೀಡುವುದು)

(ಇ) ಹಂಚಿಕೆಯಾದ ನೀರಿನ ಸದ್ಬಳಕೆಗೆ ಮಾಡಿಕೊಳ್ಳಲು ಸರ್ಕಾರದ ಮುಂದಿರುವ ಪರ್ಯಾಯ ಯೋಜನೆಗಳೇನು ? (ಸಂಪೂರ್ಣ ವಿವರ ನೀಡುವುದು)

## ಮಂಡ್ಯ ಜಿಲ್ಲೆಯ ಕೆರೆಗಳಲ್ಲಿ ಮೀನುಗಾರಿಕೆ ಬಗ್ಗೆ.

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೧೦೫(೧೩೬೯) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಂಡ್ಯ ಜಿಲ್ಲೆಯಲ್ಲಿನ ಎಷ್ಟು ಕೆರೆಗಳಲ್ಲಿ ಮೀನುಗಾರಿಕೆ ನಡೆಸಲಾಗುತ್ತಿದೆ ; ಹಾಗಿದ್ದಲ್ಲಿ, ಇದರಿಂದ ಬರುವ ಆದಾಯವೆಷ್ಟು ;

(ಆ) ಮೀನುಗಾರಿಕೆ ಹೆಚ್ಚಿನ ಲಾಭದಾಯಕವಾಗಿರುವುದರಿಂದ ಕೆರೆಗಳಲ್ಲಿ ಮೀನು ಸಾಕಾಣಿಕೆಗೆ ಸರ್ಕಾರ ಕೈಗೊಂಡ ಕ್ರಮವೇನು : (ವಿವರ ನೀಡುವುದು)

(ಇ) ಮೀನುಗಾರಿಕೆಯಿಂದ ಸ್ಥಳೀಯರಿಗೆ ಉದ್ಯೋಗ ದೊರಕುವುದರಿಂದ ಸರ್ಕಾರ ಕೈಗೊಂಡಿರುವ ಕ್ರಮವೇನು ;

(ಈ) ಹಾಲಿ ಇರುವ ಮೀನು ಸಾಕಾಣಿಕೆ ಕೆರೆಗಳನ್ನು ಯಾವ ಮಾನದಂಡದ ಮೇರೆಗೆ ಗುತ್ತಿಗೆ ನೀಡಲಾಗುವುದು ? (ವಿವರ ನೀಡುವುದು)

## ಭೂಮಾಪಕರ ಬಗ್ಗೆ.

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೧೦೬(೧೩೬೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಭೂಮಾಪಕರ ಸಂಖ್ಯೆ ಎಷ್ಟು ; (ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಸಾಕಷ್ಟು ಸಂಖ್ಯೆಯಲ್ಲಿ ಭೂ ಮಾಪಕರು ಇದ್ದರೂ ಪ್ರತಿ ತಾಲ್ಲೂಕು ಕೇಂದ್ರಗಳಲ್ಲಿ ಭೂ ಮಾಪನ ಕಾರ್ಯ ತ್ವರಿತಗತಿಯಲ್ಲಿ ಆಗದಿರಲು

ಕಾರಣವೇನು ; ಇದಕ್ಕೆ ಹೊಣೆಗಾರರು ಯಾರು ; ಸರ್ಕಾರ ಕೈಗೊಂಡ ಕ್ರಮವೇನು ;

(ಇ) ಈ ರೀತಿ ಒಂದೇ ಕಡೆ ೩ ವರ್ಷಕ್ಕಿಂತ ಹೆಚ್ಚು ವರ್ಷಗಳ ಕಾಲ ವರ್ಗಾವಣೆ ಇಲ್ಲದೆ ಒಂದೇ ಜಾಗದಲ್ಲಿರುವವರು ಸಾರ್ವಜನಿಕರಿಗೆ ಸರಿಯಾಗಿ ಸ್ಪಂದಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಅಂತಹವರುಗಳನ್ನು ಬೇರೆ ಸ್ಥಳಕ್ಕೆ ವರ್ಗಾಯಿಸಲು ಸರ್ಕಾರ ಕೈಗೊಳ್ಳುವ ಕ್ರಮವೇನು ; (ವಿವರ ನೀಡುವುದು)

(ಈ) ಮೂರು ವರ್ಷಕ್ಕಿಂತ ಹೆಚ್ಚು ಅವಧಿಯಲ್ಲಿ ಒಂದೇ ಜಾಗದಲ್ಲಿ ವರ್ಗಾವಣೆವಿಲ್ಲದೆ ಎಷ್ಟು ಭೂಮಾಪಕರು (ಸರ್ವೆಯರುಗಳು) ಕೆಲಸ ನಿರ್ವಹಿಸುತ್ತಿದ್ದಾರೆ ;

(ಉ) ಕೇಂದ್ರ ತಾಲ್ಲೂಕುಗಳಲ್ಲಿ ಖಾಸಗಿ ಭೂಮಾಪಕರು ಸಾರ್ವಜನಿಕರಿಂದ ಹಣ ವಸೂಲು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಊ) ಬಂದಿದ್ದಲ್ಲಿ, ಸರ್ಕಾರದ ಕ್ರಮವೇನು ;

(ಋ) ಸಾರ್ವಜನಿಕರಿಂದ ಬಂದ ಅರ್ಜಿಗಳನ್ನು ಸ್ವೀಕರಿಸಿದ ಬಳಿಕ ಸರ್ವೆಯರುಗಳು ಸರ್ವೆ ಕಾರ್ಯವನ್ನು ಪೂರೈಸಲು ತೆಗೆದುಕೊಳ್ಳುವ ಅವಧಿ ಎಷ್ಟು ; ರಾಜ್ಯದಲ್ಲಿ ಸಾರ್ವಜನಿಕರ ಭೂ ಸರ್ವೆ ಕಾರ್ಯ ಬಾಕಿ ಇರುವ ಪ್ರಕರಣಗಳೆಷ್ಟು ;(ಜಿಲ್ಲಾವಾರು, ತಾಲ್ಲೂಕುವಾರು ವಿವರ ನೀಡುವುದು)

(ಎ) ಸಾರ್ವಜನಿಕರಿಂದ ನಿಗಧಿತ ಅವಧಿಯೊಳಗೆ ಸರ್ವೆ ಕಾರ್ಯ ಪೂರೈಸದೆ ವಿನಾಕಾರಣ ತೊಂದರೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಕೈಗೊಂಡ ಕ್ರಮವೇನು ;

(ಐ) ರೈತರು ಸಾರ್ವಜನಿಕರ ಭೂ ಸರ್ವೆ ಕಾರ್ಯ ವಿಳಂಬ ಮಾಡದೇ, ಮಾಡಿಕೊಡಲು ಸರ್ಕಾರ ಕೈಗೊಂಡ ಕ್ರಮಗಳೇನು ?

## ವಿಧವೆಯರ ಮಾಶಾಸನ.

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೧೦೭(೧೩೭೧)ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ರಾಷ್ಟ್ರೀಯ ಭದ್ರತಾ ಯೋಜನೆಯಡಿಯಲ್ಲಿ ಕಳೆದ ಮೂರು ವರ್ಷಗಳಿಂದ ಮಂಜೂರಾದ ಹಣವೆಷ್ಟು ;

(ಆ) ಬಡತನದ ರೇಖೆಯಿಂದ ಕೆಳಗಿರುವ ಬಿಪಿಎಲ್ ಕಾರ್ಡ್ ಹೊಂದಿರುವ ವಿಧವೆಯರಿಗೆ ಇದುವರೆವಿಗೂ ಬಾಕಿ ನೀಡಬೇಕಾಗಿರುವ ಹಣವೆಷ್ಟು ;

(ಇ) ಮಂಡ್ಯ ಜಿಲ್ಲೆಯ ವ್ಯಾಪ್ತಿಯಲ್ಲಿನ (ಬಿ.ಪಿ.ಎಲ್) ವಿಧವೆಯರಿಗೆ ನೀಡಬೇಕಾಗಿರುವ ಹಣವೆಷ್ಟು ;

(ಈ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡಿರುವ ಕ್ರಮವೇನು ? (ವಿವರ ನೀಡುವುದು)

## ಜನವಸತಿಗಳ ಪ್ರದೇಶಕ್ಕೆ ಕಾಡು ಪ್ರಾಣಿಗಳ ದಾಳಿ ಬಗ್ಗೆ.

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೧೦೮(೧೩೭೦) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಜನ ವಸತಿ ಪ್ರದೇಶಗಳಿಗೆ ಕಾಡು ಪ್ರಾಣಿಗಳು ದಾಳಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಇದುವರೆವಿಗೂ ಜನ ವಸತಿ ಪ್ರದೇಶಗಳಿಗೆ ಕಾಡು ಪ್ರಾಣಿಗಳು ದಾಳಿ ಮಾಡಿರುವ ಪ್ರಾಣಹಾನಿ ಮತ್ತು ಆಸ್ತಿ ಹಾನಿ ಎಷ್ಟು ; (ವಿವರಗಳನ್ನು ನೀಡುವುದು (ಜಿಲ್ಲಾವಾರು)

(ಇ) ಕಾಡು ಪ್ರಾಣಿ ದಾಳಿಗೊಳಗಾದ ವ್ಯಕ್ತಿಗಳಿಗೆ ಪರಿಹಾರ ನೀಡಲಾಗಿದೆಯೇ ? (ಪೂರ್ಣ ಮಾಹಿತಿ ನೀಡುವುದು)

## ರಾಯಚೂರು ಜಿಲ್ಲೆಯಲ್ಲಿ ESI ಆಸ್ಪತ್ರೆ ಪ್ರಾರಂಭಿಸುವ ಕುರಿತು.

**ಶ್ರೀ ಎನ್.ಎಸ್.ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):–**

೧೧೧೯(೧೩೫೪) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ:–

(ಅ) ರಾಯಚೂರು ಜಿಲ್ಲೆಯಲ್ಲಿರುವ RTPS ಮತ್ತು YTPS ಹಟ್ಟಿ ಚಿನ್ನದಗಣಿ ಗ್ರೋತ್ ಸೆಂಟರ್ (Growth centre) ಹಾಗೂ ಇನ್ನು ಇತರೆ ಪ್ರದೇಶಗಳಲ್ಲಿ ಕಾರ್ಮಿಕ ಸಂಖ್ಯೆ ಹೆಚ್ಚಾಗಿರುವುದರಿಂದ ESI ಆಸ್ಪತ್ರೆ ಪ್ರಾರಂಭಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ರಾಯಚೂರು ಜಿಲ್ಲೆಯಲ್ಲಿ ಬರುವ ಅಟಲ್‌ಜೀ ಜನಸ್ನೇಹಿ ಕೇಂದ್ರಗಳ ಕುರಿತು.

**ಶ್ರೀ ಎನ್.ಎಸ್.ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):–**

೧೧೧೦(೧೩೫೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಯಚೂರು ಜಿಲ್ಲೆಯಲ್ಲಿ ರೈತರ ಜಮೀನುಗಳಿಗೆ ಸರ್ವೆ ಮಾಡಲು ರೈತರಿಂದ ಬಂದಿರುವಂತಹ ಅರ್ಜಿಗಳೆಷ್ಟು ;

(ಆ) ಬಂದಿರುವಂತಹ ಅರ್ಜಿಗಳನ್ನು ಎಷ್ಟು ದಿನಗಳೊಗಾಗಿ ಸರ್ವೆ ಮಾಡಿ ಕೊಡಲಾಗುವುದು ಅಥವಾ ಒಬ್ಬ ರೈತ ಅರ್ಜಿ ಕೊಟ್ಟ ನಂತರ ಎಷ್ಟು, ದಿನಗಳಲ್ಲಿ ಸರ್ವೆ ಮಾಡಿ ಕೊಡಲಾಗುತ್ತದೆ ;

(ಇ) ರಾಯಚೂರು ಜಿಲ್ಲೆಯಲ್ಲಿರುವ ಒಟ್ಟು ಅಟಲ್‌ಜೀ ಸ್ನೇಹ ಕೇಂದ್ರಗಳೆಷ್ಟು ; ಇವು ಕಾರ್ಯನಿರತವಾಗಿವೆಯೇ ? (ತಾಲ್ಲೂಕುವಾರು, ಹೋಬಳಿವಾರು ವಿವರ ನೀಡುವುದು)

## ರಾಯಚೂರು ಜಿಲ್ಲೆಯಲ್ಲಿರುವ ಏತನೀರಾವರಿ ಯೋಜನೆಗಳ ಬಗ್ಗೆ.

**ಶ್ರೀ ಎನ್.ಎಸ್.ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):–**

೧೧೧೧(೧೩೫೨) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನಲ್ಲಿ ಬರುವ ದದ್ದಲ, ಮಾದಲಾಪೂರ, ಏತನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಆ) ಪೂರ್ಣಗೊಂಡ ಏತ ನೀರಾವರಿ ಯೋಜನೆಗಳಿಂದ ರೈತರ ಜಮೀನುಗಳಿಗೆ (ವ್ಯವಸಾಯ ಮಾಡಲು) ನೀರಿನ ಸೌಕರ್ಯ ಒದಗಿಸಲು ತೆಗೆದುಕೊಳ್ಳುವ ಕಾಲಮಿತಿ ಅವಧಿ ಎಷ್ಟು ;

(ಇ) ಮಾನ್ವಿ ತಾಲ್ಲೂಕಿನ ಸಂಕೇಶ್ವರ ಜಿನುಗ ಕೆರೆ ರೈತರಿಗೆ ಅತ್ಯಂತ ಅವಶ್ಯವಿದ್ದು ಅದನ್ನು ಅಭಿವೃದ್ಧಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಈ) ೨೦೧೪–೧೫ ಮತ್ತು ೨೦೧೫–೧೬ನೇ ಸಾಲಿನಲ್ಲಿ ರಾಯಚೂರು, ಮಾನ್ವಿ ತಾಲ್ಲೂಕುಗಳಲ್ಲಿ ನೂತನವಾಗಿ ತುಂಗಭದ್ರ ಹಾಗೂ ಕೃಷ್ಣ ನದಿಗಳ ಮುಖಾಂತರ ಎಲ್.ಐ. (Lift Irrigation) ಯೋಜನೆ ಪ್ರಾರಂಭ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ರಾಯಚೂರು ಜಿಲ್ಲೆಯಲ್ಲಿ ಮೀನುಗಾರಿಕೆ ಅಭಿವೃದ್ಧಿ ಮಾಡುವ ಕುರಿತು.

**ಶ್ರೀ ಎನ್.ಎಸ್.ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):–**

೧೧೧೨(೧೩೫೩) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೃಷ್ಣ ಮತ್ತು ತುಂಗಭದ್ರ ನದಿಗಳು ಹಾಗೂ ನೂರಾರು ಕೆರೆಗಳು ಇರುವ ರಾಯಚೂರು ಜಿಲ್ಲೆಯಲ್ಲಿ ಮೀನುಗಾರಿಕೆ ಅಭಿವೃದ್ಧಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಆ) ಜಿಲ್ಲೆಯಲ್ಲಿರುವ ಮೀನುಗಾರರ (Fishersmen) ಅಭಿವೃದ್ಧಿಗಾಗಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ರಾಯಚೂರು ಜಿಲ್ಲೆಯ RTPS ಮತ್ತು YTPS ವಿದ್ಯುತ್ ಸ್ಥಾವರಗಳಿಗೆ ನೀರಿನ ಸೌಕರ್ಯ ಒದಗಿಸುವ ಬಗ್ಗೆ

**ಶ್ರೀ ಎನ್.ಎಸ್.ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):–**

೧೧೧೩ (೧೩೫೦) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ತುಂಗಭದ್ರ ನದಿ ಪಾತ್ರದಲ್ಲಿ ಮಾನ್ವಿ ತಾಲ್ಲೂಕಿನ ಚಿಕಲಪರ್ವಿ ಗ್ರಾಮದ ಹತ್ತಿರ ನಿರ್ಮಿಸಲು ಉದ್ದೇಶಿಸಿರುವ ಚೆಕ್ ಡ್ಯಾಮ್ (ಮಿನಿ ಅಣೆಕಟ್ಟು) ಪ್ರಸ್ತಾವನೆಗೆ ಸರ್ಕಾರ ತೆಗೆದುಕೊಂಡ ಕ್ರಮವೇನು;

(ಆ) ಮಾನ್ವಿ ತಾಲ್ಲೂಕಿನಲ್ಲಿ ಬರುವ RDS (ರಾಜ್ ಬಂಡಾ ಕಾಲುವೆ) ನೆಲ್ಲಹಾಗಿ ಲಿಕೇಜ್ ಆಗುತ್ತಿರುವುದು ಸರ್ಕಾರದ ಗಮನಕ್ಕೆ

ಬಂದಿದೆಯೇ ; ಹಾಗಿದ್ದಲ್ಲಿ, RDS ಅಭಿವೃದ್ಧಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಇ) NRBC ಭಾಗದಲ್ಲಿ ಬರುವ ರಾಯಚೂರು ತಾಲ್ಲೂಕಿನ ಕೆರೆಗಳಿಗೆ ನೀರು ತುಂಬಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಈ) ರಾಯಚೂರು ನಗರಕ್ಕೆ ಕುಡಿಯುವ ನೀರಿಗಾಗಿ ಮತ್ತು RTPS ಮತ್ತು YTPS ವಿದ್ಯುತ್ ಸ್ಥಾವರಗಳಿಗೆ ನೀರಿನ ಕೊರತೆ ನೀಗಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ಕಾಗದ ರಹಿತ ಆಡಳಿತ ವಿಚಾರ

**ಶ್ರೀ ಭಾನುಪ್ರಕಾಶ್ (ವಿಧಾನಸಭೆಯಿಂದ ಚುನಾಯಿತರಾದವರು):–**

೧೧೧೪ (೧೩೪೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಯಾವ ಜಿಲ್ಲೆಗಳಲ್ಲಿ ಹಾಗೂ ತಾಲ್ಲೂಕುಗಳಲ್ಲಿ ಆಡಳಿತವನ್ನು ಪಾರದರ್ಶಕವಾಗಿಸಲು ಕಾಗದ ರಹಿತ ಕಛೇರಿ ವ್ಯವಸ್ಥೆ ಜಾರಿಗೆ ಬಂದಿದೆ ; ಎಂದಿನಿಂದ ಜಾರಿಗೆ ಬಂದಿದೆ ; ಇದರ ಉಪಯೋಗ ರೈತರಿಗೆ ಆಗುತ್ತಿದೆಯೇ ;

(ಆ) ರಾಜ್ಯದ ಎಷ್ಟು ಗ್ರಾಮಗಳನ್ನು ಪೋಡಿ ಮುಕ್ತ ಗ್ರಾಮವನ್ನಾಗಿ ಮಾಡಲಾಗಿದೆ ; (ತಾಲ್ಲೂಕುವಾರು ವಿವರ ನೀಡುವುದು)

(ಇ) ಅಂತ್ಯ ಸಂಸ್ಕಾರ ಸಹಾಯ ನಿಧಿ ಯೋಜನೆಯಡಿ ಈಗ ಸರ್ಕಾರ ನೀಡುತ್ತಿರುವ ಸಹಾಯ ಧನ ಎಷ್ಟು ; ಈ ಸಹಾಯ ಧನ ಸೂಕ್ತ ಸಮಯದಲ್ಲಿ ತಲುಪದೆ ಇರುವುದರಿಂದ ಆ ಕುಟುಂಬದವರಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಪರಿಹಾರವಾಗಿ ಸರ್ಕಾರದ ಕ್ರಮಗಳೇನು ? (ವಿವರ ನೀಡುವುದು)

## ತುಂಗಾ ಮೇಲ್ದಂಡೆ ಯೋಜನೆ ವಿಚಾರ

**ಶ್ರೀ ಭಾನುಪ್ರಕಾಶ್ (ವಿಧಾನಸಭೆಯಿಂದ ಚುನಾಯಿತರಾದವರು):–**

೧೧೧೫ (೧೩೪೦) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ತುಂಗಾ ಮೇಲ್ದಂಡೆ ಯೋಜನೆಗಾಗಿ ನಿಗಧಿಪಡಿಸಿದ ಹಾಗೂ ಖರ್ಚಾದ ಅನುದಾನ ಎಷ್ಟು ;

(ಆ) D.P.R. ನಂತೆ ಇನ್ನು ಉಳಿದಿರುವ ಕಾಮಗಾರಿಗಳೆಷ್ಟು ; (ವಿವರ ನೀಡುವುದು)

(ಇ) ಕಾಮಗಾರಿ ಪೂರ್ತಿಗೊಳಿಸಲು ಸರ್ಕಾರ ಸಮಯ ಮಿತಿಯನ್ನು ನಿರ್ಧರಿಸಿದೆಯೇ ?

## ದಾವಣಗೆರೆ ಜಿಲ್ಲೆ, ಹೊನ್ನಾಳಿ ತಾಲ್ಲೂಕು, ದೇವರ ಹೊನ್ನಾಳಿ ಬಳಿ ಏತ ನೀರಾವರಿ ಬಗ್ಗೆ

**ಶ್ರೀ ಭಾನುಪ್ರಕಾಶ್ (ವಿಧಾನಸಭೆಯಿಂದ ಚುನಾಯಿತರಾದವರು):–**

೧೧೧೬ (೧೩೩೯) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ದಾವಣಗೆರೆ ಜಿಲ್ಲೆಯ ಹೊನ್ನಾಳಿ ತಾಲ್ಲೂಕಿನ ದೇವರ ಹೊನ್ನಾಳಿ ಸಮೀಪ ಏತ ನೀರಾವರಿ ಯೋಜನೆ ನಿರ್ಮಾಣ ಯಾವ ವರ್ಷದಲ್ಲಿ ಪ್ರಾರಂಭವಾಯಿತು ಹಾಗೂ ಅದಕ್ಕಾಗಿ ಬಿಡುಗಡೆ ಆಗಿರುವ ಅನುದಾನ ಎಷ್ಟು ; ಈ ಯೋಜನೆ ಮುಕ್ತಾಯವಾಗಲು ನಿಗಧಿಪಡಿಸಿದ ಕಾಲಾವಧಿ ಎಷ್ಟು ;

(ಈ) ಈ ವರೆಗೆ ಏತ ನೀರಾವರಿ ಕಾಮಗಾರಿ ಮುಕ್ತಾಯವಾಗದೇ ರೈತರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ತೊಂದರೆ ಪರಿಹರಿಸಲು ಸರ್ಕಾರದ ಕ್ರಮಗಳೇನು ; (ವಿವರ ನೀಡುವುದು)

(ಇ) ಯೋಜನೆ ಪೂರ್ತಿ ಮಾಡಲು ಸರ್ಕಾರಕ್ಕೆ ಎಷ್ಟು ಕಾಲಾವಧಿ ಬೇಕು; ಅದಕ್ಕೆ ಬೇಕಾಗುವ ಅನುದಾನ ಎಷ್ಟು ?

## ದೇಸೀ ಕ್ರೀಡೆಗಳ ವಿಚಾರ

**ಶ್ರೀ ಭಾನುಪ್ರಕಾಶ್ (ವಿಧಾನಸಭೆಯಿಂದ ಚುನಾಯಿತರಾದವರು):–**

೧೧೧೭ (೧೩೪೨) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಗ್ರಾಮೀಣ ದೇಸೀ ಕ್ರೀಡೆ ಕುಸ್ತಿಯನ್ನು ಉತ್ತೇಜನಕ್ಕೆ ತರಲು ಸರ್ಕಾರ ತೆಗೆದುಕೊಂಡ ಕಾರ್ಯಕ್ರಮಗಳೇನು ; (ವಿವರ ನೀಡುವುದು)

(ಆ) ೨೦೧೪–೧೫, ೨೦೧೫–೧೬ನೇ ಸಾಲಿನಲ್ಲಿ ನಿರ್ಮಿಸಲಾಗಿರುವ ಗರಡಿ ಮನೆಗಳ ಸಂಖ್ಯೆ ಎಷ್ಟು ; ಅಗತ್ಯವಾದ ರಿಪೇರಿ ಕೈಗೊಂಡ ಗರಡಿ ಮನೆ ಸಂಖ್ಯೆ ಎಷ್ಟು; ಅದಕ್ಕೆ ಖರ್ಚಾದ ವೆಚ್ಚ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು )

(ಇ) ರಾಜ್ಯದಲ್ಲಿ ನಿವೃತ್ತ ಕುಸ್ತಿ ಪಟುಗಳಿಗೆ ನೀಡಲಾಗುತ್ತಿರುವ ಮಾಶಾಸನ ಎಷ್ಟು; ಎಷ್ಟು ಪಟುಗಳಿಗೆ ನೀಡಲಾಗುತ್ತಿದೆ? (ಜಿಲ್ಲಾವಾರು ಮಾಹಿತಿ ನೀಡುವುದು)

## ಉದ್ಯೋಗ ವಿನಿಮಯ ಕಛೇರಿ ಕಾರ್ಯಕ್ರಮಗಳು

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೧೧೮ (೧೩೨೪) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಉದ್ಯೋಗ ವಿನಿಮಯ ಕಛೇರಿಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿವೆಯೇ ; ಇಲಾಖೆಯಲ್ಲಿ ಉದ್ಯೋಗ ದೊರಕಿಸಿಕೊಡಲು ಯಾವ ರೀತಿ ಕಾರ್ಯನಿರ್ವಹಿಸುತ್ತಿವೆ ;

(ಆ) ಎಷ್ಟು ಜನ ನಿರುದ್ಯೋಗಿಗಳು ಹೆಸರು ನೋಂದಾಯಿಸಿದ್ದಾರೆ ; ಎಷ್ಟು ಜನರಿಗೆ ಉದ್ಯೋಗ ದೊರಕಿಸಿಕೊಡಲಾಗಿದೆ ;

(ಇ) ನಿರುದ್ಯೋಗಿ ಯುವಕರಿಗೆ ನೌಕರಿ ಕೊಡಿಸಲು ವಿಶೇಷ ಯೋಜನೆಗಳನ್ನೇನಾದರೂ ಹಾಕಿಕೊಳ್ಳಲಾಗಿದೆಯೇ ;

(ಈ) ಈ ಇಲಾಖೆಯಿಂದ ಯಾವ ಉಪಯೋಗವೂ ಆಗುತ್ತಿಲ್ಲ ಎಂಬ ಭಾವನೆ ಸಾರ್ವಜನಿಕರಲ್ಲಿ ಬರಲು ಏನು ಕಾರಣ ; ಈ ಭಾವನೆ ಹೋಗಲಾಡಿಸಲು ಕ್ರಮಗಳೇನಾದರೂ ರೂಪಿಸಲಾಗಿದೆಯೇ?

## ಬರ–ಪರಿಹಾರ ಕಾಮಗಾರಿಗಳ ವಿವರ, ಬಿಡುಗಡೆಯಾದ ಅನುದಾನ ಹಾಗೂ ಖರ್ಚಾದ ಹಣದ ವಿವರ

**ಶ್ರೀ ಎಂ.ಎ. ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೧೧೯ (೧೩೪೫) ಮಾನ್ಯ ಕಂದಾಯ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ:–

೨೦೧೫–೧೬ನೇ ಸಾಲಿನಲ್ಲಿ ಹಾಸನ ಜಿಲ್ಲೆಯಲ್ಲಿ ಬರ–ಪರಿಹಾರ ಕಾಮಗಾರಿಯಲ್ಲಿ ಕೈಗೊಂಡಿರುವ ಕಾಮಗಾರಿಗಳೆಷ್ಟು; ಬಿಡುಗಡೆಯಾದ ಹಣ ಎಷ್ಟು ಹಾಗೂ ಇದುವರೆಗೆ ಖರ್ಚಾದ ಹಣವೆಷ್ಟು ? (ವಿವರ ಒದಗಿಸುವುದು)

## ಕರಾವಳಿ ಜಿಲ್ಲೆಗಳಲ್ಲಿ ನೀರಿನ ಮಟ್ಟವನ್ನು ಏರಿಸಲು "ಪಶ್ಚಿಮ ವಾಹಿನಿ" ಯೋಜನೆ ಬಗ್ಗೆ

**ಶ್ರೀ ಐವನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು):-**

೧೧೨೦ (೧೩೧೭) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕರಾವಳಿ ಜಿಲ್ಲೆಗಳಲ್ಲಿ ನೀರಿನ ಮಟ್ಟವನ್ನು ಏರಿಸಲು "ಪಶ್ಚಿಮ ವಾಹಿನಿ" ಯೋಜನೆಯನ್ನು ಅನುಷ್ಠಾನಗೊಳಿಸಬೇಕೆಂದು ಸರ್ಕಾರದ ಮುಂದೆ ಬೇಡಿಕೆ ಇದ್ದರೂ, ಇನ್ನೂ ಈಡೇರಿಸದೇ ಇರಲು ಕಾರಣಗಳೇನು ;

(ಆ) "ಪಶ್ಚಿಮ ವಾಹಿನಿ" ಯೋಜನೆ ಜಾರಿಗೆ ತಂದಲ್ಲಿ ಮಳೆ ನೀರು ಸಮುದ್ರಕ್ಕೆ ಹೋಗುವುದನ್ನು ತಡೆಗಟ್ಟಿ ಕೃಷಿಕರಿಗೆ ಕುಡಿಯುವ ನೀರಿಗೆ ಸಹಾಯವಾಗುವಂತಹ ಕ್ರಮ ಕೈಗೊಳ್ಳಲು ಸರ್ಕಾರ ಮುಂದಾಗುವುದೇ ;

(ಇ) ಕರಾವಳಿ ಜಿಲ್ಲೆಗಳಲ್ಲಿ ಪ್ರಸ್ತುತ ಇರುವ ಕಿಂಡಿ ಅಣೆಕಟ್ಟುಗಳೆಷ್ಟು ; ಈ ಅಣೆಕಟ್ಟುಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂಬ ದೂರುಗಳಿರುವುದು ನಿಜವೇ ; ನಿರ್ವಹಣೆಗೆ ಮಾಡುತ್ತಿರುವ ವೆಚ್ಚ ಎಷ್ಟು; (ವಿವರ ನೀಡುವುದು)

(ಈ) ಮಂಗಳೂರಿನ ಗುಜ್ಜರೆ ಕೆರೆಗೆ ಕಾಯಕಲ್ಪ ನೀಡಲು ಸರ್ಕಾರ ವಿಫಲವಾಗಲು ಕಾರಣಗಳೇನು ; ಖರ್ಚು ಮಾಡಿದ ಹಣ ಎಷ್ಟು ? (ವಿವರ ನೀಡುವುದು)

## ನೋಂದಣಿಯಾದ ಯುವಕ, ಯುವತಿ ಮತ್ತು ಹವ್ಯಾಸಿ ಯುವಕ ಮಂಡಳಿಗಳ ಬಗ್ಗೆ

**ಶ್ರೀ ಐವನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು):-**

೧೧೨೧ (೧೩೧೬) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ೨೦೧೩-೧೪. ೨೦೧೪-೧೫, ೨೦೧೫-೧೬ರಲ್ಲಿ ನೋಂದಣಿಯಾದ ಯುವಕ, ಯುವತಿ ಮತ್ತು ಹವ್ಯಾಸಿ ಯುವಕ ಮಂಡಳಿಗಳ ಸಂಖ್ಯೆ ಎಷ್ಟು ; ಈ ಸಂಘ ಸಂಸ್ಥೆಗಳ ನೋಂದಾವಣೆಗೆ ಇರುವ ಕಾಯ್ದೆ ಏನು ; ಇದಕ್ಕೆ ತಗಲುವ ಖರ್ಚು ಎಷ್ಟು ; (ವಿವರ ನೀಡುವುದು)

(ಆ) ಸರ್ಕಾರದಿಂದ ಅನುದಾನ ಪಡೆಯಲು ಗ್ರಾಮೀಣ ಪ್ರದೇಶದ ಯುವಕ, ಯುವತಿ, ಹವ್ಯಾಸಿ ಮಂಡಳಿಗಳಿಗೆ ಇರುವ ಷರತ್ತುಗಳೇನು ; ಜಿಲ್ಲಾ ಮಟ್ಟದ ಯುವಜನ ಮೇಳದ ವಿಜೇತರಿಗೆ ನೀಡುವ ನಗದು ರೂಪದ ಬಹುಮಾನ ಎಷ್ಟು ; ತಾಲ್ಲೂಕು ಮಟ್ಟದಲ್ಲಿ ಭಾಗವಹಿಸುವ ಸಂಘಗಳಿಗೆ ನಗದು ಬಹುಮಾನ ರೂಪದಲ್ಲಿ ಅನುದಾನ ಒದಗಿಸದೇ ಇರಲು ಕಾರಣಗಳೇನು ; ಅನುದಾನ ನೀಡಲು ಕ್ರಮ ಕೈಗೊಳ್ಳಲಾಗುವುದೇ ;

(ಇ) ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, ಗ್ರಾಮ ಪಂಚಾಯತ್‌ಗಳಲ್ಲಿ ಶೇಕಡಾ ೨% ಅನುದಾನವನ್ನು ಶೇಕಡಾ ೫% ಕ್ಕೆ ಏರಿಸಲು ಸರ್ಕಾರ ಕ್ರಮಕೈಗೊಳ್ಳುವುದೇ ; ಇಲ್ಲದೇ ಇದ್ದಲ್ಲಿ, ಕಾರಣಗಳೇನು ;

(ಈ) ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಯುವಜನ ಸಂಘಟನೆಗಳಿಗೆ ನೀಡುವ ಅನುದಾನ ಎಷ್ಟು ; ರಾಜ್ಯದಲ್ಲಿ ನಡೆಸಿದ ಕಾರ್ಯಕ್ರಮಗಳು ಯಾವುವು ? (ವಿವರ ಒದಗಿಸುವುದು)

## ೯೪ ಸಿಸಿ ಅನ್ವಯ ರಾಜ್ಯದಲ್ಲಿ ಸ್ವೀಕರಿಸಿದ ಅರ್ಜಿಗಳ ಬಗ್ಗೆ

**ಶ್ರೀ ಐವನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು):–**

೧೧೨೨ (೧೩೧೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೯೪ ಸಿಸಿ ಅನ್ವಯ ರಾಜ್ಯದಲ್ಲಿ ಸ್ವೀಕರಿಸಿದ ಒಟ್ಟು ಅರ್ಜಿಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಆ) ೯೪ ಸಿಸಿ ಯೋಜನೆಯಲ್ಲಿ ಎಷ್ಟು ಸ್ಥಳವನ್ನು ಮಂಜೂರು ಮಾಡಲು ಅವಕಾಶ ಇರುವುದು ಮತ್ತು ನಿಯಮಗಳೇನು ;

(ಇ) ೯೪ ಸಿಸಿ ಅರ್ಜಿಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸಲು ವಾರ್ಡ್‌ಗಳ ಮಟ್ಟದಲ್ಲಿ ಬೈಠಕ್ ಗಳನ್ನು ನಡೆಸಲು ಇಲಾಖೆ ಕ್ರಮ ಕೈಗೊಳ್ಳುವುದೇ;

(ಈ) ರಾಜ್ಯದಲ್ಲಿ ಎಷ್ಟು ಅರ್ಜಿಗಳನ್ನು ಇತ್ಯರ್ಥಪಡಿಸಲಾಗಿದೆ ; (ಜಿಲ್ಲಾವಾರು ವಿವರ ನೀಡುವುದು) ಮತ್ತು ಹಕ್ಕು ಪತ್ರ ನೀಡಲು ಇಲಾಖೆಯು ವಸೂಲು ಮಾಡುವ ಶುಲ್ಕ ಎಷ್ಟು ; ಮಾನದಂಡವೇನು ; (ವಿವರಿಸುವುದು)

(ಉ) ಈ ಅರ್ಜಿಗಳನ್ನು ವಿಚಾರಣೆ ನಡೆಸಲು ವಿಶೇಷ ತಹಸೀಲ್ದಾರರುಗಳನ್ನು ನೇಮಿಸಿ ಅರ್ಜಿಗಳನ್ನು ವಿತರಿಸಲು ಸರ್ಕಾರ ಕ್ರಮಕೈಗೊಳ್ಳುವುದೇ ? (ವಿವರ ನೀಡುವುದು)

## ರಾಜ್ಯದಲ್ಲಿರುವ ಸರ್ಕಾರಿ/ಖಾಸಗಿ /ಅನುದಾನಿತ ಐ.ಟಿ.ಐ ಸಂಖ್ಯೆಗಳ ಬಗ್ಗೆ

**ಶ್ರೀ ಐವನ್ ಡಿ, ಸೋಜಾ (ನಾಮನಿರ್ದೇಶನ ಹೊಂದಿದವರು):–**

೧೧೨೩ (೧೩೧೪) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಸರ್ಕಾರಿ/ಖಾಸಗಿ ಮತ್ತು ಅನುದಾನಿತ ಐ.ಟಿ.ಐ ಗಳ ಸಂಖ್ಯೆ ಎಷ್ಟು ;

(ಆ) ಐ.ಟಿ.ಐ ಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟ ವಿತರಿಸಲು ಇಲಾಖೆ ಕ್ರಮಕೈಗೊಂಡಿದೆಯೇ ; ಇಲ್ಲದೇ ಇದ್ದಲ್ಲಿ, ಕಾರಣಗಳೇನು ; ಈ ಬಗ್ಗೆ ಪ್ರಸ್ತಾವನೆ ಇಲಾಖೆ ಮುಂದಿದೆಯೇ ; (ವಿವರ ನೀಡುವುದು)

(ಇ) ರಾಜ್ಯದಲ್ಲಿ ಕಲಿಯುತ್ತಿರುವ ಐ.ಟಿ.ಐ ವಿದ್ಯಾರ್ಥಿಗಳಿಗೆ ಉದ್ಯೋಗ ಒದಗಿಸಲು ಇಲಾಖೆ ಕೈಗೊಂಡಿರುವ ಕ್ರಮಗಳೇನು ; ಪ್ರಸ್ತುತ ಎಷ್ಟು ಐ.ಟಿ.ಐ ವಿದ್ಯಾರ್ಥಿಗಳು ಉದ್ಯೋಗದಲ್ಲಿದ್ದಾರೆ ; ಎಷ್ಟು ಜನ ನಿರುದ್ಯೋಗಿಗಳು ಇದ್ದಾರೆ ; (ವಿವರ ನೀಡುವುದು)

(ಈ) ಸರ್ಕಾರಿ ಐ.ಟಿ.ಐ ಗಳಲ್ಲಿರುವ ಒಟ್ಟು ಶಿಕ್ಷಕರ ಸಂಖ್ಯೆ ಎಷ್ಟು ; ಒಟ್ಟು ಎಷ್ಟು ಹುದ್ದೆಗಳು ಖಾಲಿ ಇವೆ ; ಭರ್ತಿ ಮಾಡಲು ಇಲಾಖೆ ಮುಂದಿರುವ ಕ್ರಮಗಳೇನು ?

## ಆನೆಗಳ ಕಾರಿಡಾರ್ ಯೋಜನೆ

**ಡಾ॥ ಜಯಮಾಲ ರಾಮಚಂದ್ರ (ನಾಮನಿರ್ದೇಶನ):–**

೧೧೨೪ (೧೩೮೫) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಆನೆಗಳು ಕಾಡಿನಿಂದ ನಾಡಿಗೆ ಬರದಂತೆ ತಡೆಯಲು ಸರ್ಕಾರ ಕೈಗೊಂಡ ಕ್ರಮಗಳು ಯಾವುವು ;

(ಆ) ಈ ಕ್ರಮಗಳ ಅನುಷ್ಠಾನಕ್ಕಾಗಿ ಸರ್ಕಾರ ಖರ್ಚು ಮಾಡಿರುವ ಮೊತ್ತ ಎಷ್ಟು ;

(ಇ) ಸೋಲಾರ್(ನ) ಬೇಲಿ ನಿರ್ಮಾಣ, ಆನೆ ಕಂದಕ ಹಾಗೂ ಆನೆ ಕಾರಿಡಾರ್ ಯೋಜನೆಗಳು ಯಾವ ಹಂತದಲ್ಲಿದೆ ;

(ಈ) ಪ್ರಸ್ತುತ ಜಾರಿಗೆ ತರಲು ಉದ್ದೇಶಿಸುವ ಈ ಯೋಜನೆ ಯಾವ ದೇಶದ ಮಾದರಿಯದ್ದಾಗಿದೆ ?

## ಕಂದಾಯ ಇಲಾಖೆ ಮೂಲಕ ಅನುಷ್ಠಾನಗೊಳ್ಳುತ್ತಿರುವ ಸಾಮಾಜಿಕ ಭದ್ರತಾ ಕಾರ್ಯಕ್ರಮದ ಬಗ್ಗೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೧೨೫ (೧೨೬೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಂದಾಯ ಇಲಾಖೆಯ ಮೂಲಕ ಅನುಷ್ಠಾನಗೊಳಿಸಲಾಗುತ್ತಿರುವ ಸಾಮಾಜಿಕ ಭದ್ರತಾ ಯೋಜನಾ ಕಾರ್ಯಕ್ರಮಗಳಾವುವು ; ಅರ್ಹತಾ ಮಾನದಂಡಗಳೇನು ;

(ಆ) ಸದರಿ ಯೋಜನೆಗಳು ಅರ್ಹರಿಗೆ ತಲುಪುತ್ತಿದೆಯೇ ;

(ಇ) ಸಾಮಾಜಿಕ ಭದ್ರತಾ ಯೋಜನೆಯಲ್ಲಿ ಒಟ್ಟು ಎಷ್ಟು ಮಂದಿ ಫಲಾನುಭವಿಗಳಿಗೆ ಸೌಲಭ್ಯ ನೀಡಲಾಗುತ್ತಿದೆ ; (ಯೋಜನೆವಾರು, ಜಿಲ್ಲೆ, ತಾಲ್ಲೂಕುವಾರು ವಿವರ ಒದಗಿಸುವುದು)

(ಈ) ಗ್ರಾಮೀಣಾ ಪ್ರದೇಶದ ಬಡವರಿಗೆ, ಅರ್ಹರಿಗೆ ಸಾಮಾಜಿಕ ಭದ್ರತಾ ಪಿಂಚಣಿ ಮತ್ತು ಮಾಶಾಸನ ತಲುಪಿಸುವುದನ್ನು ಖಾತ್ರಿ ಪಡಿಸುವುದರ ಬಗ್ಗೆ ಮತ್ತು ಯೋಜನೆಯ ದುರುಪಯೋಗ ತಡೆಗಟ್ಟಲು ಸರ್ಕಾರ ಯಾವ ಯಾವ ಕ್ರಮಕೈಗೊಂಡಿದೆ ; ಮುಂದೆ ಯಾವ ಕ್ರಮಕೈಗೊಳ್ಳಲಿದೆ ? (ಸಂಪೂರ್ಣ ವಿವರ ನೀಡುವುದು)

## ದಂಡಾವತಿ ಯೋಜನೆಯ ವಿವಿಧ ಕಾಮಗಾರಿಗಳಿಗೆ ಖರ್ಚಾಗಿರುವ ವಿವರ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೧೨೬ (೧೨೬೫) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಸೊರಬ ತಾಲ್ಲೂಕು ದಂಡಾವತಿ ಯೋಜನೆಗೆ ನೀಡಿದ ಅನುದಾನ ವೆಷ್ಟು ;

(ಆ) ಸದರಿ ಕಾಮಗಾರಿಗೆ ಆಡಳಿತಾತ್ಮಕ ಆದೇಶವನ್ನು ನೀಡಲಾಗಿದ್ದು ಯಾವಾಗ ; (ಆದೇಶದ ಪ್ರತಿಯೊಂದಿಗೆ ವಿವರ ನೀಡುವುದು)

(ಇ) ಸದರಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಸರ್ಕಾರಕ್ಕಿರುವ ತೊಂದರೆಯೇನು ;

(ಈ) ಕಾಮಗಾರಿಯ ಅನುದಾನವನ್ನು ಕಳೆದ ಮೂರು ವರ್ಷ ಯಾವ ಯಾವ ಯೋಜನೆಗೆ ಬಳಸಿಕೊಳ್ಳಲಾಗಿದೆ ; (ಕಾಮಗಾರಿಯ ಅನುದಾನ, ಪೂರ್ಣ ವಿವರಗಳನ್ನು ವರ್ಷವಾರು ಒದಗಿಸುವುದು)

(ಉ) ಆ ಪೈಕಿ ಬಾಕಿ ಉಳಿದಿರುವ ಅನುದಾನ ಎಷ್ಟು ; (ವಿವರ ನೀಡುವುದು)

(ಊ) ದಂಡಾವತಿ ಯೋಜನೆ ಅನುದಾನದಲ್ಲಿ ಖರ್ಚಾಗಿರುವ ಪೂರ್ಣ ವಿವರ ಕಾಮಗಾರಿಗಳೊಂದಿಗೆ ನೀಡುವುದು ;

(ಋ) ದಂಡಾವತಿ ಯೋಜನೆ ಸಾಧಕ-ಬಾಧಕಗಳು ಮತ್ತು ಯೋಜನೆಯ ವಿಳಂಬಕ್ಕೆ ಸೂಕ್ತ ಕಾರಣ ನೀಡುವುದು ?

## ವರಾಹಿ ಯೋಜನೆಯಿಂದ ಕರಾವಳಿ ಕೆರೆ ತುಂಬುವ ಬಗ್ಗೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೧೨೭ (೧೨೬೭) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಉಡುಪಿ ಜಿಲ್ಲೆಯ 'ವರಾಹಿ' ನೀರಾವರಿ ಯೋಜನೆಯಿಂದ ಯಾವ-ಯಾವ ಗ್ರಾಮಗಳಿಗೆ ಕೃಷಿಗಾಗಿ ನೀರು ಹರಿಸಲಾಗುತ್ತಿದೆ ; (ಸಂಪೂರ್ಣ ವಿವರ ಒದಗಿಸುವುದು)

(ಆ) ವರಾಹಿ ನೀರಾವರಿ ಯೋಜನೆಯಿಂದ ಯಾವ-ಯಾವ ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ ;

(ಇ) ಕರಾವಳಿಯಲ್ಲಿನ ಭಾಗದ ಉಪ್ಪುನೀರಿನ ಸಮಸ್ಯೆ ಬಗೆ ಹರಿಸುವ ನಿಟ್ಟಿನಲ್ಲಿ ವರಾಹಿ ಯೋಜನೆಯ ನೀರಿನಿಂದ ಕೆರೆ ತುಂಬುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದೇ ;

(ಈ) ಕರಾವಳಿ ಭಾಗದ ಕೆರೆಗಳನ್ನು ವರಾಹಿ ನೀರಿನಿಂದ ತುಂಬಿದಲ್ಲಿ, ಈ ಭಾಗದ ಉಪ್ಪುನೀರಿನ ಸಮಸ್ಯೆ ಕಡಿಮೆಯಾಗುವುದರೊಂದಿಗೆ, ಕೃಷಿ ಮತ್ತು ಕುಡಿಯುವ ನೀರಿನ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಸರ್ಕಾರದ ನಿಲುವೇನು ; ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಿದೆ ?

## ಅರಣ್ಯ ಉತ್ಪನ್ನಗಳ ಬೆಳೆಗೆ ಪ್ರೋತ್ಸಾಹ ನೀಡುವ ಬಗ್ಗೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೧೨೮ (೧೨೬೬) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಶ್ರೀಗಂಧ, ರಕ್ತಚಂದನ, ತೇಗ ಮರಗಳನ್ನು ಖಾಸಗಿ ಜಮೀನಿನಲ್ಲಿ ಬೆಳೆಯಲು ಮತ್ತು ಮಾರಾಟ ಮಾಡಲು ಇರುವ ನಿಯಮಗಳೇನು ; (ವಿವರ ಒದಗಿಸುವುದು)

(ಆ) ಅರಣ್ಯ ಇಲಾಖೆಯ ಮೂಲಕ ಶ್ರೀಗಂಧ, ರಕ್ತಚಂದನ ಬೆಳೆಯಂತಹ ಆದಾಯ ತರುವ ಉತ್ಪನ್ನಗಳಿಗೆ ಪ್ರೋತ್ಸಾಹ ನೀಡುವ ಯೋಜನೆ ಜಾರಿಯಲ್ಲಿದೆಯೆ ; (ಹೌದಾದಲ್ಲಿ ವಿವರ ಒದಗಿಸುವುದು)

(ಇ) ಗ್ರಾಮೀಣ ಜನರಿಗೆ ಅವರ ಜಮೀನಿನಲ್ಲಿ ಆದಾಯ ತರುವಂತಹ ಅರಣ್ಯ ಉತ್ಪನ್ನಗಳನ್ನು ಬೆಳೆಸಲು ಮತ್ತು ಈ ಬಗ್ಗೆ ಮಾಹಿತಿಯನ್ನು ನೀಡಲು ಸರ್ಕಾರ ಯಾವ ಕ್ರಮ ಹಮ್ಮಿಕೊಂಡಿದೆ ? (ವಿವರ ಒದಗಿಸುವುದು)

## ಸೊರಬ ತಾಲ್ಲೂಕು ಕಥವಿ ಏತ ನೀರಾವರಿಯ ಕಾಮಗಾರಿಯ ವಿಳಂಬದ ಬಗ್ಗೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೧೨೯ (೧೨೬೪) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸೊರಬ ತಾಲ್ಲೂಕು ಕಥವಿ ಏತ ನೀರಾವರಿ ಯೋಜನೆಗೆ ಕಳೆದ ಮೂರು ವರ್ಷದಲ್ಲಿ ಬಿಡುಗಡೆ ಮಾಡಿರುವ ಅನುದಾನ ಎಷ್ಟು ; (ವರ್ಷವಾರು, ಯೋಜನೆವಾರು ವಿವರ ನೀಡುವುದು)

(ಆ) ಸದರಿ ಕಾಮಗಾರಿಯನ್ನು ಇದುವರೆಗೂ ಪ್ರಾರಂಭಿಸದಿರಲು ಕಾರಣವೇನು ; (ವಿವರ ನೀಡುವುದು)

(ಇ) ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು, ಪೂರ್ಣಗೊಳಿಸಲಾಗುವುದು ಯಾವಾಗ ; ಸದರಿ ಕಾಮಗಾರಿಯ ಟೆಂಡರನ್ನು ಯಾರು ಪಡೆದಿರುತ್ತಾರೆ ; (ದಿನಾಂಕದೊಂದಿಗೆ ಪೂರ್ಣ ವಿವರ ನೀಡುವುದು)

(ಈ) ಒಟ್ಟಾರೆ ಕಥವಿ ಏತ ನೀರಾವರಿಯ ಕಾಮಗಾರಿಯನ್ನು ಪೂರ್ಣಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ? (ಪೂರ್ಣ ವಿವರ ನೀಡುವುದು)

## ಬಳ್ಳಾರಿ ಜಿಲ್ಲಾ ವ್ಯಾಪ್ತಿಯಲ್ಲಿರುವ ಸರ್ಕಾರಿ ಜಮೀನುಗಳ ಸಂರಕ್ಷಣೆ ಬಗ್ಗೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೧೩೦ (೧೨೮೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬಳ್ಳಾರಿ ಜಿಲ್ಲಾ ವ್ಯಾಪ್ತಿಯಲ್ಲಿರುವ ಸರ್ಕಾರಿ ಸ್ವಾಮ್ಯದ ಜಮೀನಿನ ವಿಸ್ತೀರ್ಣವೆಷ್ಟು ; ತಾಲ್ಲೂಕುವಾರು ಪ್ರಮಾಣ ಕುರಿತಾದ ವಿವರಗಳೇನು ;

(ಆ) ಗೋಮಾಳ, ಮತ್ತಿತರ ಇಲಾಖೆಯ ಸ್ವಾಧಿನದಲ್ಲಿರತಕ್ಕಂತಹ ಜಮೀನುಗಳನ್ನು ಅಕ್ರಮ ಸ್ವಾಮ್ಯ ಹೊಂದುವ ಸಾಧ್ಯತೆಗಳು ಹೆಚ್ಚಿರುವುದರಿಂದ ಸರ್ಕಾರಿ ಜಮೀನನ್ನು ಗುರುತಿಸಿ ಅವುಗಳ ಸಂರಕ್ಷಣೆಗೆ ಕಟ್ಟುನಿಟ್ಟಿನ ಹಾಗೂ ಪರಿಣಾಮಕಾರಿ ಕ್ರಮಗಳನ್ನು ಜರುಗಿಸುವ ನಿಟ್ಟಿನಲ್ಲಿ ಕೈಗೊಂಡಿರುವ ಕ್ರಮಗಳೇನು ;

(ಇ) ಜಿಲ್ಲೆಯಲ್ಲಿ ಇದುವರೆಗೆ ಗುರುತಿಸಲಾದ ಅಕ್ರಮ ಒತ್ತುವರಿ ಪ್ರಕರಣಗಳ ಸಂಖ್ಯೆ ಎಷ್ಟು ; ಮತ್ತು ಅಕ್ರಮ ತೆರವಿಗಾಗಿ ಸರ್ಕಾರ ಜರುಗಿಸಿದ ಕ್ರಮಗಳ ಕುರಿತಾದ ವಿವರಗಳನ್ನು ನೀಡುವುದು ?

## ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಸಣ್ಣ ಕೆರೆಗಳ ಅಭಿವೃದ್ಧಿ

**ಶ್ರೀ ಕೆ.ಸಿ. ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೧೩೧ (೧೨೮೪) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಳೆದ ಮೂರು ವರ್ಷಗಳಲ್ಲಿ ಬಳ್ಳಾರಿ ಜಿಲ್ಲೆಯ ವ್ಯಾಪ್ತಿಯಲ್ಲಿ ಕೈಗೊಂಡ ಸಣ್ಣ ನೀರಾವರಿ ಕೆರೆಗಳ ಪುನರುಜ್ಜೀವನ, ಸುಧಾರಣೆ, ದುರಸ್ಥಿ ಮುಂತಾದ ಕಾಮಗಾರಿಗಳು ಎಷ್ಟು ; ಯಾವುವು ; (ವರ್ಷವಾರು ವಿವರ ನೀಡುವುದು) ಯೋಜನೆಗಳ ಮೂಲಕ ನಿಗಧಿತ ಪ್ರಮಾಣದಲ್ಲಿ ವ್ಯಾಪ್ತಿಗೆ ಬರುವ ಜಮೀನುಗಳ ರೈತರಿಗೆ ನೀರಾವರಿ ಸೌಲಭ್ಯವನ್ನು ಒದಗಿಸಿಕೊಡಲಾಗಿದೆಯೇ ; ಇಲ್ಲವಾದಲ್ಲಿ, ಕಾರಣವೇನು ಮತ್ತು ಪರಿಹಾರ ಕುರಿತಾಗಿ ಕೈಗೊಂಡ ಮುಂದಿನ ಕ್ರಮಗಳೇನು ;

(ಆ) ಸಣ್ಣ ನೀರಾವರಿ ಇಲಾಖೆಯ ಮೂಲಕ ಬಳ್ಳಾರಿ ಜಿಲ್ಲೆಗೆ ೨೦೧೩-೧೪, ೨೦೧೪-೧೫ ಮತ್ತು ೨೦೧೫-೧೬ರಲ್ಲಿ ಹಂಚಿಕೆಯಾದ ಅನುದಾನ ಎಷ್ಟು ; (ವಿವರ ನೀಡುವುದು) ಅನುದಾನದ ಮೊತ್ತವನ್ನು ಉದ್ದೇಶಿತ ಕಾಮಗಾರಿಗಳಿಗೆ ಸಕಾಲಿಕವಾಗಿ ಬಳಸಿಕೊಳ್ಳಲಾಗಿದೆಯೇ ;

(ಇ) ನೀರಾವರಿ ಕ್ಷೇತ್ರದಲ್ಲಿ ಹಿಂದುಳಿದಿರುವ ಬಳ್ಳಾರಿ ಜಿಲ್ಲೆಗೆ ಸಣ್ಣ ನೀರಾವರಿ ಯೋಜನೆಗಳ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸಿ ರೈತರುಗಳಿಗೆ ಅನುಕೂಲ ಮಾಡಿಕೊಡುವ ಕುರಿತು ಸರ್ಕಾರದ ಕ್ರಮಗಳೇನು ;

(ಈ) ೨೦೧೪-೧೫ ಮತ್ತು ೨೦೧೫-೧೬ ನೇ ಸಾಲಿನ ಜನವರಿ ಅಂತ್ಯದವರೆಗೆ ಬಳ್ಳಾರಿ ಜಿಲ್ಲಾ ವ್ಯಾಪ್ತಿಯ ಪ್ರತಿಯೊಂದು ಸಣ್ಣ ನೀರಾವರಿ ಕೆರೆಗಳ ನೀರಾವರಿ ಸಾಮರ್ಥ್ಯ ಲಭ್ಯವಾಗಿರುವ ನೀರಾವರಿ ಪ್ರಮಾಣ ಎಷ್ಟು ? (ತಾಲ್ಲೂಕುವಾರು ವಿವರಗಳನ್ನು ನೀಡುವುದು)

## ಹೈದರಾಬಾದ್-ಕರ್ನಾಟಕ ಪ್ರದೇಶದಲ್ಲಿ ಜವಳಿ ಉದ್ಯಮದ ಅಭಿವೃದ್ಧಿ ಕುರಿತು

**ಶ್ರೀ ಕೆ.ಸಿ. ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೧೩೨ (೧೨೮೧) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಹೈದರಾಬಾದ್-ಕರ್ನಾಟಕ ಪ್ರದೇಶಗಳಲ್ಲಿ ಕೈಮಗ್ಗ, ಗುಡಿ ಕೈಗಾರಿಕೆ ಮತ್ತು ಪವರ್‌ಲೂಮ್ ವಸ್ತ್ರೋದ್ಯಮದ ಪ್ರಸ್ತುತ ಸ್ಥಿತಿಗತಿಗಳು ಹಾಗೂ ಅವುಗಳ ಅಭಿವೃದ್ಧಿಗಾಗಿ ಜವಳಿ ಇಲಾಖೆಯವರು ಅನುಷ್ಠಾನಗೊಳಿಸುತ್ತಿರುವ ಯೋಜನಾ ಸೌಲಭ್ಯಗಳು ಯಾವುವು ;

(ಆ) ಹೈದರಾಬಾದ್-ಕರ್ನಾಟಕ ಪ್ರದೇಶ ವ್ಯಾಪ್ತಿಯಲ್ಲಿರುವ ಕೈಮಗ್ಗ ಮತ್ತು ವಿದ್ಯುತ್ ಮಗ್ಗಗಳ ಸಂಖ್ಯೆ ಹಾಗೂ ವೃತ್ತಿನಿರತರ ಸಂಖ್ಯೆ ಎಷ್ಟು ; (ಜಿಲ್ಲಾವಾರು ಸಂಖ್ಯಾ ವಿವರ ನೀಡುವುದು)

(ಇ) ಈ ಯೋಜನೆಗಳ ಮೂಲಕ ಎಷ್ಟು ಜನ ಫಲಾನುಭವಿಗಳಿಗೆ ಸೌಲಭ್ಯವನ್ನು ಒದಗಿಸಿಕೊಡಲಾಗಿದೆ ; ಹೈದರಾಬಾದ್-ಕರ್ನಾಟಕ ಪ್ರದೇಶಗಳಲ್ಲಿ ಜವಳಿ ಇಲಾಖೆಗೆ ನೀಡಿರುವ ಅನುದಾನ ಮತ್ತು ಅದರ ಯೋಜನಾ ನಿರ್ವಹಣೆ ಕುರಿತಾದ ವಿವರಗಳೇನು ?

## ಹೈದ್ರಾಬಾದ್–ಕರ್ನಾಟಕ ಪ್ರದೇಶದಲ್ಲಿ ಒಳನಾಡು ಮೀನುಗಾರಿಕೆ ಅಭಿವೃದ್ಧಿ ಕುರಿತು

**ಶ್ರೀ ಕೆ.ಸಿ. ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೧೩೩ (೧೨೮೦) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹೈದ್ರಾಬಾದ್–ಕರ್ನಾಟಕ ಪ್ರದೇಶಗಳಲ್ಲಿ ಒಳನಾಡು ಮೀನುಗಾರಿಕೆಗೆ ಪ್ರೋತ್ಸಾಹಿಸುವ ದಿಶೆಯಲ್ಲಿ ಇಲಾಖೆಯವರು ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳಾವುವು ; (ವಿವರ ನೀಡುವುದು)

(ಆ) ಪಾರಂಪರಿಕವಾಗಿ ಮೀನುಗಾರಿಕೆ ಮಾಡಿಕೊಂಡು ಬಂದಿರುವ ಮೀನುಗಾರರಿಗೆ ಒದಗಿಸಿಕೊಟ್ಟಿರುವ ಯೋಜನಾ ಸೌಲಭ್ಯಗಳು ಯಾವುವು ; ಎಷ್ಟು ಜನ ಮೀನುಗಾರರಿಗೆ ವಸತಿ ಮತ್ತಿತರ ಸೌಲಭ್ಯಗಳನ್ನು ಒದಗಿಸಿಕೊಡಲಾಗಿದೆ ;

(ಇ) ಹೈದ್ರಾಬಾದ್–ಕರ್ನಾಟಕ ಪ್ರದೇಶದ ಜಿಲ್ಲೆಗಳಿಗೆ ಇಲಾಖೆಯು ಒದಗಿಸಿಕೊಟ್ಟಿರುವ ರಾಜ್ಯ ಮತ್ತು ಕೇಂದ್ರ ಪುರಸ್ಕೃತ ಯೋಜನಾ ಅನುದಾನ ಎಷ್ಟು? (ಎರಡು ವರ್ಷಗಳ ವಿವರ ನೀಡುವುದು)

## ಬಳ್ಳಾರಿ ಜಿಲ್ಲಾ ವ್ಯಾಪ್ತಿಯಲ್ಲಿ ಅರಣ್ಯಾಭಿವೃದ್ಧಿ ಕುರಿತಾದ ಯೋಜನೆಗಳ ಅನುಷ್ಠಾನದ ಬಗ್ಗೆ

**ಶ್ರೀ ಕೆ.ಸಿ. ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೧೩೪ (೧೨೮೨) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬಳ್ಳಾರಿ ಜಿಲ್ಲಾ ವ್ಯಾಪ್ತಿಯಲ್ಲಿ ಅರಣ್ಯಾಭಿವೃದ್ಧಿ ಕುರಿತು ಸರಕಾರ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳಾವುವು ; (ವಿವರ ನೀಡುವುದು)

(ಆ) ಬಳ್ಳಾರಿ ಜಿಲ್ಲೆಯ ಪ್ರಾಕೃತಿಕ ಪರಿಸರಕ್ಕೆ ಅನುಗುಣವಾಗಿ ಅರಣ್ಯ ಸಂಪತ್ತನ್ನು ಹೆಚ್ಚಿಸುವ ಮತ್ತು ಇರುವ ಅರಣ್ಯ ಸಂಪತ್ತನ್ನು ರಕ್ಷಿಸುವ ಕುರಿತಾದ ಕಾರ್ಯಕ್ರಮಗಳು ಯಾವುವು ; ಕಳೆದ ಮೂರು ವರ್ಷಗಳಲ್ಲಿ ಈ ಕುರಿತಾಗಿ ಜಾರಿಗೊಳಿಸಿದ ಯೋಜನೆಗಳಾವುವು ; (ವಿವರ ನೀಡುವುದು)

(ಇ) ಜಿಲ್ಲಾ ವ್ಯಾಪ್ತಿಯಲ್ಲಿರುವ ಅರಣ್ಯ ಇಲಾಖಾ ಕಛೇರಿಗಳು ಹಾಗೂ ಅವುಗಳು ಹೊಂದಿರುವ ಮೂಲ ಸೌಲಭ್ಯಗಳು ಹಾಗೂ ಸಿಬ್ಬಂದಿ ಕೊರತೆ ಇತ್ಯಾದಿಗಳನ್ನು ಪರಿಪೂರ್ಣವಾಗಿ ಹೊಂದುವಲ್ಲಿ ಕೈಗೊಂಡ ಕ್ರಮಗಳು ಹಾಗೂ ಸಿಬ್ಬಂದಿ ಕೊರತೆಯ ವಿವರಗಳನ್ನು ನೀಡುವುದು ?

## ರಾಜ್ಯದಲ್ಲಿ ಕಳೆದ ೩ ವರ್ಷದ ಅವಧಿಯಲ್ಲಿ ಕೆರೆಗಳಲ್ಲಿ ಹೂಳೆತ್ತುವ ಕಾರ್ಯಕ್ರಮದ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೧೧೩೫ (೧೩೧೦) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಒಟ್ಟು ಕೆರೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಕಳೆದ ೩ ವರ್ಷಗಳ ಅವಧಿಯಲ್ಲಿ ಎಷ್ಟು ಕೆರೆಗಳಲ್ಲಿ ಹೂಳೆತ್ತುವ ಕಾರ್ಯಕ್ರಮವನ್ನು ಕೈಗೊಳ್ಳಲಾಗಿದೆ ;

(ಇ) ಇದಕ್ಕಾಗಿ ಕಳೆದ ೩ ವರ್ಷಗಳಲ್ಲಿ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಈ) ಈ ಹೂಳೆತ್ತುವ ಕಾರ್ಯವನ್ನು ಕೈಗೊಂಡಿರುವುದರಿಂದ ಆಯಾ ಭಾಗಗಳಲ್ಲಿ ಆದ ಅನುಕೂಲಗಳೇನು ? (ವಿವರ ನೀಡುವುದು)

## ರಾಜ್ಯದಲ್ಲಿರುವ ಕೈಗಾರಿಕಾ ತರಬೇತಿ ಕೇಂದ್ರಗಳ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೧೧೩೬ (೧೩೧೧) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಒಟ್ಟು ಕೈಗಾರಿಕಾ ತರಬೇತಿ ಕೇಂದ್ರಗಳು ಎಷ್ಟು ; (ಸರ್ಕಾರಿ ಮತ್ತು ಖಾಸಗಿ)

(ಆ) ಈ ಎಲ್ಲಾ ಕೈಗಾರಿಕಾ ತರಬೇತಿ ಕೇಂದ್ರಗಳಲ್ಲಿ ಒಟ್ಟು ಎಷ್ಟು ವಿದ್ಯಾರ್ಥಿಗಳಿಗೆ ಪ್ರವೇಶ ಅವಕಾಶ ಇದೆ ;

(ಇ) ಕಳೆದ ೩ ವರ್ಷಗಳ ಅವಧಿಯಲ್ಲಿ ವಿವಿಧ ಕೈಗಾರಿಕಾ ತರಬೇತಿ ಕೇಂದ್ರಗಳಲ್ಲಿ ಎಷ್ಟು ಉದ್ಯೋಗ ಮೇಳಗಳನ್ನು ಆಯೋಜಿಸಲಾಗಿದೆ ;

(ಈ) ಈ ಉದ್ಯೋಗ ಮೇಳದಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಉ) ತೀವ್ರಗತಿಯಲ್ಲಿ ಬದಲಾಗುತ್ತಿರುವ ಈ ಔದ್ಯೋಗಿಕ ಯುಗದಲ್ಲಿ ಅವರ ಬೇಡಿಕೆಗೆ ತಕ್ಕಂತೆ ಹೊಸ ಟ್ರೇಡ್‌ಗಳನ್ನು (ವಿಷಯ) ಅಳವಡಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ರಾಜ್ಯದಲ್ಲಿ ವಸತಿ ರಹಿತ ಬಡ ಜನರಿಗೆ ನಿವೇಶನ ಹಂಚಿಕೆ ಮಾಡಲು ಕಂದಾಯ ಇಲಾಖೆಯಿಂದ ಭೂ ಮಂಜೂರಾತಿ ವಿಳಂಬ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೧೧೩೭ (೧೩೦೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ವಸತಿ ರಹಿತ ಬಡ ಜನರಿಗೆ ನಿವೇಶನ ರಚಿಸಲು ಕಂದಾಯ ಇಲಾಖೆಗೆ ಸಲ್ಲಿಸಲಾಗುತ್ತಿರುವ ಪ್ರಸ್ತಾವನೆಗಳಿಗೆ ಭೂ ಮಂಜೂರಾತಿ ವಿಳಂಬದಿಂದ ಬಡ ಜನರಿಗೆ ನಿವೇಶನ ಹಂಚಿಕೆ ಮಾಡಲು ಸಾಧ್ಯವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಕಳೆದ ಮೂರು ವರ್ಷಗಳಿಂದ ಇಲಾಖೆಗೆ ಸಲ್ಲಿಸಲಾಗಿರುವ ಪ್ರಸ್ತಾವನೆಗಳೆಷ್ಟು ; ಇವುಗಳಲ್ಲಿ ಮಂಜೂರಾದ ಹಾಗೂ ಬಾಕಿ ಇರುವ ಪ್ರಸ್ತಾವನೆಗಳೆಷ್ಟು ;

(ಇ) ಮಂಜೂರಾತಿಯ ವಿಳಂಬಕ್ಕೆ ಕಾರಣಗಳೇನು ; ಯಾವಾಗ ಮಂಜೂರು ಮಾಡಲಾಗುವುದು ?

## ರಾಜ್ಯದಲ್ಲಿ ಭೂ ಮಾರ್ಗಸೂಚಿ ದರ ಪರಿಷ್ಕರಣೆ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೧೧೩೮ (೧೩೧೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಭೂ ಮಾರ್ಗಸೂಚಿ ದರ ಪರಿಷ್ಕರಣೆಯನ್ನು ಎಷ್ಟು ವರ್ಷಕ್ಕೊಮ್ಮೆ ಮಾಡಲಾಗುತ್ತದೆ ;

F3

(ಆ) ಭೂ ಮಾರ್ಗ ಸೂಚಿದರ ಪರಿಷ್ಕರಿಸಲು ಇರುವ ಮಾನದಂಡಗಳೇನು ;

(ಇ) ೨೦೧೩ನೇ ಸಾಲಿನ ನಂತರ ಎಷ್ಟು ಸಲ ಈ ದರ ಪರಿಷ್ಕರಣೆ ಮಾಡಲಾಗಿದೆ ;

(ಈ) ಈ ಭೂ ಮಾರ್ಗಸೂಚಿ ದರವನ್ನು ಪ್ರತಿ ವರ್ಷವು ಪರಷ್ಕರಣೆ ಮಾಡಬೇಕೆಂಬುದು ಸರ್ಕಾರದ ಚಿಂತನೆಯಲ್ಲಿದೆಯೇ ;

(ಉ) ಇದ್ದರೆ, ಇದಕ್ಕೆ ಕಾರಣಗಳೇನು ?

## ಖಾನಾಪುರ ಪಶ್ಚಿಮ ಘಟ್ಟ ಅರಣ್ಯದಲ್ಲಿನ ಮರಗಳ್ಳರ ಕುರಿತು

**ಶ್ರೀ ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೧೩೯ (೧೩೦೨) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಳಗಾವಿ ಜಿಲ್ಲೆಯ ಖಾನಾಪುರ ಪಶ್ಚಿಮ ಘಟ್ಟ ಪ್ರದೇಶದಲ್ಲಿ ಮರಗಳ್ಳರ ಕೊಡಲಿ ಏಟಿಗೆ ಸಾವಿರಾರು ಮರಗಳ ಮಾರಣ ಹೋಮವಾಗುತ್ತಿರುವ ವಿಚಾರ ಸರಕಾರದ ಗಮನಕ್ಕೆ ಬಂದಿದೆಯೇ ;

(ಆ) ಆಗಿದ್ದಲ್ಲಿ ಲೋಂಡಾ ಅರಣ್ಯ ವಲಯದಲ್ಲಿ ತಿವೋಲಿ ಅರಣ್ಯ ಪ್ರದೇಶದಲ್ಲಿ ಅರಣ್ಯ ಇಲಾಖೆಯಿಂದ ಸಂಚಾರಿ ದಳದ ಅಧಿಕಾರಿಗಳು ದಾಳಿ ಮಾಡಿ ಬೆಲೆಬಾಳುವ ಮರಗಳ ನಾಟುಗಳನ್ನು ವಶಪಡಿಸಿಕೊಂಡಿರುವುದು ನಿಜವೇ ; ಎಷ್ಟು ನಾಟುಗಳನ್ನು ವಶಪಡಿಸಿಕೊಂಡಿರುತ್ತಾರೆ, ಅವುಗಳ ಈಗಿನ ಮಾರುಕಟ್ಟೆ ಬೆಲೆ ಏನು ;

(ಇ) ಸಂಚಾರ ದಳದ ಅಧಿಕಾರಿಗಳು ದಾಳಿ ನಡೆಸುವವರೆಗೆ ಅರಣ್ಯ ಇಲಾಖೆಯ ಸ್ಥಳೀಯ ಅಧಿಕಾರಿಗಳಿಗೆ ಈ ಕೃತ್ಯ ನಡೆದ ಬಗ್ಗೆ ಮಾಹಿತಿ ಇರಲಿಲ್ಲವೇ ; ಸ್ಥಳೀಯ ಅಧಿಕಾರಿಗಳು ಇದರಲ್ಲಿ ಶಾಮೀಲಾಗಿದ್ದಾರೆಯೇ ; ಇದ್ದಲ್ಲಿ ಅವರ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ;

(ಈ) ಈ ಭಾಗದಲ್ಲಿ ಇಂತಹ ಪ್ರಕರಣಗಳನ್ನು ತಡೆಗಟ್ಟಲು ಸರಕಾರವು ಕೈಗೊಂಡ ಸೂಕ್ತ ಕ್ರಮಗಳೇನು ?

## ಸರ್ಕಾರಿ / ಖಾಸಗಿ ಆಸ್ತಿಗಳ ಅತಿಕ್ರಮ ಪರಭಾರೆ ತಡೆಗೆ ಆಸ್ತಿಹಕ್ಕು ಕಾರ್ಡ್ ವಿತರಿಸುವ ಬಗ್ಗೆ

**ಶ್ರೀ ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನ** (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

೧೧೪೦ (೧೩೦೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿಯ ಸರ್ಕಾರಿ ಹಾಗೂ ಖಾಸಗಿ ಆಸ್ತಿಗಳ ಅತಿಕ್ರಮ ಪರಭಾರೆಗೆ ಕಡಿವಾಣ ಹಾಕಲು ಆಸ್ತಿ ಹಕ್ಕು ಕಾರ್ಡನ್ನು ವಿತರಿಸುವ ವಿಚಾರ ಸರ್ಕಾರದ ಮುಂದೆ ಇದೆಯೇ ;

(ಆ) ಹಾಗಿದ್ದಲ್ಲಿ ಆಸ್ತಿ ಹಕ್ಕು ಕಾರ್ಡನ್ನು ಪ್ರಾಯೋಗಿಕವಾಗಿ ಜಾರಿ ಮಾಡಲು ಆಯ್ಕೆ ಮಾಡಿದ ನಗರಗಳು ಯಾವುವು ; ಆಯ್ಕೆ ಮಾಡಿದ ನಗರಗಳಲ್ಲಿ ಈ ಯೋಜನೆಯು ಪೂರ್ಣಗೊಂಡಿದೆಯೇ ;

(ಇ) ಈ ಯೋಜನೆಯಿಂದ ಸಾರ್ವಜನಿಕ ಮತ್ತು ಖಾಸಗಿ ಆಸ್ತಿಗಳ ಯಾವ ಯಾವ ನಿಖರ ಮಾಹಿತಿ ಲಭ್ಯವಾಗಲಿವೆ ;

(ಈ) ಒಂದು ವೇಳೆ ಈ ಯೋಜನೆಯನ್ನು ಪ್ರಾಯೋಗಿಕವಾಗಿ ಜಾರಿ ಮಾಡಿದ ನಗರಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಜಾರಿಗೊಳ್ಳದೆ ಇದ್ದಲ್ಲಿ ಅದಕ್ಕೆ ಕಾರಣಗಳೇನು ಪ್ರಾಯೋಗಿಕವಾಗಿ ಆಯ್ಕೆಯಾದ ನಗರಗಳಲ್ಲಿ ಇನ್ನೂ ಪೂರ್ಣವಾಗಿ ಜಾರಿಗೊಳ್ಳದೆ ಇದ್ದರೂ ಈ ಯೋಜನೆಯನ್ನು ಎಲ್ಲ ನಗರಗಳಲ್ಲೂ ತರಾತುರಿಯಲ್ಲಿ ಜಾರಿಗೊಳಿಸುವುದು ಸರಿಯೇ ?

## ಖಾನಾಪುರ ತಾಲ್ಲೂಕಿನ ಫಸ್ಟೋಳಿ ಕೆರೆಗೆ ತಟ್ಟಿಹಳ್ಳಿದಿಂದ ನೀರು ತುಂಬಿಸುವ ಕುರಿತು

**ಶ್ರೀ ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೧೪೧ (೧೨೯) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಳಗಾವಿ ಖಾನಾಪೂರ ತಾಲ್ಲೂಕಿನ ಫಸ್ಟೋಳಿ ಕೆರೆಗೆ ತಟ್ಟಿಹಳ್ಳಿದಿಂದ ನೀರು ತುಂಬಿಸುವ ಕಾಮಗಾರಿಯ ವಿಳಂಬದಿಂದಾಗಿ ಕೆರೆಗೆ ನೀರು ಹರಿಯದೆ ಇರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ ಫಸ್ಟೋಳಿ ಕೆರೆಗೆ ತಟ್ಟಿಹಳ್ಳಿದಿಂದ ನೀರು ಹರಿಸುವ ವಿಚಾರವಾಗಿ ಸರ್ಕಾರವು ಕೈಕೊಂಡ ಕ್ರಮಗಳೇನು ;

(ಇ) ಸದರಿ ಕೆರೆಗೆ ನೀರು ತುಂಬಿಸುವುದರಿಂದ ಎಷ್ಟು ಹೆಕ್ಟೇರ್ ಪ್ರದೇಶಕ್ಕೆ ಅನುಕೂಲವಾಗಲಿದೆ ;

(ಈ) ಸದರಿ ಕೆರೆಗೆ ನೀರು ತುಂಬಿಸಲು ಈ ಹಿಂದೆ ಕಾಮಗಾರಿ ಕೈಕೊಳ್ಳಲಾಗಿದೆಯೇ ; ಹಾಗಿದ್ದಲ್ಲಿ ಈ ಕಾಮಗಾರಿಯ ಅಂದಾಜು ಮೊತ್ತವೆಷ್ಟು ; ಅದರಲ್ಲಿ ಕೈಗೊಂಡ ಕಾಮಗಾರಿಗಳು ಯಾವುವು ; ಕಾಮಗಾರಿ ಕೈಗೊಂಡಿದ್ದರೂ ಕೆರೆಗೆ ನೀರು ಹರಿಯದೇ ಇರುವುದಕ್ಕೆ ಇರುವ ಕಾರಣಗಳೇನು ?

## ರಾಜ್ಯದ ಕಬ್ಬು ಬೆಳೆಗಾರರಿಗೆ ಹನಿ ನೀರಾವರಿ ಪದ್ಧತಿ ಪ್ರೋತ್ಸಾಹಿಸುವ ಕುರಿತು

**ಶ್ರೀ ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೧೪೨ (೧೨೯೨) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಕಬ್ಬು ಬೆಳೆಗಾರರಿಗೆ ನೀರು ಪೋಲಾಗದಂತೆ ನೋಡಿಕೊಳ್ಳಲು ಹನಿ ನೀರಾವರಿ ಪದ್ಧತಿ ಅಳವಡಿಸಿಕೊಳ್ಳುವಂತೆ ಪ್ರೋತ್ಸಾಹಿಸುವ ಯೋಜನೆ ಸರ್ಕಾರದ ಮುಂದಿದೆಯೇ ;

(ಆ) ಹಾಗಿದ್ದಲ್ಲಿ, ಈ ಯೋಜನೆಯಡಿಯಲ್ಲಿ ರಾಜ್ಯದ ಯಾವ ಯಾವ ಜಿಲ್ಲೆಗಳನ್ನು ಆಯ್ಕೆ ಮಾಡಲಾಗಿದೆ ;

(ಇ) ಸರ್ಕಾರವು ಈ ಕುರಿತು ಸಕ್ಕರೆ ನಿರ್ದೇಶನಾಲಯಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಿದೆಯೇ ; ಒಂದು ವೇಳೆ ಪ್ರಸ್ತಾವನೆ ಸಲ್ಲಿಸಿದ್ದರೆ, ಪ್ರತಿ ಎಕರೆಗೆ ತಗಲುವ ಅಂದಾಜು ವೆಚ್ಚ ಎಷ್ಟು ; ಈ ಅಂದಾಜು ಪಟ್ಟಿ ಪ್ರಸ್ತಾವನೆ ಸರಿ ಇದೆಯೇ ;

(ಈ) ಬೆಳಗಾವಿ ಜಿಲ್ಲೆಯಲ್ಲಿ ಈ ಯೋಜನೆಯಡಿ ಎಷ್ಟು ಎಕರೆ ಪ್ರದೇಶದಲ್ಲಿ ಹನಿ ನೀರಾವರಿ ಪದ್ಧತಿ ಅಳವಡಿಸಲು ಸರ್ಕಾರವು ಯೋಚಿಸಿದೆಯೇ ; ಮತ್ತು ಕಾಯ್ದಿರಸಲಾದ ಅನುದಾನ ಎಷ್ಟು ?

## ಪಶ್ಚಿಮ ಘಟ್ಟ ಪ್ರದೇಶಗಳ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಪ್ರಾಣಿಗಳ ಹತ್ಯೆ ಕುರಿತು

**ಶ್ರೀ ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೧೪೩ (೧೩೦೧) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಳಗಾವಿ ಜಿಲ್ಲೆಯ ಗೋವಾ ಗಡಿಗೆ ಹೊಂದಿಕೊಂಡಿರುವ ಖಾನಾಪೂರ ತಾಲ್ಲೂಕಿನ ಪಶ್ಚಿಮ ಘಟ್ಟ ಪ್ರದೇಶದಲ್ಲಿ ಹಾಯ್ದು ಹೋಗಿರುವ ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳು ಕಾಡು ಪ್ರಾಣಿಗಳ ಪಾಲಿಗೆ ಮೃತ್ಯು ಕೂಪವಾಗಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ ಈ ಪ್ರದೇಶದಲ್ಲಿ ಹಾಯ್ದು ಹೋಗಿರುವ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳು ಯಾವುವು ;

(ಇ) ಈಗಾಗಲೇ ಈ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳಲ್ಲಿ ಕಳೆದ ಐದು ವರ್ಷಗಳಲ್ಲಿ ನಡೆದ ಅಪಘಾತಗಳಿಂದ ಪ್ರಾಣ ತೆತ್ತ ಕಾಡು ಪ್ರಾಣಿಗಳು ಎಷ್ಟು ; ಅವು ಯಾವುವು ;

(ಈ) ಈ ಪ್ರದೇಶದಲ್ಲಿ ಕಾಡು ಪ್ರಾಣಿಗಳನ್ನು ರಕ್ಷಿಸಲು ಸರ್ಕಾರವು ಯಾವ ಕ್ರಮ ಕೈಗೊಂಡಿದೆ ;

(ಉ) ಈ ಪ್ರದೇಶದ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳಲ್ಲಿ ರಾತ್ರಿ ವೇಳೆ ವಾಹನ ಸಂಚಾರ ನಿರ್ಬಂಧಿಸುವ ವಿಚಾರ ಸರ್ಕಾರದ ಮುಂದೆ ಇದೆಯೇ ?

## ಕಟ್ಟೆ ಒತ್ತುವರಿ ಖಾಲಿ ಮಾಡಿಸುವ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮ ನಿರ್ದೇಶನ ಹೊಂದಿದವರು):–**

೧೧೪೪ (೧೩೦೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆ ನೆಲಮಂಗಲ ತಾಲ್ಲೂಕು, ಸೋಂಪುರ ಹೋಬಳಿ ಹೊಸಹಳ್ಳಿ ಗ್ರಾಮದ ಸರ್ವೆ ನಂ.೫೯ರಲ್ಲಿ ಕೆರೆಕುಂಟೆ ಸರ್ಕಾರಿ ಪ್ರದೇಶವನ್ನು ಅಕ್ಕಪಕ್ಕದ ಜಮೀನುದಾರರುಗಳು ಒತ್ತುವರಿ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದರೆ, ಒತ್ತುವರಿ ಮಾಡಿಕೊಂಡಿರುವ ಸದರಿ ಸರ್ವೆ ನಂಬರಿನಲ್ಲಿರುವ ಕೆರೆಕುಂಟೆ ಪ್ರದೇಶವನ್ನು ಮತ್ತೆ ಸರ್ಕಾರವು ಮುಟ್ಟುಗೋಲು ಹಾಕಿಕೊಂಡು ಒತ್ತುವರಿಯನ್ನು ತೆರವುಗೊಳಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು ;

(ಇ) ಒತ್ತುವರಿದಾರರಿಗೆ ಸರ್ಕಾರವು ಹಿಂದೆ ಯಾವುದಾದರೂ ನೋಟೀಸ್ ನೀಡಿದೆಯೇ ;

(ಈ) ಪ್ರಾಣಿ, ಪಕ್ಷಿ, ದನಕರುಗಳಿಗೆ ಹಾಗೂ ಮುಂದಿನ ಪೀಳಿಗೆಗೆ ಭವಿಷ್ಯತ್ತು ಪರಿಸರ ಮತ್ತು ಪ್ರಕೃತಿ ಸಂರಕ್ಷಣೆಗಳ ಹಿತದೃಷ್ಟಿಯಿಂದ ನಶಿಸುತ್ತಿರುವ ಹಾಗೂ ಕಣ್ಮರೆಯಾಗುತ್ತಿರುವ ಕೆರೆ ಕುಂಟೆಗಳನ್ನು ಉಳಿಸಲು ಮತ್ತು ರಕ್ಷಿಸಲು ಸರ್ಕಾರದ ನಿಲುವೇನು ?

## ನೇಕಾರರ ಯೋಜನೆಗಳಿಗೆ ತಜ್ಞರ ಸಮಿತಿ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮ ನಿರ್ದೇಶನ ಹೊಂದಿದವರು):-**

೧೧೪೫ (೧೩೦೩) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಜವಳಿ ಇಲಾಖೆಯಲ್ಲಿ ತಜ್ಞರ ಸಮಿತಿ ರಚಿಸಲಾಗಿದೆಯೇ ;

(ಆ) ಹಾಗಿದ್ದಲ್ಲಿ ಸಮಿತಿಯನ್ನು ಯಾವಾಗ ರಚಿಸಲಾಯಿತು ;

(ಇ) ರಚನೆಯಾದ ಮೇಲೆ ಎಷ್ಟು ಸಭೆಗಳನ್ನು ಮಾಡಲಾಗಿದೆ ;

(ಈ) ಆ ಸಭೆಗಳಲ್ಲಿ ನೇಕಾರರ ಬಗ್ಗೆ ತೆಗೆದು ಕೊಂಡಿರುವ ತೀರ್ಮಾನಗಳೇನು ;

(ಉ) ತೀರ್ಮಾನ ಮಾಡಿರುವ ವಿಷಯಗಳಲ್ಲಿ ಯಾವುದು ಮಂಜೂರಾತಿ ಪಡೆದಿವೆ ? (ವಿವರ ನೀಡುವುದು)

## ನೇಕಾರರ ಕರಕುಶಲ ಕೇಂದ್ರವನ್ನು ಅಭಿವೃದ್ಧಿ ಪಡಿಸುವ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮ ನಿರ್ದೇಶನ ಹೊಂದಿದವರು):–**

೧೧೪೬ (೧೩೦೪) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಯಾದಗಿರಿ ಜಿಲ್ಲೆಯ ಮೀನಾಸಪುರದಲ್ಲಿರುವ ನೇಕಾರರ ಕರಕುಶಲ ಕೇಂದ್ರದ ಸ್ಥಿತಿಗತಿ ಏನು ; (ವಿವರ ನೀಡುವುದು)

(ಆ) ಸದರಿ ಕೇಂದ್ರದಲ್ಲಿ ಬಡನೇಕಾರರಿಗೆ ಕೌಶಲ್ಯವನ್ನು ಅಭಿವೃದ್ಧಿಪಡಿಸುವ ಮತ್ತು ಅವರಿಗೆ ಉದ್ಯೋಗಾವಕಾಶಗಳನ್ನು ಒದಗಿಸಿಕೊಡುವ ಸ್ತುತ್ಯ ಕಾರ್ಯ ನಡೆಯುತ್ತಿದ್ದು ಸ್ಥಗಿತಗೊಳಿಸಲಾಗಿದೆಯೇ ; ಹೌದಾದಲ್ಲಿ ಅದಕ್ಕೆ ಕಾರಣಗಳೇನು ;

(ಇ) ಸದರಿ ಕಟ್ಟಡವು ಶಿಥಿಲಗೊಂಡು ಬಿದ್ದಿದ್ದು ಅದನ್ನು ಕೂಡಲೇ ಸುವ್ಯವಸ್ಥೆಗೊಳಿಸುವ ಹಾಗೂ ಅಲ್ಲಿ ನೇಕಾರರ ಕರಕುಶಲ ಕೇಂದ್ರವನ್ನು ಪುನರಾರಂಭಿಸುವ ಕುರಿತಾದ ಸರ್ಕಾರದ ಕಾಲನಿಗಧಿತ ಕ್ರಮಗಳೇನು ; ನೇಕಾರಿಕೆ ಮತ್ತು ಪಾರಂಪರಿಕೆ ಕೈಮಗ್ಗ ಗುಡಿ ಕೈಗಾರಿಕೆಯನ್ನು ಅಭಿವೃದ್ಧಿಪಡಿಸುವ ಕುರಿತು ಸರ್ಕಾರದ ನಿಲುವೇನು ?

## ಹೊಸಹಳ್ಳಿಗ್ರಾಮದ ಕಟ್ಟೆ ಅಭಿವೃದ್ಧಿ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮ ನಿರ್ದೇಶನ ಹೊಂದಿದವರು):–**

೧೧೪೭ (೧೩೦೭) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು, ಸೋಪುರ ಹೋಬಳಿ ಹೊಸಹಳ್ಳಿ ಗ್ರಾಮದ ಸರ್ವೆ ನಂ.೫೯ರಲ್ಲಿ ಕೆರೆಕುಂಟೆಯನ್ನು ಸರ್ಕಾರದ ಯೋಜನೆಯಾದ ಕೆರೆಗಳ ಪುನರ್ ಜೀವನ ಪುನರುತ್ಥಾನಕ್ಕೆ ಒಳಪಡಿಸಿ ಅಂತರ್ ಜಲಮಟ್ಟ ಹೆಚ್ಚಿಸಲು ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು ;

(ಆ) ಒಳಪಡಿಸಿಲ್ಲದಿದ್ದರೆ ಈ ಯೋಜನೆಗೆ ಒಳಪಡಿಸಲು ಇರುವ ಕ್ರಮಗಳು / ಮಾನದಂಡಗಳೇನು ;

(ಇ) ಪ್ರಾಣಿ, ಪಕ್ಷಿ ದನಕರುಗಳಿಗೆ ಹಾಗೂ ಮುಂದಿನ ಪೀಳಿಗೆಗೆ ಭವಿಷ್ಯತ್ತು ಪರಿಸರ ಮತ್ತು ಪ್ರಕೃತಿ ಸಂರಕ್ಷಣೆಗಳ ಹಿತದೃಷ್ಟಿಯಿಂದ ನಶಿಸುತ್ತಿರುವ ಹಾಗೂ ಕಣ್ಮರೆಯಾಗುತ್ತಿರುವ ಕೆರೆ ಕುಂಟೆಗಳನ್ನು ಉಳಿಸಲು ಮತ್ತು ರಕ್ಷಿಸಲು ಸರ್ಕಾರದ ನಿಲುವೇನು ?

## ನೇಕಾರರಿಗೆ ಉದ್ಯೋಗ ನೀಡುವ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮ ನಿರ್ದೇಶನ ಹೊಂದಿದವರು):–**

೧೧೪೮ (೧೩೦೫) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಜವಳಿ ಇಲಾಖೆಯಿಂದ ನೇಕಾರರ ಹಿತದೃಷ್ಟಿಯಿಂದ ಸರ್ಕಾರ ನೀಡುತ್ತಿರುವ ವಿಶೇಷ ಸರ್ಕಾರಿ ಅಧಿಕಾರಿಗಳು ನೌಕರರು ಕೈಮಗ್ಗ ನೇಕಾರರು ತಯಾರು ಮಾಡಿದ ಬಟ್ಟೆ ಧರಿಸುವಂತೆ ಆದೇಶ ಮಾಡಲಾಗುವುದೇ ;

(ಆ) ರಾಜ್ಯದಲ್ಲಿರುವ ಅಸಂಘಟಿತ ನೇಕಾರರಿಗೆ ಉದ್ಯೋಗ ಕೊಡುವ ಹಿನ್ನಲೆಯಲ್ಲಿ ಈ ಯೋಜನೆ ಜಾರಿ ಮಾಡಲಾಗುವುದೇ ;

(ಇ) ಈಗಾಗಲೇ ಸರ್ಕಾರ ನೇಕಾರರ ಬಗ್ಗೆ ಚಿಂತಿಸಿದೆಯೇ ?

## ಚಿಕ್ಕಮಗಳೂರು ಜಿಲ್ಲೆಯಲ್ಲಿ ಮೀನುಗಾರರ ಅಭಿವೃದ್ಧಿಯ ಬಗ್ಗೆ

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೧೪೯ (೧೩೨೧) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಮೀನುಗಾರರ ಅಭಿವೃದ್ಧಿಗೆ ಯಾವ ಯಾವ ಯೋಜನೆಗಳನ್ನು ರೂಪಿಸಲಾಗಿದೆ ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಕಳೆದ ೩ ವರ್ಷಗಳಲ್ಲಿ ಮೀನುಗಾರರಿಗೆ ವಸತಿ ಸೌಕರ್ಯ ಕಲ್ಪಿಸಲು ರೂಪಿಸಿರುವ ಯೋಜನೆಗಳಾವುವು ; (ಮಾಹಿತಿ ಒದಗಿಸುವುದು)

(ಇ) ಈ ಜಿಲ್ಲೆಯಲ್ಲಿ ಎಷ್ಟು ಮೀನುಗಾರರಿಗೆ ವಸತಿ ಸೌಕರ್ಯಗಳನ್ನು ಕಲ್ಪಿಸಲಾಗಿದೆ ; (ತಾಲ್ಲೂಕುವಾರು ವಿವರ ನೀಡುವುದು)

(ಈ) ಜಿಲ್ಲೆಯಲ್ಲಿ ಎಷ್ಟು ಮೀನು ಮಾರಾಟ ಕೇಂದ್ರಗಳನ್ನು ತೆರೆಯಲಾಗಿದೆ ಹಾಗೂ ಜಿಲ್ಲೆಯಲ್ಲಿ ಯಾವ ಯಾವ ಸ್ಥಳದಲ್ಲಿ ಮೀನು ಸಾಕಾಣಿಕೆ ಮಾಡಲಾಗುತ್ತಿದೆ ? (ತಾಲ್ಲೂಕುವಾರು ಮಾಹಿತಿ ನೀಡುವುದು)

## ಕಂದಾಯ ಇಲಾಖೆಯಿಂದ ನೀಡಲಾಗಿರುವ ಜಾತಿ ಪ್ರಮಾಣ ಪತ್ರಗಳನ್ನು ಎಲ್ಲಾ ವರ್ಗದವರಿಗೆ ಒಂದೇ ಅವಧಿಗೆ ನೀಡುವ ಬಗ್ಗೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :–**

೧೧೫೦ (೧೨೯೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಂದಾಯ ಇಲಾಖೆಯ ವತಿಯಿಂದ ಜಾತಿ ಪ್ರಮಾಣ ಪತ್ರಗಳನ್ನು ಯಾವ ಯಾವ ವರ್ಗದವರಿಗೆ ಎಷ್ಟು ವರ್ಷಗಳ ಅವಧಿಗೆ ನೀಡಲಾಗುತ್ತಿದೆ ;

(ಆ) ಕೆಲ ವರ್ಗದವರಿಗೆ ಪೂರ್ಣ (ಜೀವಿತಾವಧಿ ವರೆಗೆ) ಅವಧಿಗೆ ಜಾತಿ ಪ್ರಮಾಣ ಪತ್ರಗಳನ್ನು ನೀಡುತ್ತಿರುವುದು ನಿಜವೇ ; ಇನ್ನೂ ಕೆಲ ವರ್ಗದವರಿಗೆ ಐದು ವರ್ಷಗಳ ಅವಧಿಗೆ ನೀಡುತ್ತಿರುವುದು ನಿಜವೇ ;

(ಇ) ಹಾಗಾದರೆ, ಎಲ್ಲಾ ವರ್ಗದವರಿಗೂ ಸಹ ಪೂರ್ಣ ಅವಧಿಗೆ ಜಾತಿ ಪ್ರಮಾಣ ಪತ್ರಗಳನ್ನು ನೀಡಲು ಸರ್ಕಾರವು ಕ್ರಮ ಕೈಗೊಳ್ಳುವುದೇ ?

## ಬಾಗಲಕೋಟೆ ಜಿಲ್ಲೆ ಬಾದಾಮಿ ತಾಲ್ಲೂಕಿನ ಶಿವಯೋಗಮಂದಿರವನ್ನು ಮೈಸೂರಿನ ಬೃಂದಾವನದ ಮಾದರಿ ಅಭಿವೃದ್ಧಿ ಪಡಿಸುವ ಬಗ್ಗೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :–**

೧೧೫೧ (೧೨೯೮) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಶಿವಯೋಗಮಂದಿರವು ಮಲಪ್ರಭಾ ಕಮಾಂಡ ಏರಿಯಾದಲ್ಲಿ ಬರುತ್ತಿದ್ದು ಹದಿನೇಳು ಜನ ವಿಧಾನಸಭಾ ಹಾಗೂ ವಿಧಾನ ಪರಿಷತ್ತಿನ ಸದಸ್ಯರು ಮೈಸೂರು ಬೃಂದಾವನದಲ್ಲಿ ಇರುವಂತೆ ಹಾಗೂ ಆಲಮಟ್ಟಿ ಡ್ಯಾಂನಲ್ಲಿ ಇರುವಂತೆ ಹೊನಲು–ಬೆಳಕು, ಹೂದೋಟ, ಹೆರಿಟೇಜ್ ಪಾರ್ಕ್, ಗ್ಲಾಸ್‌ಹೌಸ್ ನಿರ್ಮಿಸಲು ಮಾನ್ಯ ಮುಖ್ಯಮಂತ್ರಿಗಳಿಗೆ ಹಾಗೂ ಜಲಸಂಪನ್ಮೂಲ ಸಚಿವರಿಗೆ ಮನವಿ ಕೊಟ್ಟಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಮಾನ್ಯ ಶಾಸಕರ ಕೋರಿಕೆಯಂತೆ ಕ್ರಮ ಕೈಗೊಳ್ಳಲು ಮಾನ್ಯ ಮುಖ್ಯಮಂತ್ರಿಗಳು ಹಾಗೂ ನೀರಾವರಿ ಸಚಿವರು ವ್ಯವಸ್ಥಾಪಕ ನಿರ್ದೇಶಕರು , ಕರ್ನಾಟಕ ನೀರಾವರಿ ನಿಗಮ, ಬೆಂಗಳೂರು. ಇವರಿಗೆ ಆದೇಶ ನೀಡಿದ ಸಂಗತಿ ನಿಜವೇ ;

(ಇ) ಮಾನ್ಯ ಸಚಿವರ ಆದೇಶದಂತೆ ಕ್ರಮ ಕೈಗೊಳ್ಳಲು ಹಾಗೂ ನೀಲಿನಕ್ಷೆ ಮತ್ತು ಅಂದಾಜು ವೆಚ್ಚ ಪತ್ರಿಕೆ ತಯಾರಿಸಲು ಮುಖ್ಯ ಇಂಜಿನೀಯರ್, ನೀರಾವರಿ ಇಲಾಖೆ, ಮಲಪ್ರಭಾ ಪ್ರೊಜೆಕ್ಟ್, ಧಾರವಾಡ. ಇವರಿಗೆ ಆದೇಶ ನೀಡಿದ ಸಂಗತಿ ನಿಜವೇ ;

(ಈ) ಹಿಂದಿನ ಮಾನ್ಯ ಜಲಸಂಪನ್ಮೂಲ ಸಚಿವರ ಆದೇಶದಂತೆ ಶಿಗ್ಗಾಂವದಲ್ಲಿ ಇರುವಂತೆ ನೀಲಿನಕ್ಷೆ ಹಾಗೂ ಅಂದಾಜು ವೆಚ್ಚ ಪತ್ರಿಕೆಗೆ ತಗಲುವ ವೆಚ್ಚಕ್ಕೆ ಹಣ ಬಿಡುಗಡೆ ಮಾಡಲು ಮುಖ್ಯ ಇಂಜಿನೀಯರ್, ಮಲಪ್ರಭಾ ಪ್ರೊಜೆಕ್ಟ್, ಧಾರವಾಡ ಇವರು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ, ಬೆಂಗಳೂರು. ಇವರಿಗೆ ಪತ್ರ ಬರೆದ ಸಂಗತಿ ನಿಜವೇ ;

(ಉ) ಈ ಕೆಲಸಕ್ಕೆ ಅವಶ್ಯವಿರುವ ಭೂಮಿಯನ್ನು ಶಿವಯೋಗಮಂದಿರದ ಸಂಸ್ಥೆಯವರು ಕೊಡಲು ಸಿದ್ಧರಿದ್ದು ಯಾವ ಹೆಸರಿಗೆ ಯಾವ ಪ್ರಕಾರವಾಗಿ ಬರೆದು ಕೊಡಬೇಕು ಎಂದು ಸಂಸ್ಥೆಯವರಿಗೆ ಇಲಾಖೆಯವರು ತಿಳಿಸುವರೇ ;

(ಊ) ಶಿವಯೋಗಮಂದಿರ ಸಂಸ್ಥೆಯವರು ಸ್ಥಳ ಕೊಡಲು ಸಿದ್ಧರಿದ್ದರೂ ಅಲ್ಲಿ ಸ್ಥಳ ಲಭ್ಯವಿಲ್ಲವೆಂದು ತಪ್ಪು ಮಾಹಿತಿಯನ್ನು ಕೆಳಗಿನ ಅಧಿಕಾರಿಗಳು ಕೊಡುತ್ತಿರುವ ಸಂಗತಿ ತಪ್ಪು ಇದ್ದು ಕೂಡಲೇ ಸ್ಥಳ ವಶಪಡಿಸಿಕೊಂಡು ಕೆಲಸ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ ?

## ಬೆಳಗಾವಿ ಜಿಲ್ಲೆ ಸವದತ್ತಿ ಕೆರೆಗಳಿಗೆ ನದಿಯಿಂದ ನೀರು ತುಂಬಿಸುವ ಬಗ್ಗೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :–**

೧೧೫೨ (೧೨೯೭) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ಕೆರೆಗಳಿಗೆ ನದಿಯಿಂದ ನೀರು ತುಂಬಿಸಲು ಯಾವ ಯಾವ ಕ್ರಮ ಕೈಕೊಳ್ಳಲಾಗಿದೆ ;

(ಆ) ಯಾವ ಯಾವ ಕೆರೆಗಳಿಗೆ ನೀರು ತುಂಬಿಸಲಾಗುವುದು ; (ವಿವರ ನೀಡುವುದು)

(ಇ) ಯಾವ ಯಾವ ಕೆರೆಗಳಿಗೆ ನೀರು ತುಂಬಿಸುವ ಬಗ್ಗೆ ಕೋರಿಕೆ ಬಂದಿದೆ ?

## ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಕೆರೆಗಳಿಗೆ ನದಿಯಿಂದ ನೀರು ತುಂಬಿಸುವ ಬಗ್ಗೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :–**

೧೧೫೩ (೧೨೯೬) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಕೆರೆಗಳಿಗೆ ನದಿಯಿಂದ ನೀರು ತುಂಬಿಸಲು ಯಾವ ಕ್ರಮಕೈಕೊಳ್ಳಲಾಗಿದೆ ;

(ಆ) ಯಾವ ಯಾವ ಕೆರೆಗಳಿಗೆ ನೀರು ತುಂಬಿಸಲಾಗುವುದು ; (ವಿವರ ನೀಡುವುದು)

(ಇ) ಯಾವ ಯಾವ ಕೆರೆಗಳಿಗೆ ನೀರು ತುಂಬಿಸುವ ಬಗ್ಗೆ ಕೋರಿಗೆ ಬಂದಿದೆ ?

## ನಗರ ಮತ್ತು ಸುತ್ತಲಿನ ಗ್ರಾಮೀಣ ಪ್ರದೇಶಗಳ ಹಸರೀಕರಣ

**ಡಾ: ಮತ್ತಿಕಟ್ಟಿ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೧೫೪ (೧೨೬೯) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಔದ್ಯೋಗೀಕರಣ ಮತ್ತು ನಗರೀಕರಣದಿಂದಾಗಿ ಗಿಡ–ಮರಗಳು ಮತ್ತು ಹಸಿರು ಪರಿಸರ ಮಾಯವಾಗಿ ಬರಗಾಲ, ವಾಯುಮಾಲಿನ್ಯ ರೋಗ–ರುಜಿನಗಳು ನಿರಂತರವಾಗಿ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ನಗರಗಳಲ್ಲಿ ಮತ್ತು ಸುತ್ತಲಿನ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚು ಗಿಡ ಮರಗಳನ್ನು ನೆಡುವುದಲ್ಲದೇ ವಾಯು ಮಾಲಿನ್ಯ ನಿಯಂತ್ರಿಸಲು ಸರ್ಕಾರವು ಕೈಗೊಳ್ಳುತ್ತಿರುವ ಕ್ರಮಗಳೇನು ;

(ಇ) ನಗರ ಪ್ರದೇಶವನ್ನು ತೀವ್ರ ಹಸಿರೀಕರಣ ಪ್ರಕ್ರಿಯೆಗೆ ಒಳಪಡಿಸಲು ವಿವಿಧ ಇಲಾಖೆಗಳು, ಸ್ಥಳೀಯ ಪರಿಸರ ಪ್ರೇಮಿಗಳು, ಸಂಘ-ಸಂಸ್ಥೆಗಳು, ಶಾಲಾ-ಕಾಲೇಜುಗಳ ಶಿಕ್ಷಕರು ಮತ್ತು ವಿದ್ಯಾರ್ಥಿಗಳನ್ನು ಪ್ರೇರೇಪಿಸಿ ಗಿಡ ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದೇ ;

(ಈ) ಪ್ರವಾಸಿ ಸಂಸ್ಥೆಗಳ ಸಹಯೋಗದಲ್ಲಿ ಪ್ರವಾಸಿಗರು ಪ್ರೇಕ್ಷಣೀಯ ಸ್ಥಳಗಳಲ್ಲಿ ಮಳೆಗಾಲದಲ್ಲಿ ಗಿಡ ನೆಡುವ ಮತ್ತು ಬೀಜ ಬಿತ್ತುವಂತಹ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವಂತೆ ಮಾಡಲಾಗುವುದೇ ?

## ಹುಬ್ಬಳ್ಳಿ ಹತ್ತಿರ "ಪರಿಸರ ಪುನರ್ ಸ್ಥಾಪನೆ ಮತ್ತು ಪ್ರಾಣಿಗಳ ಉದ್ಯಾನವನ" ಸ್ಥಾಪಿಸುವ ಬಗ್ಗೆ

**ಡಾ: ಮತ್ತಿಕಟ್ಟಿ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೧೫೫ (೧೨೭೦) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಹುಬ್ಬಳ್ಳಿ ವಲಯದ ಬುದ್ನಾಳ ಎಂಬಲ್ಲಿ ಸರ್ಕಾರವು "ಪರಿಸರ ಪುನರ್ ಸ್ಥಾಪನೆ ಮತ್ತು ಪ್ರಾಣಿಗಳ ಉದ್ಯಾನವನ" ವನ್ನು ಸ್ಥಾಪಿಸಲು ಯೋಜಿಸಿದೆಯೇ ;

(ಆ) ಹಾಗಿದ್ದಲ್ಲಿ, ಸದರಿ ಯೋಜನೆಯ ಪೂರ್ಣ ವಿವರಗಳನ್ನು ನೀಡುವುದು ;

(ಇ) ಈ ಯೋಜನೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು ;

(ಈ) ಚಿರತೆಗಳು ಬೆಂಗಳೂರು ನಗರಕ್ಕೆ ನುಗ್ಗುವುದನ್ನು ತಪ್ಪಿಸಲು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ; ಚಿರತೆ ಪಾರ್ಕ್ ಸ್ಥಾಪಿಸಲಾಗುವುದೇ ?

# ರಾಜ್ಯದಲ್ಲಿ ಕೊರತೆ ಇರುವ ಭೂಮಾಪಕರುಗಳ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೧೫೭ (೧೨೪೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಮಂಜೂರಾದ ಒಟ್ಟು ಭೂಮಾಪಕರ ಹುದ್ದೆಗಳು ಮತ್ತು ಖಾಲಿ ಇರುವ ಭೂಮಾಪಕರ ಹುದ್ದೆಗಳೆಷ್ಟು; ಈ ಕೊರತೆಯನ್ನು ತುಂಬಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಉಡುಪಿ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಹೆಚ್ಚು ಭೂಮಾಪನ ಕೋರಿ ಬಂದ ಅರ್ಜಿಗಳೆಷ್ಟು ಮತ್ತು ಇವುಗಳಲ್ಲಿ ಭೂಮಾಪನಕ್ಕೆ ಬಾಕಿ ಇರುವ ಅರ್ಜಿಗಳೆಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಇ) ಉಡುಪಿ ಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳಲ್ಲಿ ಭೂ ಮಾಪನಕ್ಕೆ ಕೋರಿ ಬಂದ ಅರ್ಜಿಗಳೆಷ್ಟು ; ಮತ್ತು ಅವುಗಳಲ್ಲಿ ಭೂಮಾಪನಕ್ಕೆ ಬಾಕಿಯಿರುವ ಅರ್ಜಿಗಳೆಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಈ) ಉಡುಪಿ ಜಿಲ್ಲೆಯಲ್ಲಿ ಕಳೆದ ಒಂದು ವರ್ಷಗಳಲ್ಲಿ ಭೂಮಾಪನಕ್ಕೆ ಕೋರಿ ಬಂದ ಅರ್ಜಿಗಳೆಷ್ಟು ; ಮತ್ತು ಅವುಗಳಲ್ಲಿ ಭೂಮಾಪನಕ್ಕೆ ಬಾಕಿಯಿರುವ ಅರ್ಜಿಗಳೆಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಉ) ಉಡುಪಿ ಜಿಲ್ಲೆಯಲ್ಲಿ ಅರ್ಜಿ ನಮೂನೆ-೫೦, ೫೩ ಮತ್ತು ೯೪ 'ಸಿ' ರಡಿ ಭೂ ಮಂಜೂರಾತಿ ಕೋರಿ ಅರ್ಜಿ ಸಲ್ಲಿಸಲಾದ ಪ್ರಕರಣಗಳಲ್ಲಿ ಭೂ ಸರ್ವೆಗೆ ಬಾಕಿಯಿರುವ ಪ್ರಕರಣಗಳು ಎಷ್ಟು? (ತಾಲ್ಲೂಕುವಾರು ಪ್ರತ್ಯೇಕ ವಿವರ ನೀಡುವುದು)

## ವರಾಹಿ ನೀರಾವರಿ ಯೋಜನೆಯ ಕಾಮಗಾರಿಗಳಿಗೆ ನೀಡುವ ಅನುದಾನಗಳ ಸಿಬ್ಬಂದಿಗಳ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೧೫೭ (೧೨೫೦) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕರ್ನಾಟಕ ನೀರಾವರಿ ನಿಗಮದಿಂದ ನಿರ್ವಹಿಸಲ್ಪಡುತ್ತಿರುವ ವರಾಹಿ ನೀರಾವರಿ ಯೋಜನೆಗೆ ; ಕಳೆದ ಮೂರು ವರ್ಷಗಳಿಂದ ನೀಡಲಾದ ಅನುದಾನವೆಷ್ಟು; ಆ ಪೈಕಿ ವೆಚ್ಚ ಮಾಡಲಾದ ಅನುದಾನವೆಷ್ಟು; ಮುಂದುವರಿದ ಕಾಮಗಾರಿಗಳಿಗೆ ಬಿಡುಗಡೆಯಾದ ಅನುದಾನವೆಷ್ಟು; ವೆಚ್ಚ ಮಾಡಲಾದ ಅನುದಾನವೆಷ್ಟು; (ವರ್ಷವಾರು, ಅನುದಾನವಾರು, ಕಾಮಗಾರಿವಾರು ವಿವರ ನೀಡುವುದು)

(ಆ) ವರಾಹಿ ನೀರಾವರಿ ಯೋಜನೆಗೆ ಕಳೆದ ಒಂದು ವರ್ಷದಿಂದ ನೀಡಲಾದ ಅನುದಾನವೆಷ್ಟು ; ವೆಚ್ಚ ಮಾಡಲಾದ ಅನುದಾನವೆಷ್ಟು ; ಮುಂದುವರಿದ ಕಾಮಗಾರಿಗಳಿಗೆ ನೀಡಲಾದ ಅನುದಾನವೆಷ್ಟು ಮತ್ತು ವೆಚ್ಚ ಮಾಡಲಾದ ಅನುದಾನವೆಷ್ಟು ; (ಕಾಮಗಾರಿವಾರು, ಅನುದಾನವಾರು, ಕಾಮಗಾರಿ ನಿರ್ವಹಿಸಿದ ಗುತ್ತಿಗೆದಾರರು, ಪರಿವೀಕ್ಷಿಸಿದ ಅಭಿಯಂತರರ ಹೆಸರು, ವಿಳಾಸದೊಂದಿಗೆ ವಿವರ ನೀಡುವುದು)

(ಇ) ವರಾಹಿ ನೀರಾವರಿ ಯೋಜನೆಯ ವಿವಿಧ ಕಛೇರಿಗಳಿಗೆ ಮಂಜೂರಾದ ಹುದ್ದೆಗಳೆಷ್ಟು ಅವು ಯಾವುವು ; ಕೊರತೆ ಇರುವ ಹುದ್ದೆಗಳೆಷ್ಟು ಅವು ಯಾವುವು ; ಈ ಕೊರತೆಯನ್ನು ತುಂಬಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಈ) ವರಾಹಿ ನೀರಾವರಿ ಯೋಜನೆಗೆ ಅನುದಾನದ ಕೊರತೆ, ಸಿಬ್ಬಂದಿಗಳ ಕೊರತೆ ಹಾಗೂ ಅಧಿಕಾರಿಗಳ ಇಚ್ಛಾಶಕ್ತಿಯ ಕೊರತೆಯಿಂದಾಗಿ ಕಳೆದ ಒಂದು ವರ್ಷದಿಂದ ಯಾವುದೇ ಕಾಮಗಾರಿ ಆಗದೇ ಇರುವುದನ್ನು ಸರ್ಕಾರ ಗಮನಿಸಿದೆಯೇ ; ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಏಕೈಕ ನೀರಾವರಿ ಯೋಜನೆಯಾದ ವರಾಹಿ ನೀರಾವರಿ ಯೋಜನೆಯನ್ನು ಮೂಲ ಯೋಜನೆಯಂತೆ ಪೂರ್ಣಗೊಳಿಸದೆ ಇರುವುದು ಆ ಭಾಗದ ಕೃಷಿಕರಿಗೆ ಮಲತಾಯಿ ಧೋರಣೆ ಮಾಡಿದಂತಾಗುವುದಿಲ್ಲವೇ ?

## ರಾಜ್ಯದಲ್ಲಿರುವ ಮರ ಸಿಗಿಯುವ ಕಾರ್ಖಾನೆಗಳ (Saw Mill) ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೧೫೮ (೧೨೫೧) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಒಟ್ಟು ಇರುವ ಮರ ಸಿಗಿಯುವ ಕಾರ್ಖಾನೆ (Saw Mill) ಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಈ ಮರ ಸಿಗಿಯುವ ಕಾರ್ಖಾನೆ (Saw Mill) ಗಳಲ್ಲಿ ವಾರ್ಷಿಕ ಖರೀದಿಸುವ ಒಟ್ಟು ಮರದ ಪ್ರಮಾಣವೆಷ್ಟು ; ವಾರ್ಷಿಕ ಮಾರಾಟ ಮಾಡುವ ಮರದ ಒಟ್ಟು ಪ್ರಮಾಣವೆಷ್ಟು ; ಇವುಗಳ ಬೇಡಿಕೆಗೆ ಸ್ಪಂದಿಸಲು ಇಲಾಖೆ ತೆಗೆದುಕೊಂಡ ಕ್ರಮಗಳೇನು ; (ತಾಲ್ಲೂಕುವಾರು ವಿವರ ನೀಡುವುದು)

(ಇ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿರುವ ಒಟ್ಟು ಮರ ಸಿಗಿಯುವ ಕಾರ್ಖಾನೆ (Saw Mill) ಗಳ ಸಂಖ್ಯೆ ಎಷ್ಟು ಮತ್ತು ಯಾವುವು ; (ಜಿಲ್ಲಾವಾರು, ತಾಲ್ಲೂಕುವಾರು, ಗ್ರಾಮವಾರು, ಸಂಸ್ಥೆವಾರು ವಿವರ ನೀಡುವುದು)

(ಈ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಗುತ್ತಿಗೆ ಆಧಾರದಲ್ಲಿ ನಡೆಸಲ್ಪಡುತ್ತಿರುವ ಮರ ಸಿಗಿಯುವ ಕಾರ್ಖಾನೆಗಳ ಸಂಖ್ಯೆ ಎಷ್ಟು ; ಯಾವುವು ; ಬಾಡಿಗೆ ಆಧಾರದಲ್ಲಿ ನಡೆಸಲ್ಪಡುತ್ತಿರುವ ಮರ ಸಿಗಿಯುವ ಕಾರ್ಖಾನೆಗಳ ಸಂಖ್ಯೆ ಎಷ್ಟು ; ಮತ್ತು ಅವು ಯಾವುವು ? (ಗುತ್ತಿಗೆಪಡೆದವರ, ಬಾಡಿಗೆಪಡೆದವರ, ಮೂಲ ಪರವಾನಿಗೆದಾರರ ಹೆಸರು, ವಿಳಾಸದೊಂದಿಗೆ ವಿವರ ನೀಡುವುದು)

## ವರಾಹಿ ನೀರಾವರಿ ಯೋಜನೆಯ ಎಡದಂಡೆ ಕಾಲುವೆಯ ಸರ್ವೆ ಕಾರ್ಯದ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೧೫೯ (೧೨೫೨) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ನೀರಾವರಿ ನಿಗಮದಿಂದ ನಿರ್ವಹಿಸಲ್ಪಡುತ್ತಿರುವ ವರಾಹಿ ನೀರಾವರಿ ಯೋಜನೆಯ ಎಡದಂಡೆ ಮುಖ್ಯ ಕಾಲುವೆಯ ಎಷ್ಟು ಕಿ.ಮೀ. ವರೆಗಿನ ಸರ್ವೆ ಕಾರ್ಯ ಪೂರ್ಣಗೊಂಡಿದೆ ;

(ಆ) ವರಾಹಿ ನೀರಾವರಿ ಯೋಜನೆಯಿಂದ ಹೊಲಗಳಿಗೆ ನೀರು ಹರಿಸುವ ಕಾಲುವೆಯ (FIC) ಕಾಮಗಾರಿಗಳು ಎಷ್ಟು ಕಿ.ಮೀ. ತನಕ ಸರ್ವೆ ಕಾರ್ಯ ಪೂರ್ಣಗೊಂಡಿವೆ ; ಮತ್ತು ಇವುಗಳನ್ನು ಪೂರ್ಣಗೊಳಿಸಲು ಎಷ್ಟು ಕಾಲಾವಕಾಶ ಬೇಕಾಗಿರುತ್ತದೆ ; ಈ ಕಾಮಗಾರಿಗಳಿಗೆ ಅಗತ್ಯವಿರುವ ಭೂ ಸ್ವಾಧೀನ ಪ್ರಕ್ರಿಯೆ ಯಾವ ಹಂತದಲ್ಲಿದೆ ; (ಕಾಮಗಾರಿವಾರು, ಕಿ.ಮೀ.ವಾರು, ಗ್ರಾಮವಾರು ವಿವರ ನೀಡುವುದು)

(ಇ) ವರಾಹಿ ನೀರಾವರಿ ಯೋಜನೆಯ ಹಾಲಾಡಿ ಬಳಿ ನಿರ್ಮಿಸಲು ಉದ್ದೇಶಿಸಿರುವ ಏತ ನೀರಾವರಿಯ ಕಾಮಗಾರಿಯ ಸರ್ವೆ ಕಾರ್ಯ ಎಷ್ಟು ಕಿ.ಮೀ. ತನಕ ಪೂರ್ಣಗೊಳಿಸಲಾಗಿದೆ ; ಪೂರ್ಣಗೊಳ್ಳದೆ ಇದ್ದಲ್ಲಿ, ಎಷ್ಟು ಕಾಲಾವಕಾಶದ ಅಗತ್ಯತೆಯಿದೆ ಮತ್ತು ಪೂರ್ಣಗೊಳ್ಳದೆ ಇದ್ದಲ್ಲಿ ಕಾರಣವೇನು ; ಮತ್ತು ಈ ಕಾಮಗಾರಿಯ ಭೂಸ್ವಾಧೀನ ಪ್ರಕ್ರಿಯ ಯಾವ ಹಂತದಲ್ಲಿದೆ ;

(ಈ) ವರಾಹಿ ನೀರಾವರಿ ಯೋಜನೆಯ ಎಡದಂಡೆ ನಾಲೆಯ ಹೊಲಗಳಿಗೆ ನೀರು ಹರಿಸುವ ಕಾಲುವೆಗಳ (FIC) ಕಾಮಗಾರಿಯ ಸರ್ವೆ ಕಾರ್ಯ ಎಷ್ಟು ಕಿ.ಮೀ. ತನಕ ಪೂರ್ಣಗೊಳಿಸಲಾಗಿದೆ ; ಪೂರ್ಣಗೊಳ್ಳದೆ ಇದ್ದಲ್ಲಿ ಎಷ್ಟು ಕಾಲಾವಕಾಶದ ಅಗತ್ಯತೆಯಿದೆ ; ಪೂರ್ಣಗೊಳ್ಳದೆ ಇದ್ದಲ್ಲಿ ಕಾರಣವೇನು ; ಈ ಕಾಮಗಾರಿಯ ಭೂಸ್ವಾಧೀನ ಪ್ರಕ್ರಿಯೆ ಯಾವ ಹಂತದಲ್ಲಿದೆ ? (ಕಿ.ಮೀ.ವಾರು, ಗ್ರಾಮವಾರು, ಕಾಮಗಾರಿವಾರು ವಿವರ ನೀಡುವುದು)

## ಜ್ಯೇಷ್ಠತಾ ಪಟ್ಟಿಯನ್ನು ವಿಭಾಗ ಮಟ್ಟದ ಜ್ಯೇಷ್ಠತಾ ಪಟ್ಟಿಗೆ ಕ್ರೋಢೀಕರಣ ಮಾಡುವ ಬಗ್ಗೆ

**ಶ್ರೀ ಎಂ.ಕೆ. ಪ್ರಾಣೇಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೧೬೦ (೧೨೭೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಚಿಕ್ಕಮಗಳೂರು ಜಿಲ್ಲಾ ಕಂದಾಯ ಘಟಕದ ಪ್ರಥಮ ದರ್ಜೆ ಸಹಾಯಕ ಮತ್ತು ರಾಜಸ್ವ ನಿರೀಕ್ಷಕರ ವೃಂದದ ಜ್ಯೇಷ್ಠತಾಪಟ್ಟಿಯನ್ನು ವಿಭಾಗ ಮಟ್ಟದ ಜ್ಯೇಷ್ಠತಾ ಪಟ್ಟಿಗೆ ಕ್ರೋಢೀಕರಣ ಮಾಡುವ ವಿಚಾರ ಸರ್ಕಾರದ ಮುಂದೆ ಇದೆಯೇ ;

(ಆ) ಹಾಗಿದ್ದಲ್ಲಿ, ಈ ಕುರಿತು ಏನು ಕ್ರಮ ಕೈಗೊಳ್ಳಲಾಗಿದೆ ;

(ಇ) ಈಗಾಗಲೇ ಜಿಲ್ಲೆಯ ದ್ವಿತೀಯ ದರ್ಜೆ ಸಹಾಯಕ, ಗ್ರಾಮ ಲೆಕ್ಕಿಗ ಮತ್ತು ಪ್ರಥಮ ದರ್ಜೆ ಸಹಾಯಕ ವೃಂದದ ನೌಕರರು ಅವರ ಸೇವಾವಧಿಯಲ್ಲಿ ಏಕ ಮಾತ್ರ ಬಡ್ತಿ ಸೌಲಭ್ಯವೂ ದೊರಕದೆ ಒಂದೇ ಹುದ್ದೆಯಲ್ಲಿ ೩೦ ರಿಂದ ೩೫ ವರ್ಷ ನಿರಂತರ ಸೇವೆ ಸಲ್ಲಿಸಿ ನಿವೃತ್ತರಾಗಿದ್ದು, ಇನ್ನು ಕೆಲವರು ನಿವೃತ್ತಿಯ ಹಂಚಿನಲ್ಲಿದ್ದಾರೆ. ಕಾರಣ ಇವರುಗಳಿಗೆ ಯಾವ ರೀತಿ ನ್ಯಾಯ ದೊರಕಿಸಿಕೊಡಲಾಗುವುದು ; (ವಿವರ ನೀಡುವುದು)

(ಈ) ಯಾವ ಕಾಲಮಿತಿಯಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕಂದಾಯ ನೌಕರರ ಪರಿಷ್ಕೃತ ಜ್ಯೇಷ್ಠತಾ ಪಟ್ಟಿಯನ್ನು ವಿಭಾಗ ಮಟ್ಟದ ಜ್ಯೇಷ್ಠತಾ ಪಟ್ಟಿಗೆ ಕ್ರೋಢೀಕರಣ ಮಾಡಲಾಗುವುದು ? (ಸಂಪೂರ್ಣ ಮಾಹಿತಿ ನೀಡುವುದು)

## ಸರ್ಕಾರಿ ಗೋಮಾಳದಲ್ಲಿ ಟ್ರೇಂಚ್ ಹೊಡೆದಿರುವ ಬಗ್ಗೆ

**ಶ್ರೀ ಎಂ.ಕೆ. ಪ್ರಾಣೇಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೧೬೧ (೧೨೭೯) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಚಿಕ್ಕಮಗಳೂರು ಜಿಲ್ಲೆಯ ಸರ್ಕಾರಿ ಗೋಮಾಳದಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ಏಕಾಏಕಿ ಟ್ರೇಂಚ್ ಹೊಡೆದು ಚರಂಡಿ ತೆಗೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಈ ಕುರಿತು ಕೈಗೊಂಡಿರುವ ಕ್ರಮಗಳೇನು ;

(ಆ) ಇದರಿಂದ ಸಾರ್ವಜನಿಕರಿಗೆ ರಸ್ತೆ, ಕುಡಿಯುವ ನೀರಿನ ಸಮಸ್ಯೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ಕುರಿತು ಏನು ಕ್ರಮಕೈಗೊಳ್ಳಲಾಗಿದೆ ;

(ಇ) ಏಕಾಏಕಿ ಟ್ರೇಂಚ್ ಹೊಡೆದು ಸರ್ಕಾರಿ ಗೋಮಾಳವನ್ನು ಒತ್ತುವರಿ ಮಾಡುತ್ತಿರುವ ಅಧಿಕಾರಿಗಳ ವಿರುದ್ಧ ಏನು ಕ್ರಮಕೈಗೊಳ್ಳಲಾಗಿದೆ ? (ಸಂಪೂರ್ಣ ಮಾಹಿತಿ ಒದಗಿಸುವುದು)

## ಬಣಕಲ್ ನಗರದಲ್ಲಿ ಆನೆ ದಾಳಿ ಕುರಿತು

**ಶ್ರೀ ಎಂ.ಕೆ. ಪ್ರಾಣೇಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೧೬೨ (೧೨೭೮) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಚಿಕ್ಕಮಗಳೂರು ಜಿಲ್ಲೆಯ ಬಣಕಲ್ ನಗರದಲ್ಲಿ ಆನೆ ದಾಳಿಯಿಂದ ಒಬ್ಬರು ಸಾವನ್ನಪ್ಪಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಸದರಿ ದಾಳಿಯಲ್ಲಿ ಮೃತಪಟ್ಟ ಕುಟುಂಬಕ್ಕೆ ನೀಡಲಾಗಿರುವ ಪರಿಹಾರ ಏನು ; (ಮಾಹಿತಿ ನೀಡುವುದು)

(ಆ) ಕಳೆದ ೩ ವರ್ಷಗಳಿಂದ ಚಿಕ್ಕಮಗಳೂರು ಜಿಲ್ಲೆಯಾದ್ಯಂತಹ ಆನೆ ದಾಳಿಯಿಂದ ಮೃತಪಟ್ಟವರ ಸಂಖ್ಯೆ ಎಷ್ಟು ; ಅವರುಗಳ ಕುಟುಂಬಕ್ಕೆ ನೀಡಲಾದ ಪರಿಹಾರವೇನು ; (ಕುಟುಂಬಸ್ಥರ ವಿಳಾಸದೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು)

(ಇ) ಆನೆಗಳನ್ನು ಹಿಡಿದು ಸ್ಥಳಾಂತರಿಸುವ ವಿಚಾರವಾಗಿ ಮತ್ತು ಕಾಡಾನೆಗಳ ಹಾವಳಿಯನ್ನು ತಡೆಗಟ್ಟಲು ಏನು ಕ್ರಮಕೈಗೊಳ್ಳಲಾಗಿದೆ ; ಯಾವ ಕಾಲಮಿತಿಯಲ್ಲಿ ಈ ಸಮಸ್ಯೆಗಳಿಗೆ ಸಂಪೂರ್ಣ ಪರಿಹಾರ ಕಲ್ಪಿಸಲಾಗುವುದು ?

## ಪ್ರಗತಿಯಲ್ಲಿರುವ ನೀರಾವರಿ ಯೋಜನೆಗಳಿಗೆ ಅಗತ್ಯವಿರುವ ಹಣದ ಬಗ್ಗೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು):–**

೧೧೬೩ (೧೨೬೩) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಪ್ರಗತಿಯಲ್ಲಿರುವ ನೀರಾವರಿ ಯೋಜನೆಗಳು ಯಾವುವು ; ಈ ಯೋಜನೆಗಳು ಪ್ರಾರಂಭಗೊಂಡಿದ್ದು ಯಾವಾಗ ; ಯೋಜನೆಗಳು ಪ್ರಾರಂಭವಾದಾಗ ಇದ್ದ ಅಂದಾಜು ವೆಚ್ಚ ಎಷ್ಟು ; ಈಗ ಪರಿಷ್ಕೃತಗೊಂಡಿರುವ ಅಂದಾಜು ವೆಚ್ಚ ಎಷ್ಟು ; (ಯೋಜನೆವಾರು ವಿವರ ನೀಡುವುದು)

(ಆ) ಕಳೆದ ಮೂರು ವರ್ಷಗಳಿಂದ ಈ ಯೋಜನೆಗಳಿಗೆ ಆಯವ್ಯಯದಲ್ಲಿ ಬಜೆಟ್‌ನಲ್ಲಿ ನಿಗಧಿಪಡಿಸಿದ, ಬಿಡುಗಡೆ ಮಾಡಿದ ಮತ್ತು ವೆಚ್ಚ ಮಾಡಿರುವ ಹಣ ಎಷ್ಟು ; (ಯೋಜನೆವಾರು ವರ್ಷವಾರು ವಿವರ ನೀಡುವುದು)

(ಇ) ಈ ಯೋಜನೆಗಳು ಯಾವ ಹಂತದಲ್ಲಿವೆ ; ಯಾವಾಗ ಮುಕ್ತಾಯಗೊಳ್ಳಲಿವೆ ; (ಯೋಜನೆವಾರು ಮಾಹಿತಿ ನೀಡುವುದು)

(ಈ) ಯೋಜನೆಗಳು ಪೂರ್ಣಗೊಳ್ಳಲು ಅಗತ್ಯ ಇರುವ ಹಣ ಎಷ್ಟು; ಈ ಯೋಜನೆಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಯಾವ ಕ್ರಮಗಳನ್ನು ಕೈಗೊಳ್ಳಲಾಗುವುದು ?

## ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖಾ ವ್ಯಾಪ್ತಿಯ ಅಭಿವೃದ್ಧಿ ಬಗ್ಗೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು):–**

೧೧೬೪ (೧೨೬೨) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯಲ್ಲಿ ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖಾ ವ್ಯಾಪ್ತಿಯಲ್ಲಿ ಹಮ್ಮಿಕೊಂಡಿರುವ ನೂತನ ಯೋಜನೆಗಳಾವುವು ; (ಯೋಜನಾವಾರು, ತಾಲ್ಲೂಕುವಾರು ಮಾಹಿತಿ ಒದಗಿಸುವುದು)

(ಆ) ಜಿಲ್ಲೆಯ ಗ್ರಾಮಾಂತರ ಪ್ರದೇಶದಲ್ಲಿ ಪಾರಂಪರಿಕ ಕ್ರೀಡೆಗಳನ್ನು ಮುಂದುವರೆಸಲು ಮತ್ತು ಹಿಂದಿನಿಂದಲೂ ಇದ್ದ ಕ್ರೀಡಾ ಮೈದಾನಗಳನ್ನು ಉಳಿಸಿ ಅಭಿವೃದ್ಧಿ ಪಡಿಸಲು ಇಲಾಖೆಯ ವಿವಿಧ ಕಾರ್ಯ ಕ್ರಮಗಳೇನು ;

(ಇ) ಜಿಲ್ಲೆಯಲ್ಲಿ ವಿವಿಧ ಕ್ರೀಡಾ ಕ್ಷೇತ್ರಗಳಲ್ಲಿ ಗ್ರಾಮೀಣ ಪ್ರತಿಭೆಗಳನ್ನು ಗುರುತಿಸಲಾಗಿದೆಯೇ ;

(ಈ) ಹಾಗಿದ್ದಲ್ಲಿ, ಬೀದರ್ ಜಿಲ್ಲೆಯಲ್ಲಿ ತರಬೇತಿ ಮತ್ತು ಇತರ ಪ್ರೋತ್ಸಾಹ–ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆಯೇ ? (ಸಂಪೂರ್ಣ ವಿವರ ನೀಡುವುದು)

## ಬೀದರ್ ಜಿಲ್ಲೆಯಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿಯ ಕಾಮಗಾರಿಗಳ ಬಗ್ಗೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು):–**

೧೧೬೫ (೧೨೬೧) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಗೆ ಕಳೆದ ಮೂರು ವರ್ಷಗಳಲ್ಲಿ ವಿವಿಧ ಲೆಕ್ಕ ಶೀರ್ಷಿಕೆಗಳಲ್ಲಿ ಕೈಗೊಂಡಿರುವ ಕಾಮಗಾರಿಗಳು ಎಷ್ಟು ; (ಲೆಕ್ಕ ಶೀರ್ಷಿಕೆವಾರು, ಕಾಮಗಾರಿವಾರು, ವಿಧಾನ ಸಭೆ ಕ್ಷೇತ್ರಗಳವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ಈ ಕಾಮಗಾರಿಗಳಲ್ಲಿ ಪೂರ್ಣಗೊಂಡಿರುವ ಕಾಮಗಾರಿಗಳು ಎಷ್ಟು ; ಪೂರ್ಣಗೊಂಡ ಕಾಮಗಾರಿಗಳಿಗೆ ತಗುಲಿದ ಮೊತ್ತ ಎಷ್ಟು ; ಪಾವತಿಸಲಾಗಿರುವ ಮೊತ್ತ ಎಷ್ಟು ; ಇನ್ನೂ ಬಾಕಿ ಪಾವತಿಸಬೇಕಾಗಿರುವ ಮೊತ್ತ ಎಷ್ಟು ? (ಸಂಪೂರ್ಣವಾಗಿ ವಿಧಾನಸಭಾ ಕ್ಷೇತ್ರವಾರು, ವರ್ಷವಾರು, ಲೆಕ್ಕ ಶೀರ್ಷಿಕೆವಾರು ವಿವರ ನೀಡುವುದು)

## ಗೋಮಾಳ ಜಮೀನು ಒತ್ತುವರಿ ಬಗ್ಗೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೧೧೬೬ (೧೨೫೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಅರೆಹಳ್ಳಿ ಗ್ರಾಮದ ಹನುಮಗಿರಿ ಬೆಟ್ಟದ ತಪ್ಪಲಿನಲ್ಲಿರುವ ಸರ್ವೆ ನಂ. ೨೮ ಗೋಮಾಳ ಪ್ರದೇಶವಾಗಿದ್ದು ಸರ್ಕಾರಿ ಜಮೀನು ಎಂಬುದು ನಿಜವೇ ;

(ಆ) ಸದರಿ ಜಮೀನು ಎಷ್ಟು ಎಕರೆ ಪ್ರದೇಶವಾಗಿರುತ್ತದೆ, ಇದು ಒತ್ತುವರಿಯಾಗಿರುವುದು ನಿಜವೇ ; (ವಿವರ ನೀಡುವುದು)

(ಇ) ಈ ಸಂಬಂಧ ಉಚ್ಚನ್ಯಾಯಾಲಯದಿಂದ ಆದೇಶವಾಗಿರುವುದು ನಿಜವೇ ; ನಿಜವಾಗಿದ್ದಲ್ಲಿ, ವಿವರ ನೀಡುವುದು ;

(ಈ) ಸದರಿ ಆದೇಶದನ್ವಯ ಯಾವ ರೀತಿಯ ಕ್ರಮಕೈಗೊಳ್ಳಲಾಗಿದೆ ಕ್ರಮ ಕೈಗೊಳ್ಳದಿದ್ದಲ್ಲಿ ಉಚ್ಚನ್ಯಾಯಾಲಯದ ಆದೇಶದ ಉಲ್ಲಂಘನೆಯಾಗುವುದಿಲ್ಲವೇ ;

(ಉ) ಒತ್ತುವರಿ ತೆರವುಗೊಳಿಸಲು ಬೇಕಾಗುವ ಕಾಲಾವಧಿ ಏನು ?

## ಸ್ಮಶಾನ ಭೂಮಿ ಕೊರತೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೧೧೬೭ (೧೨೫೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಗ್ರಾಮಾಂತರ ಪ್ರದೇಶಗಳಲ್ಲಿ ಪರಿಶಿಷ್ಠ ಜಾತಿ ಮತ್ತು ಪಂಗಡದವರಿಗೆ ಸ್ಮಶಾನ ಭೂಮಿ ಇಲ್ಲದ ಕಡೆಗಳಲ್ಲಿ ಭೂಮಿಯನ್ನು ಖರೀದಿಸಿ ಅನುಕೂಲ ಒದಗಿಸಲು ಹಣವನ್ನು ಕಾಯ್ದಿರಿಸಿರುವುದು ನಿಜವೇ ; ವಿವರಿಸಿ ; (ಕಳೆದ ಮೂರು ವರ್ಷಗಳ ವಿವರ ನೀಡುವುದು)

(ಆ) ನಿಜವಾಗಿದ್ದಲ್ಲಿ, ಹಣವನ್ನು ಕಾಯ್ದಿರಿಸಿ ಎಷ್ಟು ಕಾಲಾವಾಯಿತು ; ಇದುವರೆಗೂ ಎಷ್ಟು ಕಡೆ ಭೂಮಿ ಖರೀದಿಸಲಾಗಿದೆ ?

## ವಿದ್ಯಾರ್ಥಿಗಳಿಗೆ ಪೂರೈಸಿರುವ ಸಮವಸ್ತ್ರ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):-**

೧೧೬೮ (೧೨೫೭) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕರ್ನಾಟಕ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮದಿಂದ ವಿದ್ಯಾ ವಿಕಾಸ ಯೋಜನೆಯಡಿ ಶಿಕ್ಷಣ ಇಲಾಖೆಗೆ ಕಳೆದ ಮೂರು ವರ್ಷಗಳಿಂದ ವಿದ್ಯಾರ್ಥಿಗಳ ಸಮವಸ್ತ್ರಕ್ಕೆಂದು ಪ್ರತಿ ವರ್ಷ ಎಷ್ಟು ಮೀಟರ್ ಬಟ್ಟೆಯನ್ನು ಸರಬರಾಜು ಮಾಡಲಾಗಿರುತ್ತದೆ; (ವರ್ಷವಾರು ವಿವರ ನೀಡುವುದು)

(ಆ) ಸದರಿ ವಸ್ತ್ರದ ಪೂರೈಕೆಯಿಮದ ಎಷ್ಟು ಜನ ನೇಕಾರರಿಗೆ ಅನುಕೂಲವಾಗುತ್ತದೆ; (ವಿವರ ನೀಡುವುದು)

(ಇ) ೨೦೧೬-೧೭ನೇ ಸಾಲಿಗೆ ಎಷ್ಟು ಮೀಟರ್ ಸಮವಸ್ತ್ರ ಬಟ್ಟೆಯನ್ನು ಸರಬರಾಜು ಮಾಡುವ ಅವಕಾಶ ಸಿಕ್ಕಿದೆ ?

## ಗೃಹ ಮಂಡಳಿ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ ಜಮೀನು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):-**

೧೧೬೯ (೧೨೫೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ವಡ್ಡರಹಳ್ಳಿ ಮತ್ತು ವಲಗೇರಹಳ್ಳಿ ಗ್ರಾಮಗಳ ವ್ಯಾಪ್ತಿಯಲ್ಲಿ ಬರುವ ಸರ್ವೆ ನಂಬರುಗಳು ಯಾವುವು; (ವಿವರ ನೀಡುವುದು)

(ಆ) ಇವುಗಳಲ್ಲಿ ಕರ್ನಾಟಕ ಗೃಹ ಮಂಡಳಿ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ ಜಮೀನುಗಳು ಯಾವುವು? (ವಿವರ ನೀಡುವುದು)

## ರಾಮನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಸಾರ್ವಜನಿಕರ ಅನುಕೂಲಕ್ಕೆ ಕಟ್ಟಡ ಬಗ್ಗೆ

**ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೧೭೦ (೧೨೭೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ಜಿಲ್ಲಾ ಮಟ್ಟದ ಸರ್ಕಾರಿ ಕಟ್ಟಡದ ಸಂಕೀರ್ಣ ಹಾಗೂ ಜಿಲ್ಲಾಧಿಕಾರಿ ಕಛೇರಿಯನ್ನು ನೂತನವಾಗಿ ನಿರ್ಮಿಸಲಾಗಿದೆಯೇ;

(ಆ) ಇಲ್ಲದಿದ್ದ ಪಕ್ಷದಲ್ಲಿ ಕಟ್ಟಡ ನಿರ್ಮಿಸುವುದಕ್ಕೆ ಇರುವ ಅಡೆ–ತಡೆಗಳೇನು? (ವಿವರ ನೀಡುವುದು)

## ಸರ್ವೆ ಇಲಾಖೆಯಲ್ಲಿ ಸರ್ವೆಯರ್‌ಗಳ ಕೊರತೆ ಬಗ್ಗೆ

**ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೧೭೧ (೧೨೭೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಸರ್ವೆ ಇಲಾಖೆಯಲ್ಲಿ ಸರ್ವೆಯರ್‌ಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ದುರಸ್ಥಿ, ಪೋಡಿ, ಹದ್ದುಬಸ್ತುಗಳನ್ನು ಮಾಡಿಸದೆ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಬಂದಿದ್ದಲ್ಲಿ, ಸಂಪೂರ್ಣ ವಿವರ ನೀಡುವುದು?

## ರಾಜ್ಯದಲ್ಲಿನ ಭೂಮಾಪಕರ ಕೊರತೆ ಮತ್ತು ಪೋಡಿ ಇತ್ಯರ್ಥ ಕುರಿತು

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು):-**

೧೧೭೨ (೧೨೫೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯ ಸರ್ಕಾರದಲ್ಲಿ ಭೂಮಾಪಕರುಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದಕ್ಕೆ ಕಾರಣಗಳೇನು; ಇವರಿಗೆ ಪರ್ಯಾಯವಾಗಿ ಪರವಾನಗಿ ಸರ್ವೆಯರ್‌ಗಳನ್ನು ಅವಲಂಬಿಸಿರುವುದು ನಿಜವೇ;

(ಆ) ಈ ನಿಟ್ಟಿನಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಪೋಡಿಗಾಗಿ ಬಂದಿರುವ ಅರ್ಜಿಗಳೆಷ್ಟು; ಸರ್ವೆ ಆಗಿರುವ ಪ್ರಕರಣಗಳೆಷ್ಟು; ಹಾಗೂ ಬಾಕಿ ಇರುವ ಅರ್ಜಿಗಳೆಷ್ಟು; (ಜಿಲ್ಲಾವಾರು ಸಂಖ್ಯಾ ವಿವರಗಳನ್ನು ಒದಗಿಸುವುದು)

(ಇ) ಪೋಡಿ ಪ್ರಕರಣಗಳು ಬಾಕಿ ಇರಲು ಕಾರಣಗಳೇನು; ಈ ಸಮಸ್ಯೆ ಪರಿಹಾರಕ್ಕೆ ಸರ್ಕಾರದ ಕ್ರಮಗಳೇನು;

(ಈ) ಅರ್ಜಿ ವಿಲೇವಾರಿ ಮಾಡಿದ್ದಕ್ಕಾಗಿ ನೀಡಬೇಕಾದ ಸಂಭಾವನೆ ಬಾಕಿ ಇರುವ ಮೊತ್ತವೆಷ್ಟು;(ಜಿಲ್ಲಾವಾರು ಮಾಹಿತಿ ನೀಡುವುದು)

(ಉ) ಪೋಡಿಗೆ ಹಾಗೂ ತತ್ಕಾಲ್ ಪೋಡಿಗೆ ವಿಧಿಸುವ ಶುಲ್ಕವೆಷ್ಟು; ಇದಕ್ಕೆ ಅನುಸರಿಸುವ ಮಾನದಂಡಗಳೇನು ? (ವಿವರ ನೀಡುವುದು)

## ಚಾಮರಾಜನಗರ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆಗೆ ಪರಿಹಾರ ಕುರಿತು

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು):–**

೧೧೭೩ (೧೨೮೫) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಚಾಮರಾಜನಗರ ಜಿಲ್ಲೆಯಲ್ಲಿ ಒಟ್ಟು ಇರುವ ಕೆರೆಗಳ ಸಂಖ್ಯೆಯೆಷ್ಟು; ವರ್ಷವಿಡೀ ನೀರಿರುವ ಕೆರೆಗಳೆಷ್ಟು; (ವಿವರ ನೀಡುವುದು)

(ಅ) ಉಮ್ಮತ್ತೂರು, ದೊಡ್ಡಕೆರೆಯ ಸಮೀಪ ಕುಡಿಯುವ ನೀರಿಗಾಗಿ ಸಾರ್ವಜನಿಕರು ಸತ್ಯಾಗ್ರಹ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಬಂದಿದ್ದಲ್ಲಿ, ಸಾರ್ವಜನಿಕರಿಗೆ ಸಮಸ್ಯೆಯ ಪರಿಹಾರಕ್ಕಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಜಿಲ್ಲೆಗೆ ಒಟ್ಟಾರೆ ಅವಶ್ಯಕತೆಯಿರುವ ನೀರಿನ ಪ್ರಮಾಣವೆಷ್ಟು;

(ಈ) ಚಾಮರಾಜನಗರ ಜಿಲ್ಲೆಗೆ ಮೈಸೂರು ಜಿಲ್ಲೆಯ ಸುತ್ತೂರು ಸಮೀಪದ ಕಬಿನಿ ನದಿಯಿಂದ ನೀರು ಸರಬರಾಜು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ಯಾವ ಹಂತದಲ್ಲಿದೆ;

(ಉ) ಸದರಿ ಯೋಜನೆಯಿಂದ ಎಷ್ಟು ಕೆರೆಗಳಿಗೆ ನೀರು ತುಂಬಿಸಬಹುದು ಮತ್ತು ಜಿಲ್ಲೆಗೆ ಎಷ್ಟು ಪ್ರಮಾಣದ ನೀರು ದೊರಕುತ್ತದೆ; ಈ ಯೋಜನೆಗಾಗಿ ಸರ್ಕಾರ ಮೀಸಲಿಟ್ಟಿರುವ ಅನುದಾನವೆಷ್ಟು; ಯೋಜನೆ ಪ್ರಾರಂಭವಾಗಿದ್ದಲ್ಲಿ, ಎಷ್ಟು ಅನುದಾನ ಬಳಕೆಯಾಗಿದೆ ಹಾಗೂ ಈ ಯೋಜನೆ ಪೂರ್ಣಗೊಳ್ಳಲು ಇನ್ನೂ ಎಷ್ಟು; ಸಮಯ ಬೇಕಾಗಬಹುದು?

## ಬರ ಪರಿಹಾರಕ್ಕೆ ವಿಶೇಷ ಪ್ಯಾಕೇಜ್ ಕುರಿತು

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು):–**

೧೧೭೪ (೧೨೫೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬರ ಪರಿಹಾರಕ್ಕೆ ವಿಶೇಷ ಪ್ಯಾಕೇಜ್‌ಗಾಗಿ ರಾಜ್ಯದ ಎಷ್ಟು ತಾಲ್ಲೂಕುಗಳನ್ನು ಗುರುತಿಸಲಾಗಿದೆ; ಆ ತಾಲ್ಲೂಕುಗಳ್ಯಾವುವು;

(ಆ) ಈ ಪ್ಯಾಕೇಜ್‌ನಲ್ಲಿ ಬಂಪರ್ ಸಬ್ಸಿಡಿ ಲಭ್ಯವಾಗುತ್ತಿರುವುದು ಕಂಡು ಬಂದಿದೆಯೆ ; ಲಭ್ಯವಾಗುವ ಸಬ್ಸಿಡಿ ಮೊತ್ತವೆಷ್ಟು;

(ಇ) ಇದರಿಂದಾಗಿ ಒಣಬೇಸಾಯಕ್ಕೆ ಅನುಕೂಲ ಕಲ್ಪಿಸಿದಂತಾಗುವುದೆಂದು ಸರ್ಕಾರ ಭಾವಿಸುವುದೆ. ಈ ಸೌಲಭ್ಯ ಪಡೆದ ರೈತರ ಸಂಖ್ಯೆ ಎಷ್ಟು; (ವಿವರಗಳನ್ನು ಜಿಲ್ಲಾವಾರು ಒದಗಿಸುವುದು)

(ಈ) ಈ ನಿಟ್ಟಿನಲ್ಲಿ ಕೇಂದ್ರದಿಂದ ಬಂದಿರುವ ಪರಿಹಾರ ಎಷ್ಟು, ಇದನ್ನು ರಾಜ್ಯ ಸರ್ಕಾರ ಸಮರ್ಪಕವಾಗಿ ಬಳಸಿಕೊಂಡಿದೆಯೇ;

(ಉ) ಬರ ಪರಿಹಾರ ಮೊತ್ತವನ್ನು ರೈತರ ಖಾತೆಗೆ ಜಮಾ ಮಾಡಲು ಇರುವ ತೊಂದರೆಗಳೇನು, ಈ ರೀತಿ ಹಂಚಿಕೆ ಮಾಡಿದ ಮೊತ್ತ ಎಷ್ಟು; (ವಿವರಗಳನ್ನು ಜಿಲ್ಲಾವಾರು ವಿವರ ಒದಗಿಸುವುದು)

(ಊ) ಅದೇ ರೀತಿ ಹಿಂಗಾರು ಹಾನಿಗಾಗಿ ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆಯೇ; ಎಷ್ಟು ಮೊತ್ತದ ಬೇಡಿಕೆಯನ್ನು ಕೇಂದ್ರಕ್ಕೆ ಸಲ್ಲಿಸಲಾಗಿದೆ? (ವಿವರ ಒದಗಿಸುವುದು)

## ರಾಜ್ಯದ ವಾತಾವರಣದಲ್ಲಿ ಬದಲಾವಣೆಯಾಗುತ್ತಿರುವ ಬಗ್ಗೆ

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೧೭೫ (೧೨೭೩) ಮಾನ್ಯ ಅರಣ್ಯ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ:-

ರಾಜ್ಯದಲ್ಲಿ ಪರಿಸರ (ವಾತಾವರಣ)ದಲ್ಲಿ ಬದಲಾವಣೆಯಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ವಾತಾವರಣದಲ್ಲಿ ಆಗುತ್ತಿರುವ ಬದಲಾವಣೆಯ ವಿಷಯವಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಮಾಹಿತಿ ಒದಗಿಸುವುದು)

## ಕಾವೇರಿ ನದಿಯು ಕೊಳಚೆ ನೀರಿನಿಂದ ಮಲೀನಗೊಳ್ಳುತ್ತಿರುವ ಬಗ್ಗೆ

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೧೭೬ (೧೨೭೪) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದ ಜೀವನದಿಯಾದ ಕಾವೇರಿ ನದಿಯ ವಿಸ್ತಾರ ಎಷ್ಟು; (ವಿವರ ನೀಡುವುದು) ಕಾವೇರಿ ನದಿ ನೀರಿನಿಂದ ಬೆಳೆಯನ್ನು ಬೆಳೆಯುತ್ತಿರುವ ಕೃಷಿ ಭೂಮಿಯ ವಿಸ್ತೀರ್ಣ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)

(ಆ) ಕಾವೇರಿ ನದಿ ನೀರನ್ನು ಕುಡಿಯುವ ಸಲುವಾಗಿ ಬಳಸುತ್ತಿರುವ ನಗರಗಳು ಯಾವುವು ಹಾಗೂ ಎಷ್ಟು ; (ವಿವರ ನೀಡುವುದು)

(ಇ) ಕಾವೇರಿ ನದಿಯ ನೀರಿನ ಶುದ್ಧತೆ, ನೀರು ಕಲುಷಿತಗೊಳದಿರಲು ಹಾಗೂ ನಗರಗಳ ಕೊಳಚೆ ನೀರು ಸೇರದಿರಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)

## ಹಾವೇರಿ ಜಿಲ್ಲೆಯಲ್ಲಿ ಬೆಳೆಹಾನಿ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು):–**

೧೧೭೭ (೧೩೩೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ಎರಡು ವರ್ಷಗಳಲ್ಲಿ ಹಾವೇರಿ ಜಿಲ್ಲೆಯಲ್ಲಿ ಒಟ್ಟು ಎಷ್ಟು ಎಕರೆ ಬೆಳೆ ಹಾನಿಯಾಗಿದೆ ಯಾವ ಯಾವ ಕಾರಣಗಳಿಂದ ಹಾನಿಯಾಗಿರುತ್ತದೆ; (ತಾಲ್ಲೂಕುವಾರು, ಗ್ರಾಮವಾರು ರೈತರ ಹೆಸರುವಾರು ವಿವರ ನೀಡುವುದು)

(ಆ) ಬೆಳೆ ಹಾನಿಯಾಗಿರುವಂತಹ ರೈತರಿಗೆ ಸರ್ಕಾರದ ವತಿಯಿಂದ ಪರಿಹಾರ ನೀಡಲಾಗಿದೆಯೇ; ಯಾವ ಯಾವ ಬೆಳೆಗೆ ಎಷ್ಟೆಷ್ಟು ಪರಿಹಾರ ನೀಡಲಾಗುವುದು; (ತಾಲ್ಲೂಕುವಾರು, ಗ್ರಾಮವಾರು ರೈತರ ಹೆಸರುಗಳೊಂದಿಗೆ ವಿವರ ನೀಡುವುದು)

(ಇ) ಕಳೆದ ಎರಡು ವರ್ಷಗಳಲ್ಲಿ ಎಲ್ಲಾ ಬೆಳೆ ಹಾನಿ ಪ್ರಕರಣಗಳಿಗೆ ಪರಿಹಾರ ಒದಗಿಸಲು ಇರುವ ಅಡೆತಡೆಗಳೇನು ಮತ್ತು ಬಾಕಿ ಇರುವ ಪ್ರಕರಣಗಳೆಷ್ಟು;? (ತಾಲ್ಲೂಕುವಾರು, ಗ್ರಾಮವಾರು ರೈತರ ಹೆಸರುಗಳೊಂದಿಗೆ ವಿವರ ನೀಡುವುದು)

## ಹಾವೇರಿ, ಧಾರವಾಡ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಅರಣ್ಯ ಪ್ರದೇಶದ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು):–**

೧೧೭೮ (೧೩೩೯) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹಾವೇರಿ, ಧಾರವಾಡ, ಗದಗ ಜಿಲ್ಲೆಗಳಲ್ಲಿ ಎಷ್ಟು ವಿಸ್ತೀರ್ಣದ ಅರಣ್ಯ ಪ್ರದೇಶವಿದೆ; (ಜಿಲ್ಲಾವಾರು ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಕಳೆದ ೩ ವರ್ಷಗಳಲ್ಲಿ ಅರಣ್ಯ ಇಲಾಖೆಯಿಂದ ಕೈಗೊಂಡಿರುವ ಕಾಮಗಾರಿಗಳು ಎಷ್ಟು; (ವಿಧಾನಸಭಾ ಕ್ಷೇತ್ರವಾರು, ತಾಲ್ಲೂಕುವಾರು ವಿವರ ನೀಡುವುದು)

(ಇ) ಸದರಿ ಕಾಮಗಾರಿಗಳಿಗೆ ಬಿಡುಗಡೆ ಮಾಡಲಾಗಿರುವ ಹಣ ಎಷ್ಟು; (ತಾಲ್ಲೂಕುವಾರು, ಕಾಮಗಾರಿವಾರು ವಿವರ ನೀಡುವುದು)

(ಈ) ಸದರಿ ಕಾಮಗಾರಿಗಳಿಗೆ ಖರ್ಚಾಗಿರುವ ಹಣ ಎಷ್ಟು; ಉಳಿಕೆಯಾದ ಮೊತ್ತ ಎಷ್ಟು; (ಕಾಮಗಾರಿವಾರು, ವರ್ಷವಾರು ಮಾಹಿತಿ ನೀಡುವುದು)

(ಉ) ಈ ಅರಣ್ಯ ಪ್ರದೇಶದಲ್ಲಿ ಔಷಧ ರೂಪದ ಸಸ್ಯ-ಮರಗಿಡಗಳು ಇವೆಯೇ; ಅವು ಯಾವುವು? (ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ಒದಗಿಸುವುದು)

## ಹಾವೇರಿ ಜಿಲ್ಲೆಯಲ್ಲಿ ಕಾರ್ಮಿಕರ ಸಂಖ್ಯೆ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು):-**

೧೧೭೯ (೧೩೩೭) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಹಾವೇರಿ ಜಿಲ್ಲೆಯಲ್ಲಿ ವಿವಿಧ ಕಂಪನಿ ಇನ್ನಿತರ ತೋಟಗಳ ಕಾರ್ಮಿಕರ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)

(ಆ) ಈ ಕಾರ್ಮಿಕರು ಗೌರವಯುತ ಮತ್ತು ಆರೋಗ್ಯಕರ ಜೀವನ ನಡೆಸಲು ಯಾವ ರೀತಿಯ ಕ್ರಮಕೈಗೊಳ್ಳಲಾಗಿದೆ ಮತ್ತು ಅನುಕೂಲ ಕಲ್ಪಿಸಲಾಗಿದೆ;

(ಇ) ಕಾರ್ಮಿಕರ ಭವಿಷ್ಯ ಕುರಿತಂತೆ ಸರ್ಕಾರದ ಚಿಂತನೆ ಏನು?

## ಹಾವೇರಿ ಜಿಲ್ಲೆಯ ತಾಂಡಗಳ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು):–**

೧೧೮೦ (೧೩೩೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹಾವೇರಿ ಜಿಲ್ಲೆಯಲ್ಲಿ ಬರುವ ಒಟ್ಟು ತಾಂಡಗಳೆಷ್ಟು; (ತಾಲ್ಲೂಕುವಾರು, ತಾಂಡಗಳ ಹೆಸರುಗಳೊಂದಿಗೆ ವಿವರ ಒದಗಿಸುವುದು)

(ಆ) ತಾಂಡಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತನೆ ಮಾಡಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ; ಇದ್ದಲ್ಲಿ ವಿವರ ಒದಗಿಸುವುದು;

(ಇ) ಜಿಲ್ಲೆಯಲ್ಲಿರುವ ತಾಂಡಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿರ್ವತಿಸಲು ಒಟ್ಟು ಎಷ್ಟು ಸಮಯಬೇಕಾಗುತ್ತದೆ;

(ಈ) ತಾಂಡಗಳು ಈಗಾಗಲೇ ಕಂದಾಯ ಗ್ರಾಮಗಳನ್ನಾಗಿ ಪರಿವರ್ತನೆ ಮಾಡಿದ್ದರೆ ಎಷ್ಟು ತಾಂಡಗಳು ಆಗಿರುತ್ತವೆ; ಯಾವಾಗ ಆಗಿರುತ್ತವೆ? (ತಾಲ್ಲೂಕುವಾರು, ತಾಂಡಗಳ ಹೆಸರುಗಳೊಂದಿಗೆ ವಿವರ ನೀಡುವುದು)

## ಹಾವೇರಿ ಜಿಲ್ಲೆಯಲ್ಲಿ ಶ್ರೀಗಂಧವನ್ನು ಖಾಸಗಿಯವರು ಬೆಳೆಸುವ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು):–**

೧೧೮೧ (೧೩೩೪) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹಾವೇರಿ ಜಿಲ್ಲೆಯಲ್ಲಿ ಖಾಸಗಿಯವರು ಶ್ರೀಗಂಧವನ್ನು ಬೆಳೆಸಲು ಅರಣ್ಯ ಇಲಾಖೆಯ ಅನುಮತಿ ಅವಶ್ಯವಿದೆಯೆ;

(ಆ) ಖಾಸಗಿಯವರು ಬೆಳೆದ ಶ್ರೀಗಂಧವನ್ನು ಕಟಾವು ಮಾಡಲು ಮತ್ತು ಮಾರಾಟ ಮಾಡಲು ಇಲಾಖೆಯ ಅನುಮತಿ ಅಗತ್ಯವಿದೆಯೇ;

(ಇ) ರೈತರು ಮುಕ್ತವಾಗಿ ಶ್ರೀಗಂಧವನ್ನು ಬೆಳೆಯಲು ಮಾರಾಟ ಮಾಡಲು ಅನುಮತಿ ನೀಡುವ ವಿಚಾರ ಸರ್ಕಾರದ ಮುಂದಿದೆಯೇ?

## ಗದಗ ಜಿಲ್ಲೆ ಮಾಗಡಿ ಕೆರೆ ಹಾಗೂ ಕಪ್ಪದ ಗುಡ್ಡ ಮೀಸಲು ಪ್ರದೇಶಗಳ ಬಗ್ಗೆ ಮಾಹಿತಿ

**ಶ್ರೀ ಎಸ್. ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ):–**

೧೧೮೨ (೧೩೩೩) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಗದಗ ಜಿಲ್ಲೆಯ "ಮಾಗಡಿ ಕೆರೆ" ಸಂರಕ್ಷಿತ ಪ್ರದೇಶಕ್ಕಾಗಿ ಕಳೆದ ಎರಡು ಆರ್ಥಿಕ ವರ್ಷಗಳಲ್ಲಿ ಇದರ ಅಭಿವೃದ್ಧಿಗಾಗಿ ಎಷ್ಟು ಅನುದಾನ ಮೀಸಲಿಡಲಾಗಿದೆ;

(ಆ) ಮಾಗಡಿ ಕೆರೆಗೆ ಪ್ರತಿ ವರ್ಷ ಪರ ರಾಷ್ಟ್ರಗಳಿಂದ ಆಗುಮಿಸುತ್ತಿರುವ ಪಕ್ಷಿಗಳಿಗೆ ಯಾವ ರೀತಿಯ ಸಂರಕ್ಷಣೆ ಕ್ರಮಗಳನ್ನು ಕೈಗೊಳ್ಳಲಾಗಿದೆ;

(ಇ) ಗದಗ ಜಿಲ್ಲೆ, "ಕಪ್ಪದ ಗುಡ್ಡ ಮೀಸಲು ಪ್ರದೇಶ" ಅಭಿವೃದ್ಧಿಗಾಗಿ ೨೦೧೬-೧೭ರಲ್ಲಿ ಎಷ್ಟು ಅನುದಾನ ಮೀಸಲಿಡಲಾಗಿದೆ; ಮತ್ತು ಯಾವ ಯಾವ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ? (ವಿವರ ನೀಡುವುದು)

## ಗದಗ ಜಿಲ್ಲೆಯ ಕೆರೆಗಳ ಬಗ್ಗೆ ಮಾಹಿತಿ ಕುರಿತು

**ಶ್ರೀ ಎಸ್. ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ):-**

೧೧೮೩ (೧೩೩೨) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಗದಗ ಜಿಲ್ಲೆಯಯಲ್ಲಿರುವ ಒಟ್ಟು ಸಣ್ಣ ಹಾಗೂ ದೊಡ್ಡ ಕೆರೆಗಳ ಎಷ್ಟು; ಈ ಕೆರೆಗಳ ಅಭಿವೃದ್ಧಿಗಾಗಿ ಯಾವ-ಯಾವ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಈ ಕೆರೆಗಳ ಅಭಿವೃದ್ಧಿಗಾಗಿ ೨೦೧೫-೧೬ನೇ ಹಾಗೂ ೨೦೧೬-೧೭ನೇ ಸಾಲಿನಲ್ಲಿ ಖರ್ಚಾದ ಮತ್ತು ಮಂಜೂರಾದ ಅನುದಾನ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)

(ಇ) ಗದಗ ನಗರದ ಸುಪ್ರಸಿದ್ಧ "ಭೀಷ್ಮ ಕೆರೆ" ಅಭಿವೃದ್ಧಿಗಾಗಿ ಮತ್ತು ಆ ಕೆರೆಗೆ ನೀರು ತುಂಬಿಸುವ ಯೋಜನೆಯನ್ನು ರೂಪಿಸಲಾಗಿದೆಯೇ; ಹಾಗಿದ್ದಲ್ಲಿ, ಇದಕ್ಕೆ ಎಷ್ಟು ಅನುದಾನ ಒದಗಿಸಲಾಗಿದೆ? (ವಿವರ ನೀಡುವುದು)

## ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಎಂಪ್ಲಾಯಿಸ್ ಅಸೋಸಿಯೇಷನ್‌ಗೆ ಆಡಳಿತಾಧಿಕಾರಿ ನೇಮಿಸುವ ಬಗ್ಗೆ

**ಕ್ಯಾಪ್ಟ್‌ನ್ ಗಣೇಶ್ ಕಾರ್ಣಿಕ್ ಹಾಗೂ ಶ್ರೀ ಎಸ್. ವ್ಹಿ. ಸಂಕನೂರ (ಶಿಕ್ಷಕರ ಕ್ಷೇತ್ರ) ಮತ್ತು (ಪದವೀಧರರ ಕ್ಷೇತ್ರ):–**

೧೧೮೪ (೧೩೪೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್‌ನಲ್ಲಿ ನಿವೇಶನ ಹಂಚಿಕೆಯಲ್ಲಿ ಅಕ್ರಮ ಅವ್ಯವಹಾರಗಳು ನಡೆದಿರುವುದರಿಂದ ಆಡಳಿತಾಧಿಕಾರಿಯನ್ನು ನೇಮಕ ಮಾಡಲು ವರದಿ ಸಲ್ಲಿಸಿದ ನಂತರ ಪುನಃ ಮತ್ತೊಮ್ಮೆ ಕಂದಾಯ ಇಲಾಖೆಯಿಂದ ವಿಚಾರಣಾಧಿಕಾರಿಯನ್ನು ನೇಮಿಸಲು ಕಾರಣವೇನು; ಯಾವ ಕಾನೂನಿನಡಿ ಮತ್ತೊಮ್ಮೆ ವಿಚಾರಣಾಧಿಕಾರಿ ನೇಮಿಸಲು ಅವಕಾಶವಿದೆ;

(ಆ) ಈ ಅಸೋಸಿಯೇಷನ್ ವಿರುದ್ಧ ನಗರಾಭಿವೃದ್ಧಿ ಇಲಾಖೆಯಿಂದ ನಿವೃತ್ತ ಐ.ಎ.ಎಸ್. ಅಧಿಕಾರಿರವರ ನೇತೃತ್ವದಲ್ಲಿ ತನಿಖೆ ಮಾಡಲು ಹೊರಡಿಸಿದ್ದ ಆದೇಶಕ್ಕೆ ಅಸೋಸಿಯೇಷನ್‌ನವರು ಹೈಕೋರ್ಟ್‌ನಲ್ಲಿ ೨೦೧೩ರಲ್ಲಿ ಮಧ್ಯಂತರ ತಡೆಯಾಜ್ಞೆ ತೆಗೆದುಕೊಂಡಿದ್ದು. ಈ ತಡೆಯಾಜ್ಞೆಗೂ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್‌ರವರು ಕೂಡಲೇ ಆಡಳಿತಾಧಿಕಾರಿಯನ್ನು ನೇಮಿಸಬೇಕೆಂದು ಕಳುಹಿಸಿದ್ದ ವರದಿಗೂ ಸಂಬಂಧ ಕಲ್ಪಿಸಿ, ಕಂದಾಯ ಇಲಾಖೆಯ ಅಧಿಕಾರಿಗಳು ಶಾಮೀಲಾಗಿ ಆಡಳಿತಾಧಿಕಾರಿ ನೇಮಿಸುವ ಪ್ರಕ್ರಿಯೆಗೆ ಬದಲಾಗಿ ಪುನ ವಿಚಾರಣಾಧಿಕಾರಿಯನ್ನು ನೇಮಿಸಬೇಕೆಂದು ಅನಗತ್ಯವಾಗಿ ಕಾನೂನು ಇಲಾಖೆಗೆ ಕಡತ ಕಳುಹಿಸಿ ಅಭಿಪ್ರಾಯ ಪಡೆದಿರುವುದು

ನಿಜವೇ; ಹಾಗಿದ್ದಲ್ಲಿ, ತಪ್ಪಿತಸ್ಥ ಅಧಿಕಾರಿ/ನೌಕರರ ವಿರುದ್ಧ ಕೈಗೊಳ್ಳುವ ಕ್ರಮಗಳೇನು;

(ಇ) ಈ ಹಂತದಲ್ಲಾದರೂ ಆದೇಶವನ್ನು ಮಾರ್ಪಡಿಸಿ ಪುನಃ ವಿಚಾರಣಾಧಿಕಾರಿಯನ್ನು ನೇಮಿಸುವ ಬದಲು ಆಡಳಿತಾಧಿಕಾರಿಯನ್ನು ನೇಮಿಸಲು ಸರ್ಕಾರವು ಕ್ರಮ ತೆಗೆದುಕೊಳ್ಳುವುದೇ; ಇಲ್ಲದಿದ್ದಲ್ಲಿ ಸ್ಪಷ್ಟವಾಗಿ ಅಕ್ರಮ-ಅವ್ಯವಹಾರಗಳು ನಡೆದಿವೆ ಎಂದು ಕಾನೂನು ಪ್ರಕಾರ ತನಿಖೆ ನಡೆಸಿ ವರದಿ ಸಲ್ಲಿಸಿರುವ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್ ರವರ ವರದಿಯಲ್ಲಿ ಸತ್ಯಾಂಶವಿಲ್ಲವೇ;

(ಈ) ಆಡಳಿತಾಧಿಕಾರಿ ನೇಮಿಸಬೇಕೆಂದು ವರದಿ ನೀಡಿದ ನಂತರದಿಂದ ಈ ದಿನಾಂಕದವರೆಗೂ ಬಿಡಿಎ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್‌ನವರು ಅಕ್ರಮವಾಗಿ ಪ್ರಾಧಿಕಾರದ ನೌಕರರಲ್ಲದವರಿಗೆ ನಿವೇಶನಗಳನ್ನು ನೋಂದಣಿ ಮಾಡಿಕೊಡುತ್ತಿದ್ದು, ಈಗಲಾದರೂ ಉಳಿದಿರುವ ನಿವೇಶನಗಳನ್ನು ಈ ದಿನಾಂಕದಿಂದ ನೋಂದಣಿ ಮಾಡಿಕೊಡದಂತೆ ಕೈಗೊಳ್ಳುವ ಕ್ರಮಗಳೇನು; ಅಕ್ರಮ-ಅವ್ಯವಹಾರಗಳು ನಡೆದಿರುವುದು ಸಾಬೀತಾಗಿರುವುದರಿಂದ ಅಂತಿಮವಾಗಿ ಉಳಿದ ವಸಂತಪುರ ಗ್ರಾಮದ ೩ ಎಕರೆ ಜಮೀನನ್ನು ಅಸೋಸಿಯೇಷನ್‌ಗೆ ಬಿಡುಗಡೆ ಮಾಡದಂತೆ ನಗರಾಭಿವೃದ್ಧಿ ಇಲಾಖೆಯ ಗಮನಕ್ಕೆ ತಂದು ಕ್ರಮ ಕೈಗೊಳ್ಳಲಾಗುವುದೇ; ಸದಸ್ಯತ್ವ ಪಡೆದು ನಿವೇಶನಕ್ಕೆ ಹಣ ಪಾವತಿಸಿರುವ ಪ್ರಾಧಿಕಾರದ ಇನ್ನೂ ಕೆಲವು ಹಾಲಿ ಮತ್ತು ನಿವೃತ್ತ ನೌಕರರಿಗೆ ನ್ಯಾಯ ಒದಗಿಸುವ ದಿಸೆಯಲಿ ಸರ್ಕಾರವು ಕೈಗೊಳ್ಳುವ ಕ್ರಮಗಳೇನು?

## ಸರ್ಕಾರಿ ಭೂಮಿ ಒತ್ತುವರಿ ಬಗ್ಗೆ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು):-**

೧೧೮೫ (೧೩೧೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಕಂದಾಯ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಭೂಮಿಯ ವಿಸ್ತೀರ್ಣವೆಷ್ಟು; (ತಾಲ್ಲೂಕುವಾರು ವಿವರಗಳನ್ನು ನೀಡುವುದು)

(ಆ) ಈ ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಹಾಗಿದ್ದಲ್ಲಿ, ಎಷ್ಟು ವಿಸ್ತೀರ್ಣದ ಭೂಮಿಯನ್ನು ಒತ್ತುವರಿ ಮಾಡಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು)

(ಈ) ಸರ್ಕಾರಿ ಭೂಮಿಯನ್ನು ಒತ್ತುವರಿದಾರರಿಂದ ವಾಪಸ್ ಪಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

## ರೈತರಿಗೆ ಖಾತೆ ಮತ್ತು ಪಹಣಿ ನೀಡುವ ಕುರಿತು

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು):-**

೧೧೮೬ (೧೨೯೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ತುಮಕೂರು ಜಿಲ್ಲೆ, ತುರುವೇಕೆರೆ ತಾಲ್ಲೂಕು ಗೋಣಿ ತುಮಕೂರು ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳು ಯಾವುವು; ಸದರಿ ಪ್ರತಿ ಗ್ರಾಮದಲ್ಲಿ ಎಷ್ಟೆಷ್ಟು ಕಂದಾಯ ಖಾತೆಗಳನ್ನು ರೈತರು ಹೊಂದಿರುತ್ತಾರೆ; (ಗ್ರಾಮವಾರು ಪೂರ್ಣ ಮಾಹಿತಿ ಒದಗಿಸುವುದು)

(ಆ) ಸದರಿ ಯಾವ ಯಾವ ಗ್ರಾಮಗಳ ಯಾವ ಯಾವ ರೈತರಿಗೆ ಕಳೆದ ೩ ವರ್ಷಗಳಲ್ಲಿ ಖಾತೆ ಹಾಗೂ ಪಹಣಿಗಳನ್ನು ನೀಡಲಾಗಿರುತ್ತದೆ ಹಾಗೂ ಅರ್ಜಿ ಸಲ್ಲಿಸಿದ ಎಷ್ಟೆಷ್ಟು ದಿನಗಳಲ್ಲಿ ನೀಡಲಾಗಿರುತ್ತದೆ; (ವಿವರ ನೀಡುವುದು)

(ಇ) ಈ ಅವಧಿಯಲ್ಲಿ ಮೇಲ್ಕಂಡ ದಾಖಲಾತಿಗಳನ್ನು ಇನ್ನೂ ನೀಡದೇ ಬಾಕಿ ಉಳಿದಿರುವ ಪ್ರಕರಣಗಳೆಷ್ಟು; (ಪೂರ್ಣ ವಿವರ ಒದಗಿಸುವುದು)

(ಈ) ಮೇಲ್ಕಂಡ ದಾಖಲೆಗಳನ್ನು ನೀಡಲು ಕೆಳಹಂತದ ನೌಕರರಿಂದ ರೈತರಿಗೆ ಕಿರುಕುಳ ಹಾಗೂ ಭ್ರಷ್ಟಾಚಾರದಿಂದ ತೊಂದರೆಯಾಗುತ್ತಿದ್ದು, ಇದನ್ನು ತಪ್ಪಿಸಲು ಕೂಡಲೇ ಸರ್ಕಾರ ಕೈಗೊಳ್ಳುವ ಕ್ರಮಗಳೇನು?

## ಆಕಸ್ಮಿಕ ಬೆಂಕಿ ಪ್ರಕರಣದಿಂದ ಬೆಳೆ ಹಾನಿ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೧೮೭ (೧೩೨೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಮೈಸೂರು ಚಾಮರಾಜನಗರ ಜಿಲ್ಲೆಗಳಲ್ಲಿ ಕಳೆದ ಮೂರು ತಿಂಗಳಲ್ಲಿ ಆಕಸ್ಮಿಕ ಬೆಂಕಿ ಪ್ರಕರಣದಿಂದ ಬೆಳೆಹಾನಿಯಾಗಿರುವ ಪ್ರಕರಣಗಳ ಸಂಖ್ಯೆ ಎಷ್ಟು; (ಅಗ್ನಿ ಆಕಸ್ಮಿಕ ಸಂಭವಿಸಿದ ಊರು, ಜಮೀನಿನ ಮಾಲೀಕರ ಹೆಸರು, ಹಾನಿಗೊಳಗಾದ ಬೆಳೆದು ನಿಂತ ಬೆಳೆ ಮತ್ತು ಬೆಳೆಯ ಪ್ರಮಾಣ, ಜಮೀನಿನ ವಿಸ್ತೀರ್ಣ, ಅಗ್ನಿ,

ಅನಾಹುತಕ್ಕೊಳಗಾದ ಒಕ್ಕಣಿ ಮಾಡಿದ್ದ ರೈತರ ಹೆಸರು, ಹಾನಿಯಾದ ಬೆಳೆಯ ವಿವರ, ಸಂಭವಿಸಿರುವ ಅಂದಾಜು ನಷ್ಟ, ಈ ವಿವರಗಳನ್ನು ಪ್ರತಿಯೊಂದು ಪ್ರಕರಣಕ್ಕೆ ಸಂಬಂಧಿಸಿದಂತೆ ಒದಗಿಸುವುದು)

(ಆ) ಇದುವರೆಗೆ ಈ ವಿಚಾರದಲ್ಲಿ ರೈತರಿಗೆ ನೀಡಿರುವ ಪರಿಹಾರ ಎಷ್ಟು; ಇನ್ನೂ ಎಷ್ಟು ಪ್ರಕರಣಗಳನ್ನು ಪರಿಹಾರ ನೀಡಬೇಕಾಗಿದೆ; ವಿದ್ಯುತ್ ಸಂಪರ್ಕದ ತಂತಿಗಳು ಕೆಳಮಟ್ಟದಲ್ಲಿ ಹಾದುಹೋಗಿ ಶಾರ್ಟ್‌ಸರ್ಕ್ಯೂಟ್‌ನಿಂದ ಬೆಂಕಿ ಬಿದ್ದು ಬೆಳೆ ಹಾನಿ ಆಗಿದ್ದಲ್ಲಿ ಈ ಬಗ್ಗೆ ವಿದ್ಯುತ್ ಸಂಪರ್ಕದ ಲೈನ್‌ನಲ್ಲಿ ಆಗಿರುವ ಲೋಪದೋಷವನ್ನು ಸರಿಪಡಿಸುವಂತೆ ಮಂಡಳಿಯ ವತಿಯಿಂದ ಪರಿಹಾರ ನೀಡುವಂತೆ ವಿದ್ಯುತ್ ಮಂಡಳಿಗೆ ಪತ್ರ ಬರೆಯಲಾಗಿದೆಯೇ ?

## ಮೈಸೂರು ನಗರದ ಕೆರೆಗಳ ಸಂರಕ್ಷಣೆ ಮತ್ತು ನಿರ್ವಹಣೆ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೧೮೮ (೧೩೨೩) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮೈಸೂರು ನಗರ ಹಾಗೂ ನಗರಕ್ಕೆ ಹೊಂದಿಕೊಂಡಂತೆ ಸುತ್ತಮುತ್ತ ಇರುವ ಕೆರೆಗಳ ಸಂಖ್ಯೆ ಎಷ್ಟು; ಅವು ಯಾವುವು;

(ಆ) ಈ ಕೆರೆಗಳ ಒತ್ತುವರಿಯನ್ನು ತೆರವುಗೊಳಿಸಿ ಆಳ ಮಾಡಿ ಕಾವೇರಿ ಮತ್ತು ಕಬಿನಿ ಮೂಲದಿಂದ ನೀರು ತುಂಬಿಸುವ ಯೋಜನೆಯನ್ನು ರೂಪಿಸಿ ಜಾರಿಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದೇ?

## ರಾಜ್ಯದ ೧೭೬ ತಾಲ್ಲೂಕುಗಳ ಅಕ್ರಮ ಸಕ್ರಮ ಸಮಿತಿ ಬಗ್ಗೆ

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು):-**

೧೧೮೯ (೧೨೯೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದ ೧೭೬ ತಾಲ್ಲೂಕುಗಳ ಪೈಕಿ ಅಕ್ರಮ ಸಕ್ರಮ ಸಮಿತಿಗಳು ಕಾರ್ಯ ನಿರ್ವಹಸುತ್ತಿರುವ ತಾಲ್ಲೂಕುಗಳು ಯಾವುವು; ಸಮಿತಿಗಳು ಅಸ್ತಿತ್ವದಲ್ಲಿ ಇಲ್ಲದಿರುವ ತಾಲ್ಲೂಕುಗಳು ಯಾವುವು; ಇಲ್ಲದಿದ್ದರೆ ಕಾರಣಗಳೇನು; (ತಾಲ್ಲೂಕುವಾರು ವಿವರ ನೀಡುವುದು)

(ಆ) ಭೂಮಿ ಮಂಜೂರಾತಿಯಲ್ಲಿ ಅಕ್ರಮ ಸಕ್ರಮಕ್ಕಾಗಿ ಫಾರಂ-೫೦ ಮತ್ತು ೫೩ರಲ್ಲಿ ವಿಲೇ ಆಗಿರುವ ಆಗದೇ ಇರುವ ಅರ್ಜಿಗಳೆಷ್ಟು; (ತಾಲ್ಲೂಕುವಾರು ವಿವರ ನೀಡುವುದು) ವಿಲೇ ಆಗದೇ ಇರುವ ಅರ್ಜಿಗಳನ್ನು ಯಾವ ಕಾಲಮಿತಿಯಲ್ಲಿ ವಿಲೇ ಮಾಡಲು ಸರ್ಕಾರ ಕ್ರಮ ಜರುಗಿಸಲಾಗುವುದು;

(ಇ) ಸಮಿತಿ ಅಸ್ತಿತ್ವದಲ್ಲಿದ್ದು ಸಭೆಗಳನ್ನೇ ಕರೆಯದ ಸಮಿತಿಗಳು ಇದ್ದಾವೆಯೇ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಈ) ಸಭೆಗಳನ್ನು ಕರೆಯದೆ ಇರುವ ಅಧ್ಯಕ್ಷರು ಮತ್ತು ಸದಸ್ಯರುಗಳ ಮೇಲೆ ಸರ್ಕಾರ ತೆಗೆದು ಕೊಂಡಿರುವ ಕ್ರಮಗಳೇನು; (ಪೂರ್ಣ ವಿವರ ನೀಡುವುದು)

(ಉ) ಯಾವುದಾದರು ಸಮಿತಿ ಮೇಲೆ ಲೋಕಾಯುಕ್ತರ ತನಿಖೆ ನಡೆಯುತ್ತಿದೆಯೆ ನಡೆಯುತ್ತಿದ್ದರೆ ಯಾವ ಕಾರಣಕ್ಕಾಗಿ ನಡೆಯುತ್ತಿದೆ ತನಿಖೆ ಯಾವ ಹಂತದಲ್ಲಿದೆ; ತಪ್ಪಿತಸ್ತರ ಮೇಲೆ ತೆಗೆದುಕೊಳ್ಳಲಾಗಿರುವ ಕ್ರಮವೇನು? (ಪೂರ್ಣ ವಿವರ ನೀಡುವುದು)

## ಬೀದರ್ ಜಿಲ್ಲೆಯ ನೀರಾವರಿ ಯೋಜನೆ ಬಗ್ಗೆ

**ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೧೯೦ (೧೩೬೫) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೀದರ್ ಜಿಲ್ಲೆಯ ಜನತೆಗೆ ಅನುಕೂಲವಾಗುವಂತೆ ನೀರಾವರಿ ಇಲಾಖೆಯಿಂದ ಯಾವುದಾದರೂ ಯೋಜನೆಗಳನ್ನು ರೂಪಿಸಲಾಗಿದೆಯೇ;

(ಆ) ಬೀದರ್ ಜಿಲ್ಲೆಯಲ್ಲಿ ನೀರಾವರಿಗೆ ಒಳಪಟ್ಟ ಪ್ರದೇಶ ಎಷ್ಟು;

(ಇ) ಆ ಜಿಲ್ಲೆಯ ನೀರಾವರಿ ಯೋಜನೆಗಳಿಗೆ ಕಳೆದ ಎರಡು ವರ್ಷಗಳಿಂದ ಬಿಡುಗಡೆಯಾದ ಅನುದಾನ ಎಷ್ಟು; (ಕಾಮಗಾರಿವಾರು ಮತ್ತು ಅನುದಾನದ ವಿವರ ನೀಡುವುದು)

(ಈ) ಈ ಅನುದಾನ ಸಮಪರ್ಕವಾಗಿ ಬಳಕೆಯಾಗಿದೆಯೇ?

## ಬೀದರ್ ಜಿಲ್ಲೆಯಲ್ಲಿ ಬೆಳೆ ಹಾನಿಯಾಗಿರುವ ಬಗ್ಗೆ

**ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೧೯೧ (೧೨೮೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಗಡಿ ಭಾಗದ ಬೀದರ್ ಜಿಲ್ಲೆಯಲ್ಲಿ ಮಳೆ ಬಾರದೇ ರೈತರು ಕಂಗಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಕಂಗಲಾದ ಹಾಗೂ ಬೆಳೆಹಾನಿಯಾದ ರೈತರಿಗೆ ಈಗಾಗಲೇ ಕೇಂದ್ರ ಪರಿಹಾರ ತಂಡ ಸಮೀಕ್ಷೆ ನಡೆಸಿದ್ದರನ್ವಯ ಪರಿಹಾರ ನೀಡಲಾಗಿದೆಯೇ; ನೀಡಿದ್ದರೆ, ಪರಿಹಾರ ಮೊತ್ತ ಎಷ್ಟು; ಇಲ್ಲದಿದ್ದಲ್ಲಿ, ಯಾವಾಗ ನೀಡಲಾಗುವುದು;

(ಇ) ಹಾನಿಯಾದ ರೈತರ ಬೆಳೆಗಳಿಗೆ ಪರಿಹಾರ ನೀಡದಿರಲು ಕಾರಣಗಳೇನು?

## ಬೀದರ್ ಜಿಲ್ಲೆಯ ಅರಣ್ಯ ಪ್ರದೇಶದ ಬಗ್ಗೆ

**ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೧೯೨ (೧೩೬೬) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ್ ಜಿಲ್ಲೆಯಲ್ಲಿ ಇರುವ ಅರಣ್ಯ ಪ್ರದೇಶದ ವಿಸ್ತೀರ್ಣ ಎಷ್ಟು; ಆ ಪೈಕಿ ಒತ್ತುವರಿಯಾದ ಅರಣ್ಯ ಪ್ರದೇಶದ ವಿಸ್ತೀರ್ಣ ಎಷ್ಟು;

(ಆ) ಈ ಅರಣ್ಯ ಪ್ರದೇಶದ ಒತ್ತುವರಿಯನ್ನು ತಡೆಗಟ್ಟಲು ಹಾಗೂ ತೆರವುಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

(ಇ) ಈ ಜಿಲ್ಲೆಯಲ್ಲಿ ಅರಣ್ಯ ಇಲಾಖೆಯು ಅರಣ್ಯವನ್ನು ಅಭಿವೃದ್ಧಿಪಡಿಸಲು ಏನಾದರೂ ಕ್ರಮ ಕೈಗೊಂಡಿದೆಯೇ? (ವಿವರ ನೀಡುವುದು)

## ಹೈದ್ರಾಬಾದ್–ಕರ್ನಾಟಕದ ಜಿಲ್ಲೆಯಲ್ಲಿ ಕ್ರೀಡಾಂಗಣದ ಬಗ್ಗೆ

**ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೧೯೩ (೧೩೬೪) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಮತ್ತು ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹೈದ್ರಾಬಾದ್–ಕರ್ನಾಟಕ ಭಾಗದ ೬ ಜಿಲ್ಲೆಗಳಲ್ಲಿ ಮಹಿಳಾ ಕ್ರೀಡಾ ವಿದ್ಯಾರ್ಥಿಗಳನ್ನು ಗುರುತಿಸಲಾಗಿದೆಯೇ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಯುವ ಸಬಲೀಕರಣ ಮತ್ತು ಕ್ರೀಡಾ ಮಹಿಳಾ ಹಾಗೂ ಮಕ್ಕಳ ಕ್ರೀಡಾ ಪಟುಗಳಿಗೆ ಕ್ರೀಡಾಂಗಣಗಳಲ್ಲಿ ಪ್ರತ್ಯೇಕವಾಗಿ ವಸತಿನಿಲಯಗಳನ್ನು ನಡೆಸಲಾಗುತ್ತದೆಯೇ; ಅದರಲ್ಲಿ ಬೀದರ್ ಜಿಲ್ಲೆಯಲ್ಲಿ ಎಷ್ಟು; ಮಹಿಳಾ ಕ್ರೀಡಾ ಪಟುಗಳು ಈ ಸೌಲಭ್ಯವನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ; (ವಿವರ ನೀಡುವುದು)

(ಇ) ಕ್ರೀಡಾ ಸಂಕೀರ್ಣಗಳ ನಿರ್ವಹಣೆ ಭಾಗದಲ್ಲಿ ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲದಿರಲು ಕಾರಣವೇನು?

## ಎಸ್.ಸಿ.ಪಿ/ಟಿ.ಎಸ್.ಪಿ ಅನುದಾನ ಬಳಕೆ ಕುರಿತು

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು):–**

೧೧೯೪ (೧೩೮೦) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಜವಳಿ ಇಲಾಖೆಗೆ ೨೦೧೪–೧೫ ಮತ್ತು ೨೦೧೫–೧೬ನೇ ಸಾಲುಗಳಲ್ಲಿ ಎಸ್‌ಸಿಪಿ/ಟಿಎಸ್‌ಪಿ ಅಡಿಯಲ್ಲಿ ಮೀಸಲಿರುವ ಹಣ ಎಷ್ಟು; ಬಿಡುಗಡೆ ಮಾಡಲಾದ ಹಣ ಎಷ್ಟು, ಖರ್ಚಾದ ಹಣ ಎಷ್ಟು;

(ಆ) ಯಾವ ಯಾವ ಬಾಬ್ತಿಗೆ ಎಷ್ಟೆಷ್ಟು ಖರ್ಚು ಮಾಡಲಾಗಿದೆ;

(ಇ) ಜವಳಿ ಇಲಾಖೆಯಲ್ಲಿ ಎಸ್‌ಸಿ/ಎಸ್‌ಟಿ ಗಳಿಗೆ ಯಾವ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಲಾಗಿದೆ;

(ಈ) ಕಳೆದ ೨ ವರ್ಷಗಳಲ್ಲಿ ಈ ಕಾರ್ಯಕ್ರಮಗಳ ಅಡಿಯಲ್ಲಿ ಎಷ್ಟು ಫಲಾನುಭವಿಗಳಿಗೆ ಎಷ್ಟು ಹಣ ಖರ್ಚು ಮಾಡಲಾಗಿದೆ?

## ಸಂಘ ಸಂಸ್ಥೆಗಳಿಗೆ ಮಂಜೂರಾಗಿರುವ ಜಮೀನಿನ ಕುರಿತು

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು):–**

೧೧೯೫ (೧೩೮೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ೩ ವರ್ಷಗಳಿಂದ ಕಂದಾಯ ಇಲಾಖೆವತಿಯಿಂದ ವಿವಿಧ ಸಂಘ ಸಂಸ್ಥೆಗಳಿಗೆ ಮಂಜೂರು ಮಾಡಿರುವ ಭೂಮಿ ಎಷ್ಟು;

(ಆ) ಯಾವ ಯಾವ ಸಂಸ್ಥೆಗಳಿಗೆ ಎಷ್ಟು ವಿಸ್ತೀರ್ಣಯುಳ್ಳ ಭೂಮಿ ಮಂಜೂರು ಮಾಡಲಾಗಿದೆ ? (ಸಂಪೂರ್ಣ ವಿವರ ಒದಗಿಸುವುದು)

## ಎಸ್.ಸಿ.ಪಿ/ಟಿ.ಎಸ್.ಪಿ ಅನುದಾನ ಬಳಕೆ ಕುರಿತು

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು):-**

೧೧೯೬ (೧೩೮೪) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಾರ್ಮಿಕ ಇಲಾಖೆಯಿಂದ ೨೦೧೪-೧೫, ಮತ್ತು ೨೦೧೫-೧೬ನೇ ಸಾಲಿನಲ್ಲಿ ಎಸ್.ಸಿ.ಪಿ/ಟಿ.ಎಸ್.ಪಿ ಅಡಿಯುಲ್ಲಿ ನಿಗಧಿಪಡಿಸಿರುವ ಹಣ ಎಷ್ಟು; ಬಿಡುಗಡೆಯಾದ ಹಣ ಎಷ್ಟು; ಖರ್ಚು ಮಾಡಲಾದ ಹಣ ಎಷ್ಟು;

(ಆ) ಯಾವ ಯಾವ ಬಾಬ್ತಿಗೆ ಎಷ್ಟೆಷ್ಟು ಹಣ ಖರ್ಚು ಮಾಡಲಾಗಿದೆ? (ಸಂಪೂರ್ಣ ಮಾಹಿತಿ ನೀಡುವುದು)

## ಎಸ್.ಸಿ.ಪಿ/ಟಿ.ಎಸ್.ಪಿ ಅಡಿಯಲ್ಲಿ ಕೈಗೊಂಡಿರುವ ಕಾರ್ಯಕ್ರಮಗಳ ಮಾಹಿತಿ ಕುರಿತು

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು):-**

೧೧೯೭ (೧೩೮೨) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ೨೦೧೪-೧೫, ಮತ್ತು ೨೦೧೫-೧೬ ಸಾಲಿನಿಂದ ಎಸ್.ಸಿ.ಪಿ/ಟಿ.ಎಸ್.ಪಿ ಅಡಿಯಲ್ಲಿ ಕೈಗೊಂಡ ಕಾರ್ಯಕ್ರಮಗಳು ಯಾವುವು; ಫಲಾನುಭವಿಗಳ ಸಂಖ್ಯೆ ಎಷ್ಟು;

(ಆ) ಈ ಎರಡು ವರ್ಷಗಳಲ್ಲಿ ಆಗಿರುವ ಗುರಿ ಮತ್ತು ಸಾಧನೆ ಎಷ್ಟು;

(ಇ) ಎಸ್.ಸಿ.ಪಿ/ಟಿ.ಎಸ್.ಪಿ ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಬೋರ್‌ವೆಲ್ ಕೊರೆದು, ವಿದ್ಯುದ್ದೀಕರಣಗೊಳಿಸಿರುವ ಯೋಜನೆ ಜಾರಿಯಲ್ಲಿ ಇತ್ತೆ;

(ಈ) ಹಾಗಿದ್ದಲ್ಲಿ, ಎಷ್ಟು ಫಲಾನುಭವಿಗಳಿಗೆ ಕಳೆದ ಎರಡು ವರ್ಷಗಳಲ್ಲಿ ಈ ಯೋಜನೆ ಅಡಿಯಲ್ಲಿ ಸೌಲಭ್ಯ ನೀಡಲಾಗಿದೆ;

(ಉ) ಈ ಯೋಜನೆಗಾಗಿ ಕಳೆದ ೨ ವರ್ಷಗಳಲ್ಲಿ ಮೀಸಲಾದ ಹಣ ಎಷ್ಟು; ಬಿಡುಗಡೆಯಾದ ಹಣ ಎಷ್ಟು; ಖರ್ಚಾಗದೆ ಬಾಕಿ ಉಳಿದಿರುವ ಹಣ ಎಷ್ಟು;

(ಊ) ಸಮಾಜ ಕಲ್ಯಾಣ ಇಲಾಖೆಯಿಂದ ಕಳೆದ ೨ ವರ್ಷಗಳಲ್ಲಿ ಈ ಯೋಜನೆಗಾಗಿ ಬಿಡುಗಡೆಯಾದ ಹಣ ಎಷ್ಟು; ಖರ್ಚಾದ ಹಣ ಎಷ್ಟು;

(ಋ) ಕಳೆದ ೨ ವರ್ಷಗಳಲ್ಲಿ ಎಸ್.ಸಿ.ಪಿ/ಟಿ.ಎಸ್.ಪಿ. ಅಡಿಯಲ್ಲಿ ಕೊಳವೆ ಬಾವಿ ಕೊರೆದು ವಿದ್ಯುದ್ದೀಕರಣಗೊಳಿಸುವ ಸೌಲಭ್ಯ ಕಡಿತಗೊಂಡಿದೆಯೇ; ಹಾಗಿದ್ದಲ್ಲಿ ಯಾವ ಕಾರಣಕ್ಕಾಗಿ ಈ ಯೋಜನೆ ನಿಂತು ಹೋಗಿದೆ?

## ತ್ಯಾಜ್ಯ ನೀರಿನಿಂದ ಪರಿಸರದ ಮೇಲೆ ಬೀರುವ ಪರಿಣಾಮ ಕುರಿತು

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು):-**

೧೧೯೮ (೧೩೮೩) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಉತ್ತರ ಕನ್ನಡ ಜಿಲ್ಲೆ ಕಾರಾವಾರ ತಾಲ್ಲೂಕು ಬಿಣಗಾದಲ್ಲಿರುವ ಆದಿತ್ಯ ಬಿರ್ಲಾ ಕೆಮಿಕಲ್ ಪ್ರೈ.ಲಿ. ಕಂಪನಿಯು ಯಾವ ಯಾವ ಕೆಮಿಕಲ್‌ಗಳನ್ನು, ವರ್ಷದಲ್ಲಿ ಎಷ್ಟು ಪ್ರಮಾಣದಲ್ಲಿ ಉತ್ಪಾದನೆ ಮಾಡುತ್ತದೆ;

(ಆ) ಈ ಕೆಮಿಕಲ್ ಕಂಪನಿಯಿಂದ ತ್ಯಾಜ್ಯ ನೀರು ಕಾರವಾರದ ಅರಬ್ಬಿ ಸಮುದ್ರ ಸೇರಿ ಅಲ್ಲಿ ವಾಸಿಸುವ ಮೀನು ಹಾಗೂ ಜಲಚರ ಪ್ರಾಣಿಗಳ ಮೇಲೆ ದುಷ್ಪರಿಣಾಮ ಬೀರಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಈ ಕಂಪನಿಯಿಂದ ಹೊರಹೊಮ್ಮುವ ಅನುಪಯುಕ್ತ ನೀರಿನಿಂದ ಸ್ಥಳೀಯ ಜನ ಹಾಗೂ ಜಾನುವಾರುಗಳ ಮೇಲೆ ಆಗಿರುವ ದುಷ್ಪರಿಣಾಮಗಳ ಕುರಿತು ಇಲಾಖೆ ಕೈಗೊಂಡಿರುವ ಕ್ರಮವೇನು?

## ಜಲಸಾರಿಗೆ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸುವ ಬಗ್ಗೆ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು):–**

೧೯೯೯ (೧೩೭೬) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ೨ ವರ್ಷಗಳಿಂದ ರಾಜ್ಯದಲ್ಲಿ ಜಲಸಾರಿಗೆ ಅಭಿವೃದ್ಧಿಗಾಗಿ ಸರ್ಕಾರವು ಕೈಗೊಂಡ ಯೋಜನೆಗಳಾವುವು;

(ಆ) ಈ ಯೋಜನೆಗಳಿಗೆ ಕೇಂದ್ರ ಸರ್ಕಾರದಿಂದ ಬಿಡುಗಡೆ ಮಾಡಿರುವ ಅನುದಾನವೆಷ್ಟು; ರಾಜ್ಯ ಸರ್ಕಾರ ಬಿಡುಗಡೆ ಮಾಡಿರುವ ಅನುದಾನವೆಷ್ಟು;

(ಇ) ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಿರುವ ಮೊತ್ತದಲ್ಲಿ ವೆಚ್ಚ ಮಾಡಲಾದ ಹಣ ಎಷ್ಟು; ಯಾವ ಯಾವ ಅಭಿವೃದ್ಧಿ ಕಾರ್ಯಗಳಿಗೆ ಈ ಹಣವನ್ನು ಬಳಸಲಾಗಿದೆ? (ಪೂರ್ಣ ಮಾಹಿತಿ ನೀಡುವುದು)

## ಕೆರೆಗಳ ಒತ್ತುವರಿ ಬಗ್ಗೆ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು):–**

೧೨೦೦ (೧೩೭೭) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಂಡ್ಯ ಜಿಲ್ಲೆಯಲ್ಲಿ ಸಣ್ಣ ನೀರಾವರಿ ವ್ಯಾಪ್ತಿಗೆ ಬರುವ ಕೆರೆಗಳ ಸಂಖ್ಯೆ ಎಷ್ಟು; ಸದರಿ ಕೆರೆಗಳ ವಿಸ್ತೀರ್ಣವೆಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಇವುಗಳಲ್ಲಿ ಎಷ್ಟು ಕೆರೆಗಳ ಹೂಳೆತ್ತಲು ಕಾರ್ಯ ಯೋಜನೆ ರೂಪಿಸಲಾಗಿದೆ; ಸದರಿ ಯೋಜನೆಗೆ ನಿಗಧಿಪಡಿಸಿರುವ ಮೊತ್ತವೆಷ್ಟು;

(ಇ) ಸದರಿ ಕೆರೆಗಳ ಪೈಕಿ ಎಷ್ಟು ಕೆರೆಗಳು ಒತ್ತುವರಿಯಾಗಿವೆ; ಒತ್ತುವರಿ ತೆರವುಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ? (ವಿವರ ನೀಡುವುದು)

## ಸರ್ಕಾರಿ ಭೂಮಿಯನ್ನು ಕಬಳಿಕೆ ಮಾಡುತ್ತಿರುವ ಬಗ್ಗೆ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು):–**

೧೨೦೧ (೧೩೭೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೋಲಾರ ಜಿಲ್ಲೆ, ಮುಳಬಾಗಿಲು ತಾಲ್ಲೂಕು, ತಹಶೀಲ್ದಾರ್ ಕಛೇರಿಯಲ್ಲಿ ಒಟ್ಟು ಮಂಜೂರಾಗಿರುವ ಹುದ್ದೆಗಳ ಸಂಖ್ಯೆ ಎಷ್ಟು; ಇದರಲ್ಲಿ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಯ ಸಂಖ್ಯೆ ಎಷ್ಟು; ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ಎಷ್ಟು ವರ್ಷಗಳಿಂದ ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ; (ಹುದ್ದೆವಾರು ಮಾಹಿತಿ ನೀಡುವುದು)

(ಆ) ಮುಳಬಾಗಿಲು ತಾಲ್ಲೂಕಿನ ಗೋಮಾಳ ಜಮೀನಿನ ಒಟ್ಟು ವಿಸ್ತೀರ್ಣವೆಷ್ಟು; ಇದರಲ್ಲಿ ಸರ್ಕಾರದ ಅಧೀನದಲ್ಲಿರುವ ಜಮೀನೆಷ್ಟು; ಅತಿಕ್ರಮಣ ಮಾಡಿರುವ ಜಮೀನಿನ ವಿಸ್ತೀರ್ಣವೆಷ್ಟು; (ಪೂರ್ಣ ವಿವರ ನೀಡುವುದು)

(ಇ) ಮುಳಬಾಗಿಲು ಪಟ್ಟಣದ ಸುತ್ತು–ಮುತ್ತ ಇರುವ ನೂರಾರು ಎಕರೆ ಗೋಮಾಳ ಜಮೀನು ಒತ್ತುವರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಹಾಗಿದ್ದಲ್ಲಿ, ಕಳೆದ ೫ ವರ್ಷಗಳಲ್ಲಿ ಒತ್ತುವರಿಯಾಗಿರುವ ಜಮೀನನ್ನು ವಶಕ್ಕೆ ಪಡೆಯಲು ಇಲಾಖೆ ಮುಂದಾಗಿದೆಯೇ; ವಶಕ್ಕೆ ಪಡೆದಿದ್ದರೆ ಎಷ್ಟು ಎಕರೆ ಜಮೀನನ್ನು ಸರ್ಕಾರದ ಅಧೀನಕ್ಕೆ ಪಡೆಯಲಾಗಿದೆ;(ಆ ಜಮೀನಿನ ಸರ್ವೆ ನಂ. ಇತರೆ ವಿವರ ನೀಡುವುದು)

(ಉ) ಕಳೆದ ೫ ವರ್ಷಗಳಲ್ಲಿ ಮುಳಬಾಗಿಲು ತಾಲ್ಲೂಕಿನಲ್ಲಿ ಎಷ್ಟು ಎಕರೆ ಸಾಗುವಳಿ ಜಮೀನನ್ನು ನೈಜ ಫಲಾನುಭವಿಗಳಿಗೆ ಮಂಜೂರು ಮಾಡಲಾಗಿದೆ? (ಫಲಾನುಭವಿಗಳ ಹೆಸರು ಮತ್ತು ಮಂಜೂರು ಮಾಡಿರುವ ಸಾಗುವಳಿ ಜಮೀನಿನ ಪೂರ್ತಿ ವಿವರ ನೀಡುವುದು)

## ಕಾರ್ಮಿಕ ಇಲಾಖೆಯಲ್ಲಿನ ಮಹಿಳಾ ಕಾರ್ಮಿಕರ ಪರ ಯೋಜನೆಗಳ ಬಗ್ಗೆ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು):–**

೧೨೦೨ (೧೩೭೮) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಕಾರ್ಮಿಕ ಇಲಾಖೆಯು ಮೂಲಕ ಅನುಷ್ಠಾನಗೊಳ್ಳುತ್ತಿರುವ ಯೋಜನೆಗಳಾವುವು;

(ಆ) ಇವುಗಳಲ್ಲಿ ಮಹಿಳಾ ಕಾರ್ಮಿಕರ ಶ್ರೇಯೋಭಿವೃದ್ಧಿಗೆ ಪ್ರಸಕ್ತ ಸಾಲಿನಲ್ಲಿ ಹಮ್ಮಿಕೊಳ್ಳಲಾದ ಯೋಜನೆಗಳಾವುವು; ಈ ಯೋಜನೆಗಳಿಂದ ಎಷ್ಟು ಮಹಿಳಾ ಕಾರ್ಮಿಕರು ಪ್ರಯೋಜನೆ ಪಡೆದಿದ್ದಾರೆ? (ವಿವರ ನೀಡುವುದು)

## ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲಾ ವ್ಯಾಪ್ತಿಯಲ್ಲಿ ಕೆರೆಗಳ ಜಾಗ ಒತ್ತುವರಿಯಾಗಿರುವ ಬಗ್ಗೆ

**ಶ್ರೀ ಲಹರ್ ಸಿಂಗ್ ಸಿರೋಯಾ (ನಾಮನಿರ್ದೇಶನ ಹೊಂದಿದವರು) :–**

೧೨೦೩ (೧೩೩೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ನಗರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲಾ ವ್ಯಾಪ್ತಿಯಲ್ಲಿರುವ ಒಟ್ಟು ಕೆರೆಗಳ ಸಂಖ್ಯೆ ಎಷ್ಟು;

(ಆ) ಇವುಗಳ ಪೈಕಿ ಒತ್ತುವರಿಯಾಗಿರುವ ಕೆರೆಗಳ ಸಂಖ್ಯೆ ಎಷ್ಟು;

(ಇ) ಒಟ್ಟು ಎಷ್ಟು ಎಕರೆ ಕೆರೆಗಳ ಜಾಗ ಒತ್ತುವರಿಯಾಗಿರುತ್ತದೆ; (ಒತ್ತುವರಿದಾರರ ಪೂರ್ಣ ವಿವರಗಳನ್ನು ನೀಡುವುದು)

(ಈ) ಒತ್ತುವರಿಯಾಗಿರುವ ಕೆರೆಗಳ ಜಾಗವನ್ನು ತೆರವುಗೊಳಿಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು?

## ರಾಜ್ಯದಲ್ಲಿರುವ ಅಣೆಕಟ್ಟುಗಳ ಮಾಹಿತಿ ಬಗ್ಗೆ

**ಶ್ರೀ ಲಹರ್ ಸಿಂಗ್ ಸಿರೋಯಾ (ನಾಮನಿರ್ದೇಶನ ಹೊಂದಿದವರು) :–**

೧೨೦೪ (೧೨೮೮) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಅಣೆಕಟ್ಟುಗಳ ಸಂಖ್ಯೆ ಎಷ್ಟು ಹಾಗೂ ಅವುಗಳ ಅಚ್ಚುಕಟ್ಟು ಪ್ರದೇಶದ ವಿಸ್ತೀರ್ಣವೆಷ್ಟು; (ಅಣೆಕಟ್ಟುವಾರು ವಿವರ ನೀಡುವುದು)

(ಆ) ರಾಜ್ಯದ ಎಷ್ಟು ಹೆಕ್ಟೇರ್ ಅಚ್ಚುಕಟ್ಟು ಪ್ರದೇಶದಲ್ಲಿ ರೈತರಿಗೆ ಕಬ್ಬು ಮತ್ತು ಭತ್ತ ಬೆಳೆಯಲು ಅನುಮತಿ ನೀಡಿದೆ; (ಜಿಲ್ಲಾವಾರು ವಿವರ ನೀಡುವುದು)

(ಇ) ರಾಜ್ಯದಲ್ಲಿ ಅನುಮತಿ ನೀಡಿದ್ದಕ್ಕಿಂತ ಹೆಚ್ಚು ಪ್ರದೇಶದಲ್ಲಿ ಕಬ್ಬು ಮತ್ತು ಭತ್ತ ಬೆಳೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಹೆಚ್ಚು ಕಬ್ಬು ಮತ್ತು ಭತ್ತ ಬೆಳೆಯುತ್ತಿರುವ ಪ್ರದೇಶ ಯಾವುವು ; (ವಿವರ ನೀಡುವುದು)

(ಈ) ಈ ರೀತಿ ಅನುಮತಿ ನೀಡಿದ್ದಕ್ಕಿಂತ ಹೆಚ್ಚು ಪ್ರದೇಶದಲ್ಲಿ ಕಬ್ಬು ಮತ್ತು ಭತ್ತ ಬೆಳೆಯುತ್ತಿರುವುದರಿಂದ ಅಣೆಕಟ್ಟುಗಳಲ್ಲಿ ಪೋಲಾಗುತ್ತಿರುವ ನೀರಿನ ಪ್ರಮಾಣವೆಷ್ಟು ; (ಅಣೆಕಟ್ಟುವಾರು/ ಅಚ್ಚುಕಟ್ಟುವಾರು ವಿವರ ನೀಡುವುದು)

(ಉ) ಈ ರೀತಿ ನೀರು ಪೋಲಾಗುವುದನ್ನು ತಡೆಯಲು ಮತ್ತು ರೈತರು ಅತೀ ಹೆಚ್ಚು ಪ್ರದೇಶಗಳಲ್ಲಿ ನೀರು ಅಧಿಕವಾಗಿ ಬೇಡುವ ಬೆಳೆಗಳನ್ನು ಬೆಳೆಯುವುದನ್ನು ತಡೆಯಲು ಯಾವ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗಿದೆ?

# FUNCTIONING OF LARGE SCALE AADIVASI MULTIPURPOSE SOCIETIES (LAMP)

ಶ್ರೀ ಲಹರ್ ಸಿಂಗ್ ಸಿರೋಯಾ (ನಾಮನಿರ್ದೇಶನ ಹೊಂದಿದವರು) :-

೧೨೦೫ (೧೩೩೧) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) How many (Large-scale Aadivasi Multipurpose Societies) are functioning in Karnataka ; (Give district wise details)

(ಆ) Are LAMP societies allowed to collect/extract forest produce from forests of Karnataka; if so give details of how many produces are they permitted to collect or extract from forests;

(ಇ) Is it true that the forest department has recently allowed LAMP societies to collect Cinnamon leaves from forests; If so give details;

(ಈ) Why was restrictions imposed on collection of Cinnamon leaves from forests since 2012-13; (Give details)

(ಉ) Has Forest department enfdorced any resrictions on LAMP socieities for collection of produces from forests; If so give details of produces and restrictions;

(ಊ) Has Village Forest Committees also been given permission to extract forest produces in those forests where LAMP Societies are also extracting produces; Has't this decision deprived LAMP societies of major share of profits?

## ಅರಣ್ಯ ಕಾಮಗಾರಿಯಲ್ಲಿ ಅವ್ಯವಹಾರ ದೂರಿನ ಬಗ್ಗೆ

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೨೦೬ (೧೨೮೭) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೆನರಾ ವೃತ್ತದ ಹಳಿಯಾಳ ವಿಭಾಗದ ಸಾಂಬ್ರಾಣಿ ಹಾಗೂ ವಿರ್ನೋಲಿ ಬರ್ಚಿ ಹಾಗೂ ತಿನ್ವೇಘಾಟ ವಲಯದಲ್ಲಿ ಕಳೆದ ೩ ವರ್ಷಗಳಿಂದ ಯಾವ ಯಾವ ಶೀರ್ಷಿಕೆಯಲ್ಲಿ, ಯಾವ ಯಾವ ಕಾಮಗಾರಿಗೆ ಎಷ್ಟೆಷ್ಟು ಅನುದಾನವನ್ನು ಒದಗಿಸಲಾಗಿದೆ; (ಅಂದಾಜು ಪತ್ರಿಕೆಯಂತೆ ಶೀರ್ಷಿಕೆವಾರು, ತಿಂಗಳವಾರು, ವರ್ಷವಾರು ವಿವರ ನೀಡುವುದು)

(ಆ) ಸದರಿ ಅನುದಾನದಲ್ಲಿ ಯಾವ ಯಾವ ನೆಡುತೋಪಿನಲ್ಲಿ ಎಷ್ಟು ಹೇಕ್ಟರ್ ಅರಣ್ಯ ಪ್ರದೇಶದಲ್ಲಿ ಯಾವ ಯಾವ ಕಾಮಗಾರಿಗಳಿಗೆ ಬಳಕೆ ಮಾಡಲಾಗಿದೆ; (ಶೀರ್ಷಿಕೆವಾರು, ತಿಂಗಳುವಾರು ವಿವರ ನೀಡುವುದು)

(ಇ) ಸದರಿ ಬಳಕೆ ಮಾಡಿರುವ ಅನುದಾನದಲ್ಲಿ ಸರಿಯಾದ ರೀತಿಯಲ್ಲಿ ನೆಡುತೋಪಿನ ನಿರ್ವಹಣೆ ಮಾಡಿರುವುದಿಲ್ಲವೆಂದು ದೂರು

ಬಂದಿರುವುದು ನಿಜವೇ; (ಪ್ರತಿಯೊಂದು ನೆಡುತೋಪಿನ ಕಾಮಗಾರಿಗಳ ವಿವರ ಹಾಗೂ ಕಟ್ಟಡಗಳ ರಿಪೇರಿಗೆ ಖರ್ಚಾದ ಮೊತ್ತವೇನು? (ತಿಂಗಳುವಾರು, ವರ್ಷವಾರು ವಿವರ ನೀಡುವುದು)

## ಅರಣ್ಯ ಭೂಮಿ ಬಗ್ಗೆ

**ಶ್ರೀ ನಾರಾಯಣ ಸಾ. ಬಾಂಡಗೆ (ವಿಧಾನಸಭೆಯಿಂದ ಚುನಾಯಿತರಾದವರು):–**

೧೨೦೭ (೧೨೮೯) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗಳ ವ್ಯಾಪ್ತಿಯಲ್ಲಿರುವ ಒಟ್ಟು ಅರಣ್ಯ ಭೂಮಿ ಎಷ್ಟು;

(ಆ) ಬಾಗಲಕೋಟೆ ಜಿಲ್ಲೆಯಲ್ಲಿ ಎಷ್ಟು ನರ್ಸರಿಗಳು ಇದೆ; ಈ ನರ್ಸರಿಗಳಿಗೆ ಅರಣ್ಯ ಇಲಾಖೆಯಿಂದ ಮಾಡಿರುವ ಖರ್ಚು ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು)

## ಬಾಲ ಕಾರ್ಮಿಕರ ಬಗ್ಗೆ

**ಶ್ರೀ ಕೆ. ಅಬ್ದುಲ್ ಜಬ್ಬಾರ್ (ನಾಮನಿರ್ದೇಶನ ಹೊಂದಿದವರು):–**

೧೨೦೮ (೧೩೨೦) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ದಾವಣಗೆರೆ ಜಿಲ್ಲೆಯ ವ್ಯಾಪ್ತಿಯಲ್ಲಿ ಅತಿ ಹೆಚ್ಚಾಗಿ ಬಾಲ ಕಾರ್ಮಿಕರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಇಂತಹ ಬಾಲ ಕಾರ್ಮಿಕರ ಪದ್ಧತಿಯನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

(ಇ) ಬಾಲ ಕಾರ್ಮಿಕ ಅಪರಾಧದ ಅಡಿಯಲ್ಲಿ ಎಷ್ಟು ಕೇಸುಗಳು ದಾಖಲಾಗಿವೆ? (ವಿವರ ನೀಡುವುದು)

## ಅರಣ್ಯ ಭೂ ವ್ಯಾಪ್ತಿಯ ಬಗ್ಗೆ

**ಶ್ರೀ ಕೆ. ಅಬ್ದುಲ್ ಜಬ್ಬಾರ್ (ನಾಮನಿರ್ದೇಶನ ಹೊಂದಿದವರು):–**

೧೨೦೯ (೧೩೧೯) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಯ ವ್ಯಾಪ್ತಿಯಲ್ಲಿರುವ ಒಟ್ಟು ಅರಣ್ಯ ಭೂಮಿ ಎಷ್ಟು;

(ಆ) ಈ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಿಂದ ಅರಣ್ಯ ಅಭಿವೃದ್ಧಿಗೆ ಖರ್ಚು ಮಾಡಿರುವ ಹಣ ಎಷ್ಟು;

(ಇ) ಕಳೆದ ಎರಡು ವರ್ಷಗಳಲ್ಲಿ ನರ್ಸರಿಯಲ್ಲಿ ಯಾವ ಯಾವ ಜಾತಿಯ ಸಸಿಗಳನ್ನು ಮಾರಾಟ ಮಾಡಲಾಗಿದೆ; ಮಾರಾಟದಿಂದ ಬಂದಿರುವ ಹಣ ಎಷ್ಟು? (ವಿವರ ನೀಡುವುದು)

## ಕಲಬುರಗಿ ಜಿಲ್ಲೆಯಲ್ಲಿ ನೀರಾವರಿ ಯೋಜನೆಗಳು

**ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೨೧೦ (೧೩೪೭) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಲಬುರಗಿ ಜಿಲ್ಲೆಯಲ್ಲಿ ಜಾರಿಯಲ್ಲಿರುವ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳು ಯಾವುವು; ಈ ಯೋಜನೆಗಳ ಪ್ರಾರಂಭಿಕ ಅಂದಾಜು ವೆಚ್ಚವೆಷ್ಟು ಮತ್ತು ಇಲ್ಲಿಯವರೆವಿಗೆ ಮಾಡಲಾಗಿರುವ ಪರಿಷ್ಕೃತ ಅಂದಾಜು ವೆಚ್ಚವೆಷ್ಟು; ಕಳೆದ ಮೂರು ವರ್ಷಗಳ ಅವಧಿಯಲ್ಲಿ ಈ ಪ್ರತಿ ಯೋಜನೆಗಳ ಅನುಷ್ಠಾನಕ್ಕಾಗಿ ಪ್ರತಿ ವರ್ಷ ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ;

(ಆ) ಈ ಅವಧಿಯಲ್ಲಿ ಎಷ್ಟು ಯೋಜನೆಗಳು ಪೂರ್ಣಗೊಂಡಿವೆ; ಅಪೂರ್ಣಗೊಂಡಿರುವ ಯೋಜನೆಗಳ ಸಂಖ್ಯೆ ಎಷ್ಟು; ಯಾವ ಯಾವ ನೀರಾವರಿ ಯೋಜನೆಗಳು ಪೂರ್ಣಗೊಳ್ಳುತ್ತವೆ; ಈ ಯೋಜನೆಗಳು ಪೂರ್ಣಗೊಂಡ ನಂತರ ಜಿಲ್ಲೆಯ ಎಷ್ಟು ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ದೊರಕುತ್ತದೆ ಮತ್ತು ಯಾವ ಯಾವ ಹಳ್ಳಿಗಳಿಗೆ ಕುಡಿಯುವ ನೀರಿನ ಸೌಲಭ್ಯಗಳು ದೊರಕುತ್ತವೆ?

## ಕಲಬುರಗಿ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಕೆರೆಗಳು

**ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೨೧೧ (೧೩೪೯) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಲಬುರಗಿ ಜಿಲ್ಲೆಯ ವಿವಿಧ ವಿಧಾನ ಸಭಾಕ್ಷೇತ್ರಗಳಲ್ಲಿ ಇರುವ ಸಣ್ಣ ನೀರಾವರಿ ಕೆರೆಗಳ ಸಂಖ್ಯೆ ಎಷ್ಟು; (ವಿಧಾನಸಭಾ ಕ್ಷೇತ್ರವಾರು ವಿವರಗಳನ್ನು ಒದಗಿಸುವುದು)

(ಆ) ಕಳೆದ ಮೂರು ವರ್ಷಗಳ ಅವಧಿಯಲ್ಲಿ ಪ್ರತಿ ವರ್ಷ ಈ ಕೆರೆಗಳ ಜೀರ್ಣೋದ್ಧಾರ ಮತ್ತು ನಿರ್ವಹಣೆಗಾಗಿ ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ; ಈ ಹಣದಿಂದ ಜಿಲ್ಲೆಯ ಯಾವ ಯಾವ ಕೆರೆಗಳಲ್ಲಿ ಯಾವ ಯಾವ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ; ಪ್ರತಿ ಕೆರೆಗೆ ಇದಕ್ಕಾಗಿ ತಗುಲಿದ ವೆಚ್ಚವೆಷ್ಟು ; (ಕೆರೆವಾರು ಅಂಕಿ ಅಂಶಗಳನ್ನು ಒದಗಿಸುವುದು)

(ಇ) ಜಿಲ್ಲೆಯಲ್ಲಿ ಅಂತರ್‌ಜಲದ ಪ್ರಮಾಣ ಕಡಿಮೆಯಾಗಿರುವುದರಿಂದ ಬಹುತೇಕ ಕೆರೆಗಳಲ್ಲಿ ಅಗತ್ಯ ಪ್ರಮಾಣದಲ್ಲಿ ನೀರಿಲ್ಲದೇ

ಬತ್ತಿಹೋಗುವ ಹಂತಕ್ಕೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಎಷ್ಟು ಕೆರೆಗಳಲ್ಲಿ ಅಗತ್ಯ ಪ್ರಮಾಣಕ್ಕಿಂತ ಕಡಿಮೆ ಪ್ರಮಾಣದಲ್ಲಿ ನೀರು ಇದೆ; ವಿವರಗಳನ್ನು ಒದಗಿಸುವುದು)

(ಈ) ಈಗ ಬೇಸಿಗೆ ಕಾಲ ಪ್ರಾರಂಭವಾಗಿರುವುದರಿಂದ ಬತ್ತಿರುವ ಜಿಲ್ಲೆಯ ಕೆರೆಗಳಿಗೆ ನೀರುತುಂಬಿ/ಮರುಪೂರಣ ಮಾಡುವ ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ; ಇದಕ್ಕಾಗಿ ಪ್ರಸಕ್ತ ಸಾಲಿನಲ್ಲಿ ಎಷ್ಟು ಹಣವನ್ನು ಜಿಲ್ಲೆಯ ಪ್ರತಿ ವಿಧಾನ ಸಭಾಕ್ಷೇತ್ರಕ್ಕೆ ವೆಚ್ಚ ಮಾಡಲಾಗುವುದು?

## ಸರ್ಕಾರಿ I.T.I ಗಳ ನಿರ್ಮಾಣ

**ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೨೧೨ (೧೩೪೮) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ಎರಡು ವರ್ಷಗಳ ಅವಧಿಯಲ್ಲಿ ರಾಜ್ಯದ ಯಾವ ಯಾವ ಸ್ಥಳಗಳಲ್ಲಿ ಹೊಸದಾಗಿ ಸರ್ಕಾರಿ ಐಟಿಐ ಗಳನ್ನು ಪ್ರಾರಂಭಿಸಲಾಗಿದೆ; ಇದೇ ಅವಧಿಯಲ್ಲಿ ಯಾವ ಯಾವ ಐಟಿಐ ಗಳನ್ನು ಮೇಲ್ದರ್ಜೆಗೆ ಏರಿಸಲಾಗಿದೆ; ಇದಕ್ಕಾಗಿ ರಾಜ್ಯ ಸರ್ಕಾರ ವೆಚ್ಚ ಮಾಡಿದ ಹಣವೆಷ್ಟು; ಈ ಯೋಜನೆಗೆ ಕೇಂದ್ರ ಸರ್ಕಾರ ಎಷ್ಟು ಹಣವನ್ನು ನೀಡಿದೆ; (ಪೂರ್ಣ ವಿವರಗಳನ್ನು ಒದಗಿಸುವುದು)

(ಆ) ಪ್ರಸಕ್ತ ಸಾಲಿನಲ್ಲಿ ನಬಾರ್ಡ್–ಆರ್.ಐ.ಡಿ.ಎಫ್ ಕಾರ್ಯಕ್ರಮದ ಅಡಿಯಲ್ಲಿ ಯಾವ ಯಾವ ಸ್ಥಳಗಳಲ್ಲಿ ಐಟಿಐ ಕಟ್ಟಡಗಳನ್ನು ನಿರ್ಮಿಸಲಾಗುತ್ತಿದೆ; ಈ ಪೈಕಿ ಹೈದರಾಬಾದ್–ಕರ್ನಾಟಕ ವ್ಯಾಪ್ತಿಯ ಜಿಲ್ಲೆಗಳಲ್ಲಿ ಬರುವ ಯಾವ ಯಾವ ಸರ್ಕಾರಿ ಐಟಿಐ

ಗಳಿಗೆ ಕಟ್ಟಡವನ್ನು ಮೇಲ್ಕಂಡ ಅನುದಾನದಲ್ಲಿ ನಿರ್ಮಿಸಲಾಗುತ್ತಿದೆ; ಇದಕ್ಕಾಗಿ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಎಷ್ಟು ಹಣವನ್ನು ಖರ್ಚು ಮಾಡಲಾಗುತ್ತಿದೆ;

(ಇ) ರಾಜ್ಯದಲ್ಲಿ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವನ್ನು ಇನ್ನೂ ಎಷ್ಟು ಸರ್ಕಾರಿ ತರಬೇತಿ ಕೇಂದ್ರಗಳ ಅಗತ್ಯವಿದೆ?

## ಸರ್ಕಾರಿ ಜಮೀನು ಒತ್ತುವರಿ ಮಾಡಿಕೊಂಡಿರುವ ಬಗ್ಗೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ):–**

೧೨೧೩ (೧೩೭೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆ ನೆಲಮಂಗಲ ತಾಲ್ಲೂಕು, ಸೋಂಪುರ ಹೋಬಳಿ, ಹೊಸಹಳ್ಳಿ ಗ್ರಾಮದ ಸರ್ವೇ ನಂ. ೫೯ ರಲ್ಲಿ ಎಷ್ಟು ಸರ್ಕಾರಿ ಜಮೀನು ಹಾಗೂ ಕೆರೆ ಇದೆ;

(ಆ) ಸದರಿ ಸರ್ಕಾರಿ ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದಾರೆಯೇ; ಮಾಡಿಕೊಂಡಿದ್ದರೆ ವಿವರವಾದ ಮಾಹಿತಿ ನೀಡುವುದು;

(ಇ) ಒತ್ತುವರಿ ಮಾಡಿಕೊಂಡಿರುವ ಜಮೀನನ್ನು ಸರ್ಕಾರವು ಯಾವಾಗ ತೆರವುಗೊಳಿಸುವುದು, ಈ ಸಂಬಂಧ ಸರ್ಕಾರ ಕೈಗೊಂಡ ಕ್ರಮಗಳೇನು;

(ಈ) ಪಶು, ಪಕ್ಷಿ ಹಾಗೂ ಮುಂದಿನ ಪೀಳಿಗೆಗೆ ಭವಿಷ್ಯದ ಹಾಗೂ ಪರಿಸರ ಮತ್ತು ಪ್ರಕೃತಿ ಸಂರಕ್ಷಣೆಗಳ ಹಿತದೃಷ್ಟಿಯಿಂದ ನಶಿಸುತ್ತಿರುವ ಹಾಗೂ ಕಣ್ಮರೆಯಾಗುತ್ತಿರುವ ಕೆರೆ ಕುಂಟೆಗಳನ್ನು ಉಳಿಸಲು ಸರ್ಕಾರವು ಯಾವ ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ?

## ಕಾರ್ಮಿಕ ಇಲಾಖೆಯ ಯೋಜನೆಗಳಿಗೆ ಸಂಬಂಧಪಟ್ಟಂತೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ):–**

೧೨೧೪ (೧೩೭೨) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ರಾಜ್ಯದಲ್ಲಿ ಕಾರ್ಮಿಕ ಇಲಾಖೆಯ KVTSDC ವತಿಯಿಂದ MES ಯೋಜನೆಯಡಿ ಎಷ್ಟು VTP ಕೇಂದ್ರಗಳನ್ನು ಯಾವಾಗ ತೆರೆಯಲಾಗಿದೆ; ಅವುಗಳಿಗೆ ನೀಡಿರುವ ಸಹಾಯ ಧನ ಎಷ್ಟು; (ಜಿಲ್ಲಾವಾರು, ತಾಲ್ಲೂಕುವಾರು, ವಿವರ ನೀಡುವುದು)

(ಆ) ಅಪರ ನಿರ್ದೇಶಕರು, ಪ್ರಭಾರ ಆಯುಕ್ತರಾಗಿದ್ದ ಸಮಯದಲ್ಲಿ ಕೇವಲ ಎರಡು ತಿಂಗಳಲ್ಲಿ MES ಯೋಜನೆಯಡಿಯಲ್ಲಿ VTP ಕೇಂದ್ರಗಳ ನೈಜತೆಯನ್ನು ಪರಿಶೀಲಿಸದೆ ಸುಮಾರು ೬ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ ಅವ್ಯವಹಾರ ನಡೆದಿರುವ ಸಂಬಂಧ ಇಲಾಖಾ ವಿಚಾರಣೆ ನಡೆಸಬೇಕೆಂದು ಕಳೆದ ಅಧಿವೇಶನದಲ್ಲಿ ಚರ್ಚೆಯಾಗಿದ್ದ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ತನಿಖಾ ಹಂತದ ವರದಿಯ ಪ್ರತಿಯನ್ನು ಒದಗಿಸುವುದು;

(ಇ) Citizens Action Forum, ಬೆಂಗಳೂರು ಇವರು ಬೇನಾಮಿ VTP ಕೇಂದ್ರಗಳನ್ನು ಅಪರ ನಿರ್ದೇಶಕರ ಸಂಬಂಧಿಗಳ ಹೆಸರಿನಲ್ಲಿ ನಡೆಸುತ್ತಿದ್ದು ಇವರುಗಳಿಗೆ ಹಣ ಪಾವತಿಸುವ ಸಂಬಂಧ ಭಾರೀ ಅವ್ಯವಹಾರ ನಡೆದಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ದೂರಿನ ಬಗ್ಗೆ ಕೈಗೊಂಡಿರುವ ಕ್ರಮದ ಬಗ್ಗೆ ವಿವರವಾದ ಸಂಪೂರ್ಣ ವರದಿ ನೀಡುವುದು?

## ಕೆರೆಗಳಿಗೆ ನೀರು ತುಂಬಿಸುವ ಬಗ್ಗೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ):-**

೧೨೧೫ (೧೩೭೪) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕು, ಕಸಬಾ ಹೋಬಳಿ ವ್ಯಾಪ್ತಿಯಲ್ಲಿ ಹೊಸದಾಗಿ ಎಷ್ಟು ಕೆರೆಗಳಿಗೆ ಹೇಮಾವತಿ ನಾಲೆಯಿಂದ ನೀರು ತುಂಬಿಸಲಾಗುತ್ತಿದೆ; ಸದರಿ ಕಾಮಗಾರಿಯು ಯಾವ ಹಂತದಲ್ಲಿದೆ;

(ಆ) ಈ ಕಾಮಗಾರಿಗೆ ತಗಲುವ ವೆಚ್ಚ ಎಷ್ಟು; ಹಾಲಿ ಎಷ್ಟು ಹಣ ಬಿಡುಗಡೆಗೊಳಿಸಲಾಗಿದೆ;

(ಇ) ಈ ವಿಸ್ತೃತ ಯೋಜನಾ ವರದಿಯಲ್ಲಿ ಎಸ್. ಕೊಡಗೀಹಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ನಂದಿಪುರದ ಕೆರೆ, ಎಸ್.ಕೊಡಗೀಹಳ್ಳಿ, ಚಿಕ್ಕಕೆರೆ, ಸೇರಿದೆಯೇ; ಇಲ್ಲವಾದಲ್ಲಿ ಸೇರಿಸದಿರಲು ಕಾರಣಗಳೇನು;

(ಈ) ಈ ಕಾಮಗಾರಿಯನ್ನು ನಿರ್ವಹಿಸುತ್ತಿರುವ ಗುತ್ತಿಗೆದಾರರು ಯಾರು? (ಸಂಪೂರ್ಣ ತಾಂತ್ರಿಕ ಯೋಜನಾ ವರದಿಯೊಂದಿಗೆ ಮಾಹಿತಿ ನೀಡುವುದು)

## ಒತ್ತುವರಿಯಾದ ಸರ್ಕಾರಿ ಜಮೀನನ್ನು ತೆರವುಗೊಳಿಸಿರುವ ಬಗ್ಗೆ

**ಶ್ರೀ ನಾರಾಯಣ ಸಾ.ಬಾಂಡಗೆ (ವಿಧಾನಸಭೆಯಿಂದ ಚುನಾಯಿತರಾದವರು):-**

೧೨೧೬ (೧೨೧೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ವಿಜಯಪುರ, ಬಾಗಲಕೋಟೆ ಮತ್ತು ಗದಗ ಜಿಲ್ಲೆಯ ಸುತ್ತಮುತ್ತ ಒತ್ತುವರಿ ತೆರವುಗೊಳಿಸಿರುವ ಸರ್ಕಾರಿ ಜಮೀನನ್ನು ಯಾವ ಯಾವ ಇಲಾಖೆ ಮತ್ತು ಸ್ವಾಯತ್ತ ಸಂಸ್ಥೆಗಳಿಗೆ, ಎಷ್ಟೆಷ್ಟು ಎಕರೆಯನ್ನು ಯಾವ ಯಾವ ನಿಬಂಧನೆಗಳೊಂದಿಗೆ ಯಾವ ಯಾವ ದಿನಾಂಕಗಳಂದು ಮಂಜೂರು ಮಾಡಲಾಗಿದೆ;

(ಆ) ಇಲಾಖೆಗಳ ನಿಯಮಗಳ್ವಂಯ ಸದರಿ ಜಮೀನುಗಳನ್ನು ಅಭಿವೃದ್ಧಿಪಡಿಸಿರುತ್ತಾರೆ; ಅಭಿವೃದ್ಧಿ ಪಡಿಸದೇ ಇರುವ ಸಂಸ್ಥೆಗಳಿಂದ ಜಮೀನನ್ನು ಹಿಂದಕ್ಕೆ ಪಡೆಯಲು ಸರ್ಕಾರ ಈವರೆವಿಗೂ ಕೈಗೊಂಡಿರುವ ಕ್ರಮಗಳೇನು ಮಾಹಿತಿ ನೀಡುವುದು?

**ವಿ. ಶ್ರೀಶ್**

ಕಾರ್ಯದರ್ಶಿ

ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59/ಕಾ.ಸೂ. 0 331/1,000 ಪ್ರತಿಗಳು/26–03–2016